
ನಮ್ಮ ಮಾನಸ

ಸಂಪುಟ : 5 ಆಗಸ್ಟ್ 2011 ಸಂಚಿಕೆ : 4



ಕರ್ನಾಟಕ ಉತ್ಕೃಷ್ಟ ಕಲೆ, ಸಾಹಿತ್ಯ ಸಂಸ್ಕೃತಿ...ಗಳ ಬೀಡು

ಸಾವಿರಾರು ವರ್ಷಗಳ ಶ್ರೇಷ್ಠ ಸಂಸ್ಕೃತಿ, ಶ್ರೀಮಂತ ಕಲೆ, ಅನುಪಮ ಸಾಹಿತ್ಯ ಭಂಡಾರ ಹೊಂದಿರುವ ಕರ್ನಾಟಕದ ವೈಭವವನ್ನು ದೇಶದ ಉದ್ದಗಲಕ್ಕೂ ಮೆರೆಸಿದ ಹಿರಿಮೆ ಕನ್ನಡಿಗರದು. ಸಾಮಾಜಿಕ ಸಮಾನತೆ, ಹೃದಯ ವೈಶಾಲ್ಯತೆಯ ಮೂಲಸೆಲೆಯಲ್ಲಿ ಮೂಡಿಬಂದ ನಾಡಿನ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳು ಸದಾ ಪ್ರಸ್ತುತ. ಅವು ಮನುಕುಲಕ್ಕೆ ನೀಡಿದ ಅಭೂತಪೂರ್ವ ಕೊಡುಗೆಗಳು.

ದೇಶದ ಕಲೆ, ಸಾಹಿತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನಗಳಂತಹ ಮಹತ್ತರ ರಂಗಗಳಲ್ಲಿ ಮಹೋನ್ನತ ಕಾಣಿಕೆ ನೀಡಿದ ಕರ್ನಾಟಕವನ್ನು ಮತ್ತಷ್ಟು ಸಮೃದ್ಧಗೊಳಿಸಬೇಕೆಂಬುದೇ ಸರ್ಕಾರದ ದೃಢ ಸಂಕಲ್ಪ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಒತ್ತು ನೀಡಿರುವ ಸರ್ಕಾರ ಉತ್ತರ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಿ ಕಾರ್ಯಪ್ರವೃತ್ತವಾಗಿದೆ.

ಕರ್ನಾಟಕ ವಾರ್ತೆ

ನಮ್ಮ ಮಾನಸ

ಆಗಸ್ಟ್ 2011

ಸಂಪುಟ : 5 ಸಂಚಿಕೆ : 4

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'



ಸಂಪಾದಕೀಯ

ಅವಳಿಗೆ ಆರೋಗ್ಯವೂ ಬೇಡವೆ!

ಭಾರತದ ಸಂದರ್ಭದಲ್ಲಿ ಸಾರ್ವಜನಿಕ ಆರೋಗ್ಯದ ಬಗ್ಗೆ ಇರುವ ನಿರ್ಲಕ್ಷ್ಯದಿಂದಾಗಿ ಬಡತನದ ರೇಖೆಯ ಕೆಳಗೆ ಇರುವ ಮಹಿಳೆಯರ ಬದುಕು ಅಸಹನೀಯವಾಗಿದೆ. ಒಂದು ಕಡೆ 'ಸೂಪರ್ ಸ್ಪೆಷಾಲಿಟಿ' ಆಸ್ಪತ್ರೆಗಳು ಬೇರೆ ಬೇರೆ ದೇಶಗಳ ಶ್ರೀಮಂತರನ್ನು ಆಕರ್ಷಿಸಲು, ಉನ್ನತ ಮಟ್ಟದ ತಂತ್ರಜ್ಞಾನ ವ್ಯವಸ್ಥೆಯ ಚಿಕಿತ್ಸೆಯನ್ನು ನೀಡಲು ಪೈಪೋಟಿ ನಡೆಸುತ್ತಿದ್ದರೆ, ಭಾರತದ ಲಕ್ಷಾಂತರ ಮಂದಿ ಬಡವರು ಉಪವಾಸದಿಂದಾಗಿ, ಹೊಟ್ಟೆಗೆ ಸರಿಯಾದ ಪೌಷ್ಟಿಕ ಅಹಾರ ಸೇವಿಸದೇ ಸದಾ ಅನಾರೋಗ್ಯದಿಂದ ಬಳಲುವಂತಾಗಿದೆ. ಕುಟುಂಬದ, ಕೊನೆಗೆ ಮಕ್ಕಳ ರಕ್ಷಣೆ ಮಾಡಲೇಬೇಕಾದ ಮಹಿಳೆಯರು ಅಪೌಷ್ಟಿಕತೆಯಿಂದಾಗಿ ನಾನಾ ರೋಗಗಳಿಗೆ ತುತ್ತಾಗಿ ಸದ್ದಿಲ್ಲದೇ ಸಾವನ್ನಪ್ಪುತ್ತಾರೆ.

ಬೆಂಗಳೂರಿನ ಮಹಾನಗರ ಪಾಲಿಕೆ ಈಗ 25 ಹೆರಿಗೆ ಆಸ್ಪತ್ರೆಗಳನ್ನು, 28 ಆರೋಗ್ಯ ಕೇಂದ್ರಗಳನ್ನು, ಆರು ರೆಫರಲ್ ಆಸ್ಪತ್ರೆಗಳನ್ನು, 10 ಉಪ ಆರೋಗ್ಯ ಕೇಂದ್ರಗಳನ್ನು ರಾಜ್ಯ ಸರ್ಕಾರಕ್ಕೇ ವಹಿಸಿಕೊಡಲು ನಿರ್ಧರಿಸಿದೆ. ಏಕೆಂದರೆ ಇಲ್ಲಿ ಎಲ್ಲೂ ಸರಿಯಾದ ವೈದ್ಯರೇ ಇಲ್ಲ. ನೇಮಕಾತಿಯ ಅಧಿಕಾರ ಇರುವುದು ಸರ್ಕಾರಕ್ಕೆ ಮಾತ್ರ. ಎಷ್ಟು ಬಾರಿ ಕೇಳಿದರೂ ಸರ್ಕಾರ ನೇಮಕಾತಿ ಮಾಡದೇ ಇರುವುದರಿಂದ ಆಸ್ಪತ್ರೆಗಳನ್ನು ನಡೆಸುವುದು ಅಸಾಧ್ಯ ಎಂದು ಬೆಂಗಳೂರು ನಗರ ಪಾಲಿಕೆ ನಿರ್ಧರಿಸಿದೆ. ನಗರದಲ್ಲಿಯೇ ಈ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಹಳ್ಳಿಗಳನ್ನು ಕೇಳುವವರು ಯಾರು?

ಸೇವಾ ಸೌಲಭ್ಯಗಳನ್ನು ತಾನು ಒದಗಿಸದೆ, ಯೋಜನೆಗಳು ಮತ್ತು ಸೌಲಭ್ಯಗಳನ್ನು ಒದಗಿಸುವವರಿಗೆ ಮಧ್ಯಸ್ಥಿಕೆ ವಹಿಸುತ್ತಿದೆಯೇ ಹೊರತು ನೇರವಾಗಿ ಜವಾಬ್ದಾರಿಯನ್ನು ವಹಿಸುವಲ್ಲಿ ಸರ್ಕಾರ ಸೋಲುತ್ತಿದೆ. ಹೈದರಾಬಾದ್ ಸ್ತ್ರೀವಾದಿ ಲೇಖಕಿ ಸೂಸಿತಾರು ಹೇಳುವ ಹಾಗೆ "ಯುರೋಪಿನಲ್ಲಿ ಇರುವ ಹಾಗೆ ಜನರ ಆರೋಗ್ಯದ ಜವಾಬ್ದಾರಿ ಸರ್ಕಾರದ್ದು ಎನ್ನುವ ಕಲ್ಪನೆ ನಮ್ಮಲ್ಲಿ ಇಲ್ಲ. ಜೊತೆಗೆ ಆರೋಗ್ಯ ಒಂದು ಹಕ್ಕು ಎನ್ನುವ ಕಲ್ಪನೆ ಭಾರತದ ರಾಜಕೀಯ, ಸಂಸ್ಕೃತಿಯ ಭಾಗವೇ ಆಗಿಲ್ಲ." ಹಾಗಾಗಿಯೇ ದುಡ್ಡಿದ್ದವರಿಗೆ ಮಾತ್ರ ಆರೋಗ್ಯ, ಔಷಧೋಪಚಾರ.

ಗ್ರಾಮೀಣ ಪ್ರದೇಶದಲ್ಲಿ ಕೈಗೆ ಎಟುಕುವ ಆರೋಗ್ಯ ಸೇವೆಗಳೇ ಕಡಿಮೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬರಿಯ 'ವ್ಯಾಕ್ಸಿನೇಶನ್'ಗೆ ಮಾತ್ರ ಬಳಕೆಯಾಗುತ್ತವೆ. ಸೌಲಭ್ಯಗಳಿಲ್ಲ; ವೈದ್ಯರಂತೂ ಕಾಣುವುದಕ್ಕೇ ಸಿಗುವುದಿಲ್ಲ. ಇನ್ನು ಉಚಿತ ಔಷಧಿಗಳು ಸಿಗುವುದಾದರೂ ಎಲ್ಲಿಂದ? ವಿಧಿಯಿಲ್ಲದೇ ಖಾಸಗಿ ಆಸ್ಪತ್ರೆಗಳೇ ಕೊನೆಗೆ ಅವರ ಆಯ್ಕೆಯಾಗಬೇಕಾಗುತ್ತದೆ. ಅದಕ್ಕಾಗಿ ಸಾಲ–ಸೋಲಗಳಿಗೆ ಬಲಿಯಾಗುವ ಮಹಿಳೆಯರ ದೈನೇಸಿ ಸ್ಥಿತಿಯನ್ನು ಕೂಡಾ ವೈದ್ಯಕೀಯ ವ್ಯವಸ್ಥೆ ಬಳಸಿಕೊಳ್ಳುತ್ತಿದೆ. 'ಕ್ಲಿನಿಕಲ್ ಟ್ರಯಲ್ಸ್'ಗಳಿಗೆ ಹೆಂಗಸರು ಬಲಿಯಾಗುತ್ತಿರುವುದು ಹೀಗೆಯೇ. ಹೊಸ ಔಷಧಿಗಳಿಗೆ ಒಪ್ಪಿಗೆ ಪಡೆಯುವುದಕ್ಕೋಸ್ಕರ ಔಷಧ ಕಂಪನಿಗಳು ಈ ಕ್ಲಿನಿಕಲ್ ಟ್ರಯಲ್ ನಡೆಸುತ್ತವೆ. ಔಷಧಗಳ ಸಮರ್ಥತೆಯನ್ನು ದೃಢೀಕರಿಸುವುದಕ್ಕಾಗಿ ಮಾಡುವ ಈ ಪರೀಕ್ಷೆಯನ್ನು ಮನುಷ್ಯರ ಮೇಲೆ ನಡೆಸಲಾಗುತ್ತದೆ. ಈ ಪ್ರಯೋಗ ಪರೀಕ್ಷೆಗೆ ಸಂಬಂಧಿಸಿದಂತೆ ಅನೇಕ ಕಾನೂನುಗಳು ಇದ್ದಾಗ್ಯೂ ಬಹಳಷ್ಟು ಬಡ ಗ್ರಾಮೀಣ, ಆದಿವಾಸಿ ಮಹಿಳೆಯರು ಈ ಟೆಸ್ಟ್‌ಗಳಿಗೆ ಒಳಗಾಗಿ ಸತ್ತು ಹೋಗಿರುವುದು ಆತಂಕಕಾರಿ ಸಂಗತಿಯಾಗಿದೆ. ಆಂಧ್ರಪ್ರದೇಶ ಹಾಗೂ ಗುಜರಾತ್‌ನಲ್ಲಿ 10ರಿಂದ 14 ವರ್ಷದ ಆದಿವಾಸಿ ಹೆಣ್ಣುಮಕ್ಕಳ ಮೇಲೆ ಸರ್ವಿಕಲ್ ಕ್ಯಾನ್ಸರ್ ತಡೆಗಟ್ಟಲು ಕಂಡುಹಿಡಿದ 'ಹ್ಯೂಮನ್ ಪ್ಯಾಪಿಲೋಮ ವೈರಸ್'ಅನ್ನು ಪ್ರಯೋಗಿಸಲಾಯಿತು. ಈ ಪ್ರಯೋಗದಲ್ಲಿ ನಡೆದ ತಪ್ಪಿನಿಂದಾಗಿ ಈ ವ್ಯಾಕ್ಸಿನ್ ಹಾಕಲ್ಪಟ್ಟ ಎಲ್ಲಾ ಹುಡುಗಿಯರೂ ಸತ್ತು ಹೋದರು!

2010ರಲ್ಲಿ 'ಸಮ' ಎನ್ನುವ ಮಹಿಳಾ ಆರೋಗ್ಯ ಹಕ್ಕುಗಳ ಸಂಸ್ಥೆ ನಡೆಸಿದ ಅಧ್ಯಯನ ಈ ವಿಚಾರದ ಮೇಲೆ ಬೆಳಕು ಚೆಲ್ಲಿದೆ. ಈ ಪ್ರಯೋಗ ನಡೆಸುವ ಮೊದಲು ಎಲ್ಲಾ ವಿಚಾರ ತಿಳಿಸಿ ಅವರಿಂದ ಒಪ್ಪಿಗೆ ಪಡೆಯಬೇಕು. ಅವರ ಆರೋಗ್ಯದ ಸಮೀಕ್ಷೆ ನಡೆಸಬೇಕು. ಈ ಹುಡುಗಿಯರು ಅಪೌಷ್ಟಿಕತೆಯಿಂದ ಬಳಲುತ್ತಿರುವುದನ್ನು ಗಮನಿಸದೇ ಇಂತಹ ಅಪಾಯಕಾರಿ ಪ್ರಯೋಗವನ್ನು ಅವರ ಮೇಲೆ ಪ್ರಯೋಗಿಸಿವೆ. ಹೀಗೆ ಕಂಪನಿಯ ಲಾಭದ ಹುಚ್ಚಾಟ, ಸರ್ಕಾರದ ನಿರ್ಲಕ್ಷ್ಯಗಳು ಅಸಹಾಯಕ ಮಹಿಳೆಯರನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ. 'ಸಮ' ಸಂಸ್ಥೆಯ ಅಧ್ಯಯನದಿಂದಾಗಿ ಕೇಂದ್ರ ಸರ್ಕಾರ ವಿಚಾರಣಾ ಆಯೋಗವನ್ನೇನೋ ನೇಮಿಸಿತು. ಸಾವಿಗೆ ಇಂಥದೇ ಕಾರಣ ಎಂದು ಹೇಳಲಾಗದಿದ್ದರೂ ಪ್ರಯೋಗ ಪರೀಕ್ಷೆಯ ಯೋಜನೆ ಹಾಗೂ ಕಾರ್ಯರೂಪದಲ್ಲಿ ಕೆಲವು ಸಣ್ಣ–ಪುಟ್ಟ ದೋಷಗಳು ಇವೆಯೆಂದು ಸರ್ಕಾರದ ಆಯೋಗ ವರದಿ ಸಲ್ಲಿಸಿತು. ಈ ಸಣ್ಣ–ಪುಟ್ಟ ದೋಷಗಳೇ ಮಹಿಳೆಯರ ಬದುಕು, ಸಾವಿನ ಜೊತೆ ಆಟವಾಡುತ್ತಿರುವುದು.

ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಆಹಾರ, ವಸತಿ, ಆರೋಗ್ಯ, ಕೆಲಸ–ಇಂತಹ ಮೂಲಭೂತ ಸೌಕರ್ಯಗಳಿಗೇ ನಾವಿನ್ನೂ ಹೋರಾಟ ನಡೆಸಬೇಕಾಗಿರುವುದು ವಿಷಾದದ ಸಂಗತಿ. ಇದು ರಾಜಕೀಯ

ಇಚ್ಛಾಶಕ್ತಿಯ ಕೊರತೆಯನ್ನು ಸೂಚಿಸುತ್ತದೆ. ಮಹಿಳೆಯರ ಆರೋಗ್ಯವನ್ನೇ ಪಣವಾಗಿ ಇಡುವಂತಹ ಇಂತಹ ರಾಜಕೀಯ ಸಂಸ್ಕೃತಿ ನಮಗೆ ಬೇಕೆ?

ಅವಳ ಸುತ್ತಲೇ ಗಿರಕಿ ಹೊಡೆಯುತ್ತಾ...

ಹುಡುಗಿಯರ ವಿವಾಹದ ವಯಸ್ಸು ಹದಿನೆಂಟು ಆಗಿರಬೇಕೆ ಅಥವಾ ಇಪ್ಪತ್ತೊಂದು ಆಗಿರಬೇಕೆ ಎಂಬುದು ಈಗ ತೀವ್ರವಾಗಿ ಚರ್ಚಿತವಾಗುತ್ತಿರುವ ವಿಚಾರವಾಗಿದೆ. ಪೋಷಕರು ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿಗಳಿಗೆ ಹೈಕೋರ್ಟ್ ನೀಡಿದ ಆದೇಶದಿಂದಾಗಿ ಹಲವಾರು ಪರ-ವಿರೋಧಗಳು ವ್ಯಕ್ತವಾಗುತ್ತಿವೆ. ಯುವತಿಯರ ಮದುವೆ ವಯಸ್ಸು ಇಪ್ಪತ್ತೊಂದು ಎನ್ನುವುದನ್ನು ಸಂಸತ್ತು ತಿದ್ದುಪಡಿ ಮಾಡುವ ಮೊದಲೇ ಡಾ. ಕೆ. ಭಕ್ತವತ್ಸಲ ನೇತೃತ್ವದ ವಿಭಾಗೀಯ ಪೀಠ ನೀಡಿರುವ ತೀರ್ಪು, ವ್ಯಕ್ತಪಡಿಸಿದ ಅಭಿಪ್ರಾಯಗಳು ಹಾಗೂ ಹಿಂದೂ ವಿವಾಹ ಕಾಯ್ದೆಯ 5ನೇ ಕಲಮನ್ನು ಅರ್ಥೈಸಿರುವ ರೀತಿಯಿಂದಾಗಿ ವಿವಾಹದ ವಯಸ್ಸಿನ ವಿಚಾರ ವಿವಾದಕ್ಕೀಡು ಮಾಡಿದೆ.

ಯುವತಿಯರಿಗೆ ಪ್ರಬುದ್ಧತೆ ಇರುವುದಿಲ್ಲ, ಹಿಂದೂ ವಿವಾಹ ಕಾಯ್ದೆಯ 5ನೇ ಕಲಮ್‌ನಲ್ಲಿ ಪೋಷಕರ ಅನುಮತಿ ಬೇಕೇ, ಬೇಡವೇ ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣವಿಲ್ಲ, ಕಾನೂನು ಬದ್ಧವಾಗಿ ಮದುವೆಯ ವಯಸ್ಸು ಹುಡುಗಿಗೆ 18, ಹುಡುಗನಿಗೆ 21 ಎಂದು ಇದ್ದರೂ 'ಕಾನೂನು ಬದ್ಧ' ಎಂಬುದರ ಬಗ್ಗೆ ವಿಶ್ಲೇಷಣೆ ಇಲ್ಲ, 'ಕಾನೂನು ಬದ್ಧ' ಎಂಬುದನ್ನು 'ಪೋಷಕರ ಅನುಮತಿ ಅಗತ್ಯ' ಎಂದು ಅರ್ಥೈಸಿಕೊಳ್ಳಬಹುದೇ ಎಂಬ ಹಿನ್ನೆಲೆಯಲ್ಲಿ, ವಿವಾಹವಾಗಿದ್ದರೂ ಅದನ್ನು ಅಸಿಂಧುಗೊಳಿಸಿ ಈಗಾಗಲೇ ಏಳು ಯುವತಿಯರನ್ನು ಪಾಲಕರ ಬಳಿ ವಾಪಾಸು ಕಳಿಸಿ ಎಂದು ಹೈಕೋರ್ಟ್ ಆದೇಶಿಸಿದೆ. **ಇಲ್ಲಿ ಅನೇಕ ಪ್ರಶ್ನೆಗಳಿವೆ:**

ಕಾನೂನಿನ ಚೌಕಟ್ಟಿನಲ್ಲಿ ವಿವಾಹ ಎನ್ನುವುದು ಕುಟುಂಬದ ಪ್ರಶ್ನೆಯೇ ಅಥವಾ ಇಬ್ಬರು ವ್ಯಕ್ತಿಗಳ ಪ್ರಶ್ನೆಯೇ? ಕೊನೆಗೆ ಜೊತೆಯಲ್ಲಿ ಬದುಕ ಬೇಕಾದವರು ವಿವಾಹಿತರೇ ಆಗಿರುವುದರಿಂದ ಕುಟುಂಬದ ಒತ್ತಡಕ್ಕೆ ನ್ಯಾಯಾಲಯ ಮಣಿಯುವುದು ಸರಿಯೇ? ಪ್ರಬುದ್ಧತೆಯ ಹೆಸರಿನಲ್ಲಿ ಈಗಾಗಲೇ ಮದುವೆಯಾಗಿರುವ ಹೆಣ್ಣುಮಕ್ಕಳನ್ನು ಅವರು ಇಚ್ಛಿಸದಿದ್ದರೂ ವಾಪಸ್ಸು ಪಾಲಕರ ಬಳಿ ಕಳಿಸಿದರೆ ಅವರಿಗೆ ಕುಟುಂಬದಿಂದ ಮೊದಲಿನ ಪ್ರೀತಿ ದೊರೆಯುತ್ತದೆಯೆ? ಕುಟುಂಬವನ್ನು ಧಿಕ್ಕರಿಸಿ ಮದುವೆಯಾಗಿರುವುದರಿಂದ ಯಾವ ರೀತಿಯ ಹಿಂಸೆಗೆ ಆಕೆ ಬಲಿಯಾಗಬಹುದು? ಜಾತಿ, ಧರ್ಮದ ಹಿನ್ನೆಲೆಯಲ್ಲಿ 'ಮರ್ಯಾದಾ' ಹತ್ಯೆಗಳು ನಡೆಯುವುದಿಲ್ಲ ಎಂದು ಹೇಗೆ ನಂಬುವುದು? ಹೆಣ್ಣು ಮಕ್ಕಳಿಗೆ ಇಪ್ಪತ್ತೊಂದು ವಯಸ್ಸಿನಲ್ಲಿ ವಿವಾಹವಾಗುವ ಕಾಯ್ದೆ ಸಂಸತ್ತಿನಲ್ಲಿ ತಿದ್ದುಪಡಿಯಾಗುವ ಮೊದಲೇ ನ್ಯಾಯಾಲಯ ಇಂತಹ ತೀರ್ಪು ನೀಡುವುದು ಜನರಿಗೆ ಯಾವ ಸಂದೇಶವನ್ನು ರವಾನಿಸುತ್ತದೆ? 'ಕಾನೂನು ಬದ್ಧ' ಎಂಬುದನ್ನು 'ಪೋಷಕರ ಅನುಮತಿ' ಎಂದು ಅರ್ಥೈಸುವುದರಿಂದ, ವ್ಯಾಖ್ಯಾನಿಸುವುದರಿಂದ ಈಗಾಗಲೇ ವಿವಾಹವಾಗಿರುವ ಹೆಣ್ಣುಮಕ್ಕಳ ಆಯ್ಕೆಯ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಿತ್ತುಕೊಂಡಂತೆ ಆಗುವುದಿಲ್ಲವೇ?

ಪ್ರೇಮ ವಿವಾಹಗಳು ಹೆಚ್ಚುತ್ತಿವೆ, ಇಂತಹ ವಿವಾಹಗಳು ದುರಂತಕ್ಕೆ ಎಡೆ ಮಾಡಿಕೊಡುತ್ತಿವೆ, ಹೆಣ್ಣುಮಕ್ಕಳ ಮೇಲಿನ ಹಿಂಸೆಯನ್ನು ಹೆಚ್ಚಿಸುತ್ತಿವೆ ಎಂಬುದನ್ನು ನಾವು ವಿಶಾಲವಾದ ಚೌಕಟ್ಟಿನಲ್ಲಿ ಅರ್ಥಮಾಡಿಕೊಳ್ಳುವ ಅಗತ್ಯ ಕೂಡಾ ಇದೆ. ಪೋಷಕರ ಅನುಮತಿ ಇದ್ದ ಮಾತ್ರಕ್ಕೆ ಹುಡುಗಿ ಸುಖವಾಗಿ ಇರುತ್ತಾಳೆಂದೇನೂ ಅಲ್ಲ. ಮದುವೆ ಮಾಡಿಕೊಟ್ಟ ಮೇಲೆ ಮುರಿದು ಬೀಳುವ ಮದುವೆಗೂ ಪೋಷಕರು ಬೇಜವಾಬ್ದಾರಿಯಿಂದ ವರ್ತಿಸಿರುವ ಹಲವಾರು ಪ್ರಕರಣಗಳಿವೆ. ಇಪ್ಪತ್ತೊಂದು ವರ್ಷಕ್ಕೆ ವಿವಾಹ ಕಡ್ಡಾಯ ಮಾಡುವುದರಿಂದ ಸ್ವಲ್ಪ ಮಟ್ಟಿಗೆ ಆಯ್ಕೆಯ ಪ್ರಬುದ್ಧತೆ ಇರಬಹುದಾದರೂ, ಅದೇ ಉತ್ತರವಲ್ಲ. ಸರಕೀಕರಣದ ಮಾಯಾ ಜಗತ್ತಿನಲ್ಲಿ ಎಲ್ಲಾ ಸುಖಗಳೂ ತಕ್ಷಣವೇ ತಮ್ಮದಾಗಬೇಕೆನ್ನುವ ಅಗಾಧವಾದ ಬಯಕೆಯ ಹುಟ್ಟು ಹಾಕುತ್ತಿರುವ ಸಂಸ್ಕೃತಿ ನಮ್ಮ ನಡುವೆ ದಟ್ಟವಾಗಿ ಬೆಳೆಯುತ್ತಿದೆ. ಹಣದ ಜಾಲಕ್ಕೆ, ಲೈಂಗಿಕ ಬಯಕೆಗಳ ಪೂರೈಕೆಯ ಒತ್ತಡಕ್ಕೆ ಯುವಜನಾಂಗ ಒಳಗಾಗುವಂತೆ ಪ್ರೇರಿಸುವ ಸಿನೆಮಾಗಳಿವೆ, ಧಾರಾವಾಹಿಗಳಿವೆ, ಸಾಂಸ್ಕೃತಿಕ ಜಗತ್ತಿದೆ, ಮಾಯಾ ಬಜಾರ್ ಇದೆ. ಇವೆಲ್ಲದರ ನಡುವೆ ಕಳೆದು ಹೋಗುತ್ತಿರುವ ಯುವಕ-ಯುವತಿರಲ್ಲಿ ಶಿಕ್ಷಣ ಮುಗಿಯುವ ಮುನ್ನ, ಉದ್ಯೋಗ ಸಿಗುವ ಮುನ್ನವೇ ಇನ್‌ಫ್ಯಾಚುಯೇಶನ್‌ನಲ್ಲಿ ಪ್ರೀತಿ-ಪ್ರೇಮ-ಪ್ರಣಯ, ವಿವಾಹ ಎಲ್ಲವೂ ಮುಗಿದು ಅಷ್ಟೇ ವೇಗದಲ್ಲಿ ಸಂಬಂಧಗಳು ಹಿಂಸೆಗೆ ತಿರುಗುವುದನ್ನು ಕಾಣುತ್ತಿದ್ದೇವೆ.

ಹಾಗಾಗಿ ಹೆಣ್ಣಿಗೆ ಶಿಕ್ಷಣದ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಾಗಿದೆ ಎಂಬ ಸತ್ಯ ನಮಗೆ ಅರಿವಾಗಬೇಕು. ವಿವಾಹದಲ್ಲಿ ಭದ್ರತೆಯನ್ನು ನಿರೀಕ್ಷಿಸುವುದಕ್ಕಿಂತ, ಮಹಿಳೆಗೆ ಉದ್ಯೋಗದಲ್ಲಿ ಭದ್ರತೆ ಅರಸುವುದನ್ನು ಒಂದು ಮನಸ್ಥಿತಿಯಾಗಿಸುವ ಸಾಮಾಜಿಕ, ಸಾಂಸ್ಕೃತಿಕ ವಾತಾವರಣ ರೂಪಿತವಾಗಬೇಕಿದೆ. ಆಕೆಯ ಬಗ್ಗೆ ಆಕೆಗೇ ಭರವಸೆ ಉಂಟಾಗುವಂತಹ ಒಂದು ವ್ಯಕ್ತಿತ್ವ ರೂಪಿತವಾದಾಗ ಮಾತ್ರ ಹೆಣ್ಣಿನ ಮೇಲೆ ನಡೆಯುವ ವೈವಾಹಿಕ ಹಿಂಸೆಗೆ ಉತ್ತರಗಳು ಸಿಗಬಹುದೇ ಹೊರತು, ಆಕೆಯನ್ನು ಕುಟುಂಬದವರಿಗೆ ಒಪ್ಪಿಸುವುದಾಗಲೀ, ಪ್ರೇಮವಿವಾಹವನ್ನು ಟೀಕಿಸುವುದಾಗಲೀ ಉತ್ತರಗಳಲ್ಲ. ಕಾನೂನಿನ ಕಣ್ಣಿಗೆ ಮಣ್ಣೆರಚಿ ನಡೆಯುತ್ತಿರುವ ಬಾಲ್ಯವಿವಾಹಗಳ ಮತ್ತು ಸಾಮೂಹಿಕ ಮದುವೆಗಳಲ್ಲಿ ರಾಜಕಾರಣಿಗಳ, ಪ್ರಬುದ್ಧರ ಕಣ್ಣೆದುರೇ ನಡೆಯುವ ಬಾಲ್ಯವಿವಾಹಗಳಿಗೇನು ಹೇಳಬೇಕು? ವಿವಾಹಕ್ಕೆ ಗಂಡು-ಹೆಣ್ಣು ಇಬ್ಬರೂ ಕಾರಣರಾದರೂ ಆಲೋಚನೆ, ತೀರ್ಮಾನ, ತೀರ್ಪುಗಳು, ರಕ್ಷಣೆಯ ನೆಪದಲ್ಲಿ ಹೆಣ್ಣಿನ ಸುತ್ತಲೇ ಗಿರಕಿ ಹೊಡೆಯುವುದರ ಹಿಂದಿರುವ ಮನಸ್ಸುಗಳು ಎಂಥವು? ಇಪ್ಪತ್ತೊಂದು ವರ್ಷಕ್ಕೆ ಹೆಣ್ಣಿನ ವಿವಾಹ ಕಡ್ಡಾಯದ ಕಾಯ್ದೆಯ ತಿದ್ದುಪಡಿಯಿಂದ ಆಕೆಯ ಶಿಕ್ಷಣ, ಉದ್ಯೋಗಾವಕಾಶಗಳಿಗೆ ಸ್ಪೇಸ್ ಸಿಗುವುದರಿಂದ, ಆಕೆ ಆಯ್ಕೆಯ ಪ್ರಬುದ್ಧತೆ ತೋರಿಸಬಹುದೆನ್ನುವ ಹಿನ್ನೆಲೆಯಲ್ಲಿ ಕಾಯ್ದೆ ತಿದ್ದುಪಡಿಯಾಗುವುದನ್ನು 'ಮಾನಸ' ಸ್ವಾಗತಿಸುತ್ತದೆ. ●

ಒಳಗಿನ ಪುಟಗಳಲ್ಲಿ....

ಓದುಗರಲ್ಲಿ ಮನವಿ

ಜಾಗತೀಕರಣದ ಇಂದಿನ ಸಂದರ್ಭದಲ್ಲಿ 'ನಮ್ಮ ಮಾನಸ'ದಂತಹ ಸಣ್ಣ ಪತ್ರಿಕೆಗೆ ಓದುಗರೇ ಜೀವಾಳ. ಪತ್ರಿಕೆಗೆ ಚಂದಾದಾರರಾಗುವ ಮೂಲಕ ಹಾಗೂ ಈ ವರ್ಷದ ಚಂದಾ ನವೀಕರಿಸುವ ಮೂಲಕ ಪತ್ರಿಕೆಯ ಪ್ರಕಟಣೆಗೆ ಸಹಕಾರ ನೀಡಿ.



‘ಪದ್ಮರಾಗ’ದ ಸುತ್ತಮುತ್ತ:

ಒಂದು ಸಾಂಸ್ಕೃತಿಕ ನೋಟ

■ *ಡಾ. ಬಿ.ಎಸ್. ಸುಮಿತ್ರಾಬಾಯಿ*

ವಸಾಹತು ಬಂಗಾಳದ ಮುಸ್ಲಿಂ ಸಮುದಾಯದ ತಳಮಳ ಹಾಗೂ ಮಹಿಳಾ ವಿಮೋಚನೆ ಎರಡೂ ಬಲವಾಗಿ ಜೋಡಿಸಿಕೊಂಡಿರುವ ರೀತಿಯಲ್ಲಿ ಬೇಗಂ ರುಕಿಯಾ ಶೇಖಾವತ್ ಹುಸೇನ್ ರಚಿಸಿದ ಕೃತಿ ‘ಪದ್ದೋರಾಗ್’ (ಪದ್ಮರಾಗ) 1924ರಲ್ಲಿ ಪ್ರಕಟವಾದಂಥದು–ಎನ್ನುವುದೇ ಇಂದು ನಮ್ಮೊಳಗೆ ಹಲವು ಮಹತ್ವದ ಸಾಂಸ್ಕೃತಿಕ ಪ್ರಶ್ನೆಗಳನ್ನು ಹುಟ್ಟುಹಾಕುವಂಥದು.

- ಮೊದಲಿಗೆ ರುಕಿಯಾ ಹುಸೇನ್‌ರಂಥ ಅಪರೂಪದ ಮುನ್ನೋಟ ವಿದ್ದ ಲೇಖಕಿಯೊಬ್ಬರು ಹೊಮ್ಮಿಬರಲು ಕಾರಣವಾಗಿದ್ದ ಅಂದಿನ ಸಾಂಸ್ಕೃತಿಕ ಸ್ಥಿತಿ ಎಂತಹುದಾಗಿತ್ತು ಎಂಬುದನ್ನು ಗಮನಿಸಬೇಕು. 19ನೆಯ ಶತಮಾನದ ಬಂಗಾಳದಲ್ಲಿ ಮುಸ್ಲಿಂ ಸಮುದಾಯವೇ ಒಟ್ಟಾಗಿ ತೀವ್ರವಾದ ಆಂತರಿಕ ತಳಮಳದಲ್ಲಿತ್ತು. (‘ಮೊಗಲರ ಸಾಮ್ರಾಜ್ಯದಲ್ಲಿ ಈಗ ನೀನಿಲ್ಲ. ಈಗಿರುವುದು ಬಿಳಿಯರ ರಾಜ್ಯ. ಆದ್ದರಿಂದ ನೀನು ಇಷ್ಟಬಂದಂತೆ ನಡೆಯಬಾರದು,’ ಎಂಬ ಎಚ್ಚರದ ನುಡಿ ಈ ಪದ್ಮರಾಗ ಕಾದಂಬರಿಯಲ್ಲೇ ಒಂದೆರಡು ಕಡೆ ಮುಸ್ಲಿಂ ಪಾತ್ರಗಳ ಮೂಲಕ ಹೊರಬರುವುದನ್ನು ಕಾಣಬಹುದು.) ಸುಧಾರಣಾವಾದಿ ಹಿಂದೂ ಮೇಲ್ವರ್ಗದ ರಾಗಕ್ಕೆ ಬ್ರಿಟಿಷರು ತಾಳಹಾಕುವ ಬಗೆ, ಮುಸ್ಲಿಮ್ ಜನಾಂಗಕ್ಕೆ ಅಲ್ಪಸಂಖ್ಯಾತತೆಯ, ಬೇರಿಲ್ಲದ ಆತಂಕವನ್ನು ಉಂಟುಮಾಡುತ್ತಿದ್ದ ಸ್ಥಿತಿ ಅದು. Central National Muhammadan Association ರೀತಿಯ ಸಂಘಟನೆಯ ಮೂಲಕ ಮುಸ್ಲಿಂ ಸಮುದಾಯದವರ ಸುಧಾರಣೆ, ಹಿತಸಾಧನೆಯ ಯತ್ನಗಳು ಮುಂಚೂಣಿಗೆ ಬರತೊಡಗಿದ್ದವು.

ಮುಸ್ಲಿಂ ಮಹಿಳೆಯರ ಸ್ಥಿತಿ ತುಂಬಾ ಶೋಚನೀಯವಾಗಿತ್ತು. ಕಡ್ಡಾಯವಾಗಿದ್ದ ಪರದಾ ಪದ್ಧತಿಯನ್ನು ಹೆಣ್ಣಿನ ಶೀಲದ ಘನತೆಯ ದ್ಯೋತಕವೆಂದೂ ಶ್ರೀಮಂತವರ್ಗದ ಘನತೆ ಪ್ರತಿಷ್ಠೆಗಳ ಸಂಕೇತ ವೆಂದೂ ತಿಳಿಯಲಾಗಿತ್ತು. ಹೊರಗಿನ ಅಪರಿಚಿತ ಪುರುಷರೆದುರು ಮಾತ್ರವಲ್ಲ, ಸ್ವಂತದ ಸಂಬಂಧಿಕರಾದ ಪುರುಷರೆದುರಲ್ಲೂ ಸ್ತ್ರೀಯರು ಪರದೆಯನ್ನು ಪಾಲಿಸಬೇಕಿತ್ತು. ಬಹುಪತ್ನಿತ್ವದ ದುರಾಚಾರವಂತೂ ಧಾರ್ಮಿಕ ಸಮ್ಮತಿಯೊಂದಿಗೇ ರಾಜಾರೋಷವಾಗಿ ಮಹಿಳೆಯರನ್ನು ದಮನಿಸಿಟ್ಟಿತ್ತು. ಇಂಥ ‘ಕತ್ತಲಯುಗ’ದಲ್ಲಿ ಅಸಾಧಾರಣ ವ್ಯಕ್ತಿತ್ವಗಳ ಮೂವರು ಮಹಿಳೆಯರು ಬಂಗಾಳಿ ಮುಸ್ಲಿಂ ಸಮುದಾಯದಲ್ಲಿ ಹುಟ್ಟಿ ಬಂದು ತಮ್ಮ ಸಮುದಾಯದ ಸುಧಾರಣೆ, ಪ್ರಗತಿಗಳಿಗಾಗಿ ಬಹುವಾಗಿ ಶ್ರಮಿಸಿ ಅಚ್ಚಳಿಯದ ಕುರುಹನ್ನು ಬಿಟ್ಟು ಹೋದರು. ನವಾಬ್ ಫೈಝುನ್ನೀಸಾ, ಕರೀಮುನ್ನೀಸಾ ಖಾನಂ ಚೌಧುರಾಣಿ ಮತ್ತು ಬೇಗಂ ರುಕಿಯಾ ಶೇಖಾವತ್ ಹುಸೇನ್ ಇವರೇ ಆ ಮೂವರು ಮಹಾ–ಮಹಿಳೆಯರು. 1834ರಲ್ಲಿ ಶ್ರೀಮಂತ ಜಮೀನುದಾರ ಮನೆತನದಲ್ಲಿ ಹುಟ್ಟಿದ ಫೈಝುನ್ನೀಸಾ ಖಾಸಗಿ ಶಿಕ್ಷಕರ ಮೂಲಕ ಮನೆಯಲ್ಲೇ ಬಂಗಾಳಿ, ಸಂಸ್ಕೃತ, ಉರ್ದು, ಪರ್ಷಿಯನ್ ಮತ್ತು ಅರಬ್ಬೀಭಾಷೆಗಳನ್ನು ಕಲಿತು ವಿದುಷಿಯಾದರು. ತಂದೆತಾಯಿಯರ ಮರಣದ ನಂತರ ತಾವೇ ಜಮೀನುದಾರರಾಗಿ ದಕ್ಷತೆಯಿಂದ ಆ ಯಜಮಾನಿಕೆಯನ್ನು ನಿಭಾಯಿಸಿದ ಆಕೆ ಮುಸ್ಲಿಂ ಬಾಲಕ, ಬಾಲಕಿಯರಿಗಾಗಿ ಶಾಲೆಗಳನ್ನು, ಮಹಿಳೆಯರಿಗೆ ಹೆರಿಗೆ ಆಸ್ಪತ್ರೆಗಳನ್ನು ಸ್ಥಾಪಿಸಿದಾಕೆ. ಅವರು ನಡೆಸಿದ ಬಹುರೂಪದ ಸಾಮಾಜಿಕ ಸೇವೆಗಾಗಿ ಬ್ರಿಟಿಷ್ ಸರ್ಕಾರ ಆಕೆಗೆ ‘Nawab’ ಎಂಬ ಬಿರುದನ್ನು ದಯಪಾಲಿಸಿತು. ಆದರೆ ಈ ಜಮೀನು ದಾರಿಣಿಯ ಖಾಸಗಿ ಬದುಕು ತುಂಬ ದುಃಖ ಸಂಕಟಗಳದ್ದಾಗಿತ್ತು. ಚೌಧುರಿ ಮೊಹಮ್ಮದ್ ಗಜ್ಞಿಯವರ ಎರಡನೇ ಹೆಂಡತಿಯಾಗಿ ಬಹುಪತ್ನಿತ್ವದ ನಾನಾ ಸಂಕಟಗಳನ್ನು ಆಕೆ ಅನುಭವಿಸಿದ್ದರೂ ಒಮ್ಮೆ ಕೂಡ ಪರದೆಯನ್ನು ಬಿಟ್ಟು ಹೊರಬಂದಿರಲಿಲ್ಲ! 1903ರಲ್ಲಿ ತಾನು ಸಾಯುವ ಮೊದಲು ತನ್ನ ಆಸ್ತಿಯ ಬಹುಭಾಗವನ್ನು ಮುಸ್ಲಿಮರ ಏಳಿಗೆಗಾಗಿ ವಕ್ಫ್‌ಗೆ ವಹಿಸಿಕೊಟ್ಟರು. ಫೈಝುನ್ನೀಸಾ ಮಗ್ಗುಲಲ್ಲೇ ಸಂಭವಿಸಿದ ಕರೀಮುನ್ನೀಸಾ ಖಾನಂ ಚೌಧುರಾಣಿ ಯವರು ರುಕಿಯಾ ಶೇಖಾವತ್ ಹುಸೇನರ ಅಕ್ಕ ಮತ್ತು ಪ್ರಸಿದ್ಧ ಕವಯಿತ್ರಿಯಾಗಿದ್ದರೆ, ರುಕಿಯಾ ಹುಸೇನ್ ಬಂಗಾಲದ ಮೊಟ್ಟಮೊದಲ ಸ್ತ್ರೀವಾದಿಯೆನ್ನಿಸಿಕೊಂಡರು. ಈ ಸೋದರಿ ಯರಿಬ್ಬರೂ ತುಂಬು ಶ್ರೀಮಂತಿಕೆಯ ಮನೆತನ ಹಾಗು ಸಂಪ್ರದಾಯಸ್ಥ ಮುಸ್ಲಿಂ ಹಿನ್ನೆಲೆಯೇ ಎಂಬುದನ್ನು ಗಮನಿಸಬೇಕು. ಪರದಾ ಅಂತೂ ಕಡ್ಡಾಯವೇ ಅಲ್ಲದೆ ಮುಸಲ್ಮಾನ ಮಹಿಳೆಯರಾಗಿ ಕುರಾನ್ ಮತ್ತು ಸ್ತ್ರೀನೀತಿಯ ಧಾರ್ಮಿಕ ಗ್ರಂಥಗಳನ್ನು ಓದುವುದಕ್ಕೆ ಅರಬ್ಬೀ ಮತ್ತು ಪರ್ಷಿಯನ್‌ಗಳನ್ನು ಮಾತ್ರ ಕಲಿಯುವ ಅವಕಾಶವಿತ್ತು. ಮುಸ್ಲಿಮೇತರ ವಿಚಾರಗಳಿಂದ ಅವರ ಮನಸ್ಸು ಕಳಂಕಿತವಾಗದಿರಲಿ ಎಂಬುದಕ್ಕಾಗಿ ಬಂಗಾಳಿ ಹಾಗೂ ಇಂಗ್ಲಿಷ್ ಕಲಿಕೆಗೆ ಬಲವಾದ ನಿಷೇಧವಿತ್ತು. ಆದರೂ ಈ ಇಬ್ಬರು ಸೋದರಿಯರು ತಮ್ಮ ಅಣ್ಣ ಇಬ್ರಾಹಿಂ ಸಬೆರರ ಮೂಲಕ ರಾತ್ರಿಯಲ್ಲಿ, ಮನೆಜನಕ್ಕೆ ತಿಳಿಯದಂತೆ ಗುಟ್ಟಾಗಿ ಬಂಗಾಳಿ ಭಾಷೆಯನ್ನೂ ಇಂಗ್ಲಿಷನ್ನೂ ಕಲಿಯ ಲಾರಂಭಿಸಿದರು.

- ರುಕಿಯಾ ಖಾತೂನ್ ಮುಂದೆ ರುಕಿಯಾ ಶೇಖಾವತ್ ಹುಸೇನರಾಗಿ, ಚಿಂತಕಿ ಹೋರಾಟಗಾರ್ತಿಯಾಗಿ ಬಂಗಾಳಿ ಮುಸ್ಲಿಂ ಮಹಿಳಾ ಚರಿತ್ರೆಯನ್ನು ಹೊಸರೀತಿಯಲ್ಲಿ ನಿರ್ಮಿಸಲು ಈ ಎರಡೂ ಭಾಷೆಗಳು ಆಕೆಗೆ ನೆರವಾದವು. ಆಕೆಯ ಪತಿ ಕೂಡ ಜನಜಾಗೃತಿಯ ಉದ್ದೇಶಕ್ಕೆ ಸಂವಹನೆಗೆ ನಾಡಭಾಷೆಯಾದ ಬಂಗಾಳಿಯಲ್ಲಿಯೇ ಬರೆಯುವ ಬಗ್ಗೆ ಆಕೆಗೆ ಪ್ರೋತ್ಸಾಹಿಸಿದ್ದರು ಎಂಬುದೂ ಬಹುಮುಖ್ಯ. ರುಕಿಯಾ ಅವರ ಇತರ ಕೃತಿಗಳಲ್ಲಿ ‘ಮತಿಚೂರ್’ (1905) ಬಂಗಾಳಿ ಮುಸ್ಲಿಂ ಮಹಿಳೆಯರ ಪ್ರಜ್ಞಾಜಾಗೃತಿಗಾಗಿಯೇ ಬರೆದ ಲೇಖನಗಳ ಸಂಕಲನವಾಗಿದ್ದರೆ, ‘ಅವರೋಧ ಬಾಸಿನಿ’ ಹಿಂದೂ

ಸಮುದಾಯದಲ್ಲೂ ಇದ್ದ ಸ್ತ್ರೀಯರನ್ನು ಪ್ರತ್ಯೇಕಿಸಿಡುವ ಇನ್ನೊಂದು ಬಗೆಯ ಪರದಾ ಪದ್ಧತಿಯ ಬಗ್ಗೆಯೂ ಜನರ ಗಮನ ಸೆಳೆಯುವ ಯತ್ನಮಾಡಿತು. ಹಿಂದೂಗಳ 'ಅವರೋಧ' ಅಂದರೆ 'ಅಂತಃಪುರ'ಗಳೊಳಗೇ ಬಂಧಿತರಾಗಿಬಿಟ್ಟ ಹೆಣ್ಣುಗಳ ಸ್ಥಿತಿಗಿಂತಲೂ ಕೇವಲ ಶರೀರವನ್ನು ಮಾತ್ರ ಮರೆಸಿಡುವ ಮುಸ್ಲಿಂ ಪರದಾ ಪದ್ಧತಿ ಹೆಚ್ಚು ಕ್ಷೇಮಕರವಿತ್ತೆನ್ನುವುದು ರುಕಿಯಾ ಅವರ ವಿಚಾರಗಳಲ್ಲಿ ಒಂದು. ಎಲ್ಲಾ ಮರ್ಯಾದಸ್ತ ಮಹಿಳೆಯರೂ ಒಂದಲ್ಲ ಒಂದು ರೀತಿ ಸಮಾಜದ ಕಣ್ಣುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಪರದೆಯನ್ನು ಪಾಲಿಸಿಯೇ ಪಾಲಿಸುತ್ತಾರೆ. ಮುಸ್ಲಿಮ್ ಮಹಿಳೆಯರು ದೇಹಕ್ಕೆ ಹಿಂಸೆ ಕೊಡದಂಥ ಪರಿಷ್ಕೃತ ಮಾದರಿಯ ಬುರ್ಖಾ ಧರಿಸುವುದು ವಾಸಿ ಎಂದು ಸಾರಿ, ಸ್ವತಃ ಅದನ್ನು ಪಾಲಿಸಿದಾಕೆ ರುಕಿಯಾ. ದೇವರು ಹೆಣ್ಣಿಗೆ ಅಪರೂಪದ ಶಕ್ತಿಗಳನ್ನು ದಯಪಾಲಿಸಿದ್ದಾನೆ. ಆ ಎಲ್ಲ ಶಕ್ತಿ, ಪ್ರತಿಭೆಗಳೂ ಬೆಳೆಯಲು, ಉಪಯೋಗಕ್ಕೆ ಬರಲು ಆಕೆ ಒಳ್ಳೆಯ ಶಿಕ್ಷಣ, ವೈಜ್ಞಾನಿಕ ಶಿಕ್ಷಣವನ್ನು ಪಡೆಯುವುದೂ ಅಲ್ಲಾನ ಮಹಿಮೆಯನ್ನೇ ಕೊಂಡಾಡಿದಂತೆ ಎಂದು ಧರ್ಮದ ಒಳಗಿನಿಂದಲೇ ಸ್ತ್ರೀಯರ ಬಿಡುಗಡೆಗೆ ವ್ಯೂಹತಂತ್ರದಿಂದ ಪರಿಶ್ರಮಿಸಿದ ಮಹಾನ್ ಧೀರ ಮಹಿಳೆ. ಆದರೆ ಒಂದು ಶತಮಾನದ ಹಿಂದಿನ ಕಡು ಸಂಪ್ರದಾಯಸ್ಥ ಮುಸ್ಲಿಂ ಪರಿಸರದಲ್ಲಿ ರುಕಿಯಾಗೆ ತನ್ನದೇ ಧಾರ್ಮಿಕ ಅನಿಷ್ಟಗಳನ್ನು ಪ್ರಶ್ನಿಸಲು, ಸುಧಾರಿಸಲು ಸಾಧ್ಯವಾಗಿತ್ತು. ಇಂದು ಇಪ್ಪತ್ತೊಂದನೆಯ ಶತಮಾನದ ತಸ್ಲೀಮಾ ಅದೇ ನೆಲದಲ್ಲಿ ಕಾಲಿಡಲು ಅಂಜುವ ದುರವಸ್ಥೆ ಎದುರಿಸ ಬೇಕಿರುವುದು ಚರಿತ್ರೆಯ ಬಹುದೊಡ್ಡ ವಿಡಂಬನೆಯೇ ಸರಿ.

- ರುಕಿಯಾ 'ಪದ್ಮೊರಾಗ್' ಕಾದಂಬರಿಯಲ್ಲೂ, ಅದಕ್ಕಿಂತ ಮೊದಲು ಬರೆದು ಪ್ರಕಟಿಸಿದ್ದ ಇಂಗ್ಲಿಷ್ ನೀಳ್ಗತೆ 'ಸುಲ್ತಾನಾಳ ಕನಸು' ಪ್ರತಿಯಲ್ಲೂ ವಾಸ್ತವದಲ್ಲಿ ಎಂದೂ ಸಾಧ್ಯವಾಗಿರದ, ಕಲ್ಪನೆಯಲ್ಲಷ್ಟೇ ಕಟ್ಟಬಹುದಾಗಿದ್ದ ಸಮಾಜದ 'ಆದರ್ಶಪ್ರಾಯ' ಮಾದರಿಗಳನ್ನು ಸೃಷ್ಟಿಸಿರುವುದು ಕುತೂಹಲಕರ ಕಥನತಂತ್ರವಾಗಿರುತ್ತದೆ. ವಿಚಾರವೊಂದನ್ನು ಭಾಷೆಯ ಸಂಜ್ಞೆಗಳ ಮೂಲಕ ಕಟ್ಟಿಕೊಡಲು ಆಕೆಗೆ ಇಂಥ ವಿಶಿಷ್ಟ ರಚನಾತಂತ್ರವನ್ನು ಸೃಷ್ಟಿಸಿಕೊಳ್ಳಬೇಕಾಗಿ ಬಂದಿದ್ದೂ ಅಂದಿನ ಸಾಂಸ್ಕೃತಿಕ ಒತ್ತಡಗಳತ್ತ ಸೂಚನೆ ನೀಡಬಲ್ಲದು.
- ಬ್ರಿಟಿಷ್ ಸರ್ಕಾರವಾಗಲಿ, ಹಿಂದೂ ಆಡಳಿತಗಾರರಾಗಲಿ ಇನ್ನು ತಮ್ಮ ಹಿತವನ್ನು ಕಾಪಾಡಲಾರರು ಎನ್ನುವ ಅಲ್ಪಸಂಖ್ಯಾತರ ಆತಂಕಭಾವದ ತೀವ್ರಪರಿಸ್ಥಿತಿಯಲ್ಲಿ ತಮ್ಮನ್ನು ತಾವು ಸಂಘಟಿಸಿಕೊಳ್ಳಬೇಕು, ತಮ್ಮ ಅಸ್ಮಿತೆಯನ್ನು ಸ್ಥಾಪಿಸಬೇಕು ಎಂಬ ಅರಿವು ಮುಸ್ಲಿಂ ಬುದ್ಧಿಜೀವಿಗಳಿಗೆ (ಬಂಗಾಳದಲ್ಲಿ) ಮೂಡತೊಡಗಿದ್ದು, ಅವರು ತಮ್ಮ ಜನರಿಗೂ ವೈಜ್ಞಾನಿಕ ಚಿಂತನೆ ಬೆಳೆಸಬಲ್ಲ ಶಿಕ್ಷಣದ ಅವಶ್ಯಕತೆಯನ್ನು ಪ್ರಚಾರಕ್ಕೆ ತಂದಿದ್ದರು. ಆದರೆ ಇಸ್ಲಾಂ ತತ್ತ್ವಗಳನ್ನು ನಾಶಪಡಿಸದ ರೀತಿಯಲ್ಲಿ ಈ ಹೊಸ ಶಿಕ್ಷಣವನ್ನು ಒದಗಿಸಬೇಕೆಂಬುದು ಅವರ ವಿಚಾರವಾಗಿತ್ತು. ಈ ಬಗೆಯ ಸುಧಾರಣಾವಾದಿ ಮುಸ್ಲಿಂ ಬುದ್ಧಿಜೀವಿಗಳೆದುರು ತಮ್ಮ ಜನಾಂಗ ಸಮಕಾಲೀನ ಬಿಕ್ಕಟ್ಟುಗಳನ್ನು ಎದುರಿಸಲು ಸಜ್ಜಾಗಬೇಕು ಎಂಬ ಖಚಿತ ದೃಷ್ಟಿಯಿದ್ದರೂ ತಮ್ಮದೇ ಮಹಿಳೆಯರ ಶೋಚನೀಯತೆಯ ಪ್ರಶ್ನೆಯನ್ನು ಅವರೆಂದೂ ಚಿಂತಿಸಿಯೇ ಇರಲಿಲ್ಲ. ರುಕಿಯಾ ಸಾಮಾಜಿಕವಾಗಿ ಪರದಾ ಪದ್ಧತಿ, ಬಹುಪತ್ನಿತ್ವ ಪದ್ಧತಿಗಳು ಎಷ್ಟು ಕುರುಡಾಗಿ ಸ್ತ್ರೀಯರ ಯಾತನಾಮೂಲವಾಗಿವೆ ಎಂಬುದನ್ನು ಗಟ್ಟಿಯಾಗಿ ಹೇಳಲು ಪ್ರಾರಂಭಿಸಿದಾಗಲೇ ಸ್ತ್ರೀಸಮಸ್ಯೆಗಳ ಚರ್ಚೆಗೂ ಅಂದಿನ ಸುಧಾರಣಾವಾದಿಗಳಲ್ಲಿ ಚಾಲನೆ ದೊರೆಯಿತು. ರುಕಿಯಾ ಅಂಥವರ ಚಿಂತನೆಗೂ ವೈದಿಕಧರ್ಮ ನಾಶವಾಗದ ಹಾಗೆ ಸ್ತ್ರೀಯರಿಗೆ ಹೊಸ ಶಿಕ್ಷಣ ಬೇಕೆಂದು ಹಕ್ಕೊತ್ತಾಯಿಸುವ ತಿರುಮಲಾಂಬಾ ವಿಚಾರಕ್ಕೆ ಮಾತ್ರವಲ್ಲ, ಅವರ ಕೆಲವು ಕಾದಂಬರಿಗಳಲ್ಲಿ ಸೃಷ್ಟಿಯಾಗುವ 'ಆದರ್ಶ ಸಮಾಜ'ದ ಕಲ್ಪನೆಗೂ ಸಾಮ್ಯ ಭಾವವಿದೆ ಎಂಬುದು ಆ ಕಾಲದ ಒತ್ತಡದ ವ್ಯಾಖ್ಯಾನವೂ ಆಗಬಹುದು.
- ರುಕಿಯಾ ಉರ್ದು, ಅರಬ್ಬೀ, ಪರ್ಷಿಯನ್‌ಗಳ ಭಾಷಿಕ ದಿಗ್ಬಂಧನದಾಚೆಗೆ ಸರಿದು ಸಮೂಹಭಾಷೆಯಾದ ಬಂಗಾಳಿಯನ್ನು ಬರಹಕ್ಕೆ ಆರಿಸಿಕೊಂಡದ್ದು ಒಂದು ಸ್ಪಷ್ಟವಾದ strategic ಚಲನೆಯಾಗಿತ್ತು. ಈಗ ಜಾಗತೀಕೃತ ಯುರೋಪಿನ ಅತ್ಯಂತ ಮುಂದುವರೆದ ದೇಶ ನೆದರ್‌ಲ್ಯಾಂಡ್ಸ್‌ನ ಉತ್ರೆಖ್ಟ್ ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕಿ ಬರ್ನಿತಾ ಬಾಗ್ಚಿ, ತನ್ನ ಮಾತೃಭಾಷೆಯ ಒಂದು ಸಾಂಸ್ಕೃತಿಕ ಮಹತ್ವವುಳ್ಳ, ಸ್ತ್ರೀವಾದಿ ಸಂಕಥನಕ್ಕೆ ಪೂರಕವಾಗುವಂಥ ಕೃತಿಯೊಂದನ್ನು ಹೊರ ಜಗತ್ತಿಗೆ ಪರಿಚಯಿಸಲು ಇಂಗ್ಲಿಷ್‌ಗೆ ರುಕಿಯಾ ಕೃತಿಯನ್ನು ಭಾಷಾಂತರಿಸಿರುವುದೂ ಲಿಂಗತ್ವ ಅಧ್ಯಯನದ ಬಹುಮುಖ್ಯ ರಾಜನೀತಿ ತಂತ್ರವೇ ಸರಿ. ಆದರೆ ವಸಾಹತೋತ್ತರ ಕಾಲದಲ್ಲಿ ಭಾಷಾಂತರ ಸಿದ್ಧಾಂತಗಳೆಲ್ಲ ದೇಶೀಯ ಸಾಂಸ್ಕೃತಿಕ ಸತ್ವ ಶಕ್ತಿಗಳ ಸ್ಥಳೀಯ ಶೋಧನೆಗೆ ಒತ್ತು ಕೊಡುತ್ತಿರುವ ಈ ಕಾಲದಲ್ಲಿ ಒಂದು ಭಾರತೀಯ ಭಾಷೆಯಿಂದ ಮತ್ತೊಂದಕ್ಕೆ ಭಾಷಾಂತರ ಮಾಡುವ ಪ್ರಯತ್ನಗಳು ನೇರವಾಗಿದ್ದರೆ ಅರ್ಥಪೂರ್ಣವೇ ಹೊರತು ವಸಾಹತುಶಾಹಿ ಭಾಷೆಯಾದ ಇಂಗ್ಲಿಷ್‌ನ ಮೂಲಕ ನಮ್ಮ ಪಕ್ಕದವರ ಕೃತಿಯನ್ನು ನಮ್ಮ ಭಾಷೆಗೆ ತರುವುದರಲ್ಲಿ ಹೆಚ್ಚಿನ ಮಹತ್ವವೇನೂ ಇಲ್ಲ. ತಮಿಳಿಗೆ ವಚನಸಾಹಿತ್ಯದ ಅನುವಾದ ಮಾಡಲು ಬಯಸಿದವರು ಪಕ್ಕದಲ್ಲಿರುವ ಕರ್ನಾಟಕಕ್ಕೆ ಬರದೆ ದೂರದ ಆಮ್‌ಸ್ಟರ್‌ಡಾಮ್‌ನವರೊಬ್ಬರ 'The Lord of Meeting Rivers' ಅನ್ನು ಆಶ್ರಯಿಸುವುದು ಹಾಸ್ಯಾಸ್ಪದವಲ್ಲವೆ?

ಈ ಪುಸ್ತಕ ಅಂದವಾಗಿ, ತಪ್ಪಿಲ್ಲದೆ ಮುದ್ರಿತವಾಗಿದೆ, ವೈಶಾಲಿ ಬಳಸಿರುವ ಭಾಷೆಯೂ ಮುಗ್ಧತೆ, ಬೆರಗು ಕೋಮಲತೆಗಳುಳ್ಳದ್ದಾಗಿದೆ– ಇದೀಗತಾನೇ 'ಅರಂಗೇಟ್ರಂ' ಸಾಧಿಸಿಕೊಂಡ ಎಳೆಯ ನೃತ್ಯಕಲಾವಿದೆಯ ಹಾಗೆ ಈ ಕೃತಿಯಲ್ಲಿ ಎಲ್ಲವೂ 'ಸಮರ್ಪಕ', ಆದರೆ 'ಮಹತ್ವಪೂರ್ಣ'ವೆಂದು ಅನ್ನಿಸಿಕೊಳ್ಳಲು ಇನ್ನೂ ಕೆಲವು ಅಂಶಗಳು ಇರಬೇಕಿತ್ತು. ಈ ಮೇಲೆ ಪ್ರಸ್ತಾಪಿಸಿರುವ ಸಾಂಸ್ಕೃತಿಕ ಹಿನ್ನೆಲೆಯನ್ನು ಚರ್ಚೆಗೆ ತಂದು, ಅನುವಾದಕರಾಗಿ ತಾವು ಯಾವ ತಾತ್ತ್ವಿಕ ಜಾಗದಿಂದ ಈ ಕೃತಿಯನ್ನು ಆಯ್ದು ಅನುವಾದಿಸುತ್ತಿದ್ದೇನೆಂದು ಅವರು ಸ್ಪಷ್ಟಪಡಿಸಬಹುದಿತ್ತು. ಹಾಗೆಯೇ ಬಂಗಾಳಿ–ಇಂಗ್ಲಿಷ್–ಕನ್ನಡ ಎಂಬ ಭಾಷಾ ಷಟಲ್ ಆಟದಲ್ಲಿ ಅವರ ಭಾಷಿಕ ಜಾಗದ ಅರ್ಥವೇನೆಂಬುದನ್ನು ಗುರುತಿಸಿ ಕೊಡಲು ಸಾಧ್ಯವಿತ್ತು. ಅಷ್ಟು ಮಾತ್ರವೇ ಅಲ್ಲ; ಯೂರೋಪಿಗಾಗಿ ಬರ್ನಿತಾಬಾಗ್ಚಿ ಅನುವಾದಕರಾಗಿ ಆಯ್ದುಕೊಳ್ಳುವ ಜಾಗಕ್ಕೂ ವೈಶಾಲಿಯದಕ್ಕೂ ಅಂತರ ಎಲ್ಲಿದೆ, ಏನಿದೆ ಎಂಬುದನ್ನಾದರೂ ಅವರು ಹೇಳಬಹುದಿತ್ತು ಎಂದು ನನ್ನಂಥ ಜಿಜ್ಞಾಸುಗಳಿಗೆ ಅನ್ನಿಸಿದರೆ ಅದು ಸಹಜ.

ಕೆ.ಎಸ್. ವೈಶಾಲಿ ಅವರ ಪ್ರಯತ್ನದ ಹಿಂದಿನ ಸದುದ್ದೇಶ ಮತ್ತು ಹಾಕಿರುವ ಶ್ರಮ ಅತ್ಯಂತ ಗಮನಾರ್ಹ. ವಿಶ್ವವಿದ್ಯಾಲಯದ ಶೈಕ್ಷಣಿಕ ಸವಲತ್ತುಗಳೆಲ್ಲವೂ ಲಭ್ಯವಿದ್ದರೂ, ಅವರು ಬಂಗಾಳಿ ಮೂಲಕೃತಿಯೊಂದನ್ನು, ಅದೂ ವಸಾಹತುಶಾಹಿಯ ವಿರುದ್ಧವಾದ ರಾಜಕೀಯ ನಿಲುವುಳ್ಳ ಕೃತಿಯೊಂದನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ತರುವ ಮೊದಲು ಈ ಅಂಶಗಳನ್ನು ಗಮನಿಸಬಹುದಿತ್ತು. ❑



ಅನುವಾದಕಿ: ಕೆ.ಎಸ್.ವೈಶಾಲಿ

ಮಹಿಳಾ ಹೋರಾಟದ ಕಾಣ್ಕೆಯ ಕಾದಂಬರಿ 'ಪದ್ಮರಾಗ'

• *ಚಂಪಾವತಿ ಎಚ್.ಎಸ್.*

ರುಕಿಯಾ ಶೇಖಾವತ್ ಹುಸೇನ್‌ರವರ 'ಪದ್ಮರಾಗ' ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ ಕೆ.ಎಸ್. ವೈಶಾಲಿ. ಕನ್ನಡ ಸಾಹಿತ್ಯಕ್ಕೆ, ಕನ್ನಡದ ಬರಹಗಾರರಿಗೆ, ವಿಶೇಷವಾಗಿ ಮಹಿಳಾ ಲೋಕಕ್ಕೆ ಪರಿಚಯವಿರದ ಈ ಲೇಖಕಿಯನ್ನು ಪರಿಚಯಿಸಿ ಉಪಕರಿಸಿದ್ದಾರೆ. ಈ ಕಾದಂಬರಿ ಅನೇಕ ಕಾರಣ ಗಳಿಂದ ಒಂದು ಮಹತ್ವದ ಕೃತಿ. ಇದರಲ್ಲಿ ಮಹಿಳಾಚಳವಳಿಯ ಲಯಗಳಿವೆ, ಹೋರಾಟದ ಹಾಡಿದೆ, ಮಹಿಳಾ ಲೋಕದ ಕನಸಿದೆ, ಜೊತೆಗೆ ಮಹಿಳಾ ಬದುಕಿನ ದೃಷ್ಟಿಕೋನ ಹಾಗೂ ಕಾಣ್ಕೆ ಇದೆ. 1924ರಲ್ಲೇ ಇಂತಹದೊಂದು ಕಾದಂಬರಿಯನ್ನು ರುಕಿಯಾ ಶೇಖಾವತ್ ಹುಸೇನ್ ಬರೆದಿದ್ದಾರೆ ಎಂಬುದೇ ಅಚ್ಚರಿಯ ಸಂಗತಿ. ಆ ಕಾಲದ ಸಂಪ್ರದಾಯ, ಕಟ್ಟುಪಾಡು, ಪುರುಷ ಸಮಾಜದ ನಿಂದನಾತ್ಮಕ ಒತ್ತಡ ಯಾವುದೂ ಸಹ ಇವರ ಬರಹಕ್ಕೆ ಕಡಿವಾಣ ಆಗಿಲ್ಲ ಎನ್ನುವುದು 'ಪದ್ಮರಾಗ' ಕಾದಂಬರಿಯ ವೈಶಿಷ್ಟ್ಯ. ರುಕಿಯಾ ಶೇಖಾವತ್ ಹುಸೇನ್‌ರವರ 'ಪದ್ಮರಾಗ' ಕಾದಂಬರಿಯ ಗರ್ಭದೊಳಗೆ ಇಂದಿನ ಸ್ವಾಯತ್ತ ಚಳವಳಿ ಬಯಸುವ ಅನೇಕ ಅಂಶಗಳು ಟಿಸಿಲೊಡೆದಿದ್ದವು ಎಂಬುದು ಆಶ್ಚರ್ಯಕರವಾದ ಸಂಗತಿ ಯಾಗಿದೆ.

ಕಾದಂಬರಿಯ ಕೇಂದ್ರ ಬಿಂದು 'ತಾರಿಣಿ ಭವನ'. ಈಗ ನಾವು ಮಹಿಳಾ ಚಳವಳಿಯಲ್ಲಿ ಅಪೇಕ್ಷೆ ಪಡುವ 'ಆಶ್ರಯತಾಣ.' ಜಾತ್ಯತೀತ ಧೋರಣೆಯ 'ತಾರಿಣಿ ಭವನ'ದಲ್ಲಿ ಮುಸ್ಲಿಂ, ಹಿಂದೂ, ಕ್ರಿಶ್ಚಿಯನ್ ಸಮುದಾಯದ ನೊಂದ ಮಹಿಳೆಯರಿದ್ದಾರೆ. ಸಹೋದರಿತ್ವ ಈ ಮಹಿಳೆಯರನ್ನೆಲ್ಲ ಒಂದುಗೂಡಿಸಿದೆ. ಒಬ್ಬೊಬ್ಬರ ಕೌಟುಂಬಿಕ ಛಿದ್ರಣದ ಕಥೆಯೂ ಇನ್ನೊಬ್ಬರ ನೋವಿನ ಕಥೆಗೆ ಬೆಸೆದುಕೊಂಡಿದೆ. ಶಾಲೆ, ರೋಗಿಗಳಿಗೆ-ದಿಕ್ಕಿಲ್ಲದವರಿಗೆ ಆಶ್ರಯಧಾಮ, ಕಾರ್ಯಾಗಾರ, ತರಬೇತಿ, ವಸತಿ ನಿಲಯ, ವಿಧವಾಶ್ರಮ ಎಲ್ಲವನ್ನೂ ಹೊಂದಿರುವ 'ತಾರಿಣಿಭವನ' ಎಲ್ಲಾ ವರ್ಗದ, ಧರ್ಮದ ಮಹಿಳೆಯರಿಗೆ ಆಶ್ರಯತಾಣ.

ಸ್ವಾಯತ್ತ ಮಹಿಳಾ ಚಳವಳಿಯಲ್ಲಿ ಇಂದು ನಾವು ಮಾತನಾಡುವ 'ಸಾಮೂಹಿಕ ನಾಯಕತ್ವ'ದ ಕಲ್ಪನೆ ಈ ಕಾದಂಬರಿಯ ಒಡಲಲ್ಲಿ ಹಾಸುಹೊಕ್ಕಿದೆ. ವಿಧವೆ ತಾರಿಣಿ 'ತಾರಿಣಿ ಭವನ'ದ ಸಂಸ್ಥಾಪಕಿಯಾಗಿದ್ದರೂ ಆಕೆಯೇ ಸರ್ವಾಧಿಕಾರಿಯಲ್ಲ, ಹಣ-ಕಾಸಿಗೆ ಸರ್ಕಾರದ ಮೇಲೆ ಅವಲಂಬಿತರಲ್ಲ. ದೇಣಿಗೆ ಸ್ವೀಕರಿಸುತ್ತಿದ್ದರೂ, ಬ್ರಿಟಿಷ್ ಸಾಮ್ರಾಜ್ಯಕ್ಕೆ ತಮ್ಮ ಸ್ವಾಮಿನಿಷ್ಠೆಯನ್ನು ಘೋಷಿಸಿದ ಭಾರತೀಯ ರಾಜ್ಯಗಳಲ್ಲಿರುವ ಅಧಿಕಾರಶಾಹಿ ಶ್ರೀಮಂತ ವರ್ಗದಿಂದ ದೇಣಿಗೆ ಸ್ವೀಕರಿಸುತ್ತಿರಲಿಲ್ಲ. ಇದರ ಬಗ್ಗೆ ವಿಶೇಷವಾದ ಕಾಳಜಿ ವಹಿಸಲಾಗುತ್ತಿತ್ತು. ಈ

ರುಕಿಯಾ ಶೇಖಾವತ್ ಹುಸೇನರ ಹೆಸರು ಇಂದು ದಕ್ಷಿಣ ಏಷ್ಯಾದಲ್ಲಿ ನೆಲೆಸಿರುವ ಅನೇಕರಿಗೆ ಪರಿಚಿತವಾದ ಹೆಸರಾಗಿದೆ. ಹಲವಾರು ಜನರು ಆಕೆಯನ್ನು ಅತ್ಯಂತ ಪೂಜನೀಯ ವ್ಯಕ್ತಿ ಹಾಗೂ ಓರ್ವ ಆದರ್ಶ ಹೋರಾಟಗಾರ್ತಿಯೆಂದೇ ಪರಿಗಣಿಸುತ್ತಾರೆ. ಬಂಗಾಳಿ ಮುಸ್ಲಿಂ ಸಮುದಾಯದ ಮಹಿಳೆಯರ ವಿಮೋಚನೆಗಾಗಿ, ಅವರಿಗೆ ಲಭ್ಯ ವಾಗಬೇಕಾಗಿದ್ದ ವಿದ್ಯಾಭ್ಯಾಸದ ಹಕ್ಕಿಗಾಗಿ ಮತ್ತು ಅವರ ಸರ್ವತೋಮುಖವಾದ ಸಬಲೀಕರಣಕ್ಕಾಗಿ ಅವಿರತವಾಗಿ ಶ್ರಮಿಸಿದ ಪ್ರಪ್ರಥಮ ಮಹಿಳೆ ರುಕಿಯಾ ಶೇಖಾವತ್ ಹುಸೇನ್. ರುಕಿಯಾರವರ ಎರಡು ಮಹತ್ವದ ಕೃತಿಗಳೆಂದರೆ, 1905ರಲ್ಲಿ ಪ್ರಕಟವಾದ "ಸುಲ್ತಾನಳ ಕನಸು" ಎಂಬ ವಿಡಂಬನಾತ್ಮಕ, ಸ್ತ್ರೀ ಕೇಂದ್ರಿತ ಆದರ್ಶ ರಾಜ್ಯದ ನೀಳ್ಗತೆ ಹಾಗೂ 1924ರಲ್ಲಿ ಪ್ರಕಟಗೊಂಡ "ಪದ್ಮರಾಗ" ಎಂಬ ಕಿರುಕಾದಂಬರಿ.

ರುಕಿಯಾರವರ "ಪದ್ಮರಾಗ" ಕಾದಂಬರಿಯಲ್ಲಿ ಒಂದು ಆದರ್ಶ ಮಹಿಳಾ ಸಮುದಾಯದ ಕಲ್ಪನೆಯಿದೆ. ದೀನ ತಾರಿಣಿ ಎಂಬ ಶ್ರೀಮಂತ ಯುವ ವಿಧವೆಯೊಬ್ಬಳು ಸ್ಥಾಪಿಸಿದ ಆಶ್ರಮ 'ತಾರಿಣಿ ಭವನ', ಹಿಂದೂ, ಮುಸ್ಲಿಂ ಹಾಗೂ ಕ್ರೈಸ್ತ ಮಹಿಳೆಯರನ್ನು ಒಳಗೊಂಡ ಒಂದು ಜಾತ್ಯತೀತವಾದ ಆದರ್ಶ ಸಮುದಾಯ. 'ತಾರಿಣಿ ಭವನ'ದ ಪರಿಕಲ್ಪನೆಯಲ್ಲಿ ಕಂಡು ಬರುವ ರುಕಿಯಾರವರ ದೃಷ್ಟಿ ಬಹಳ ವಿಶಾಲವಾದದ್ದು. ಹಿಂದೂ, ಮುಸ್ಲಿಂ, ಕ್ರೈಸ್ತ, ಕಪ್ಪು ಮತ್ತು ಶ್ವೇತವರ್ಣದ ಮಹಿಳೆಯರೆಲ್ಲರೂ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಶೋಷಿಸಲ್ಪಟ್ಟವರಾಗಿದ್ದಾರೆ. ಅವರೆಲ್ಲರಿಗೂ ಸ್ವಾವಲಂಬಿಗಳಾಗಲು, ಆತ್ಮಾಭಿಮಾನ ಬೆಳೆಸಿಕೊಳ್ಳಲು ಒಂದು ತಂಗುದಾಣದ ಅಗತ್ಯವಿದೆ. ಅದೇ 'ತಾರಿಣಿ ಭವನ'. ಇದರ ಮೂಲದ್ರವ್ಯವಾಗಿ ಹರಿಯುವ ಜಾತ್ಯತೀತ ಸಮಾಜದ ಆದರ್ಶ ಕಲ್ಪನೆ ಪ್ರಾಯಶಃ 'ಸುಲ್ತಾನ'ಳ ಮತ್ತೊಂದು ಸುಂದರ ಕನಸು.

ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ., ಎಂ.ಫಿಲ್ ಮತ್ತು ಪಿಹೆಚ್.ಡಿ. ಪದವೀಧರೆಯಾಗಿರುವ ಕೆ.ಎಸ್. ವೈಶಾಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಸ್ನಾತಕೋತ್ತರ ವಿಭಾಗದಲ್ಲಿ ಪ್ರವಾಚಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂಗ್ಲಿಷಿನಲ್ಲಿ ಅವರ ಸ್ತ್ರೀವಾದಿ ವಿಮರ್ಶಾತ್ಮಕ ಕೃತಿ "ಪ್ರಿಸನಿಂಗ್ ರಿದಮ್ಸ್" ಈಗಾಗಲೇ ಪ್ರಕಟಗೊಂಡಿದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಾವಿದೆಯಾಗಿಯೂ ಮನ್ನಣೆ ಗಳಿಸಿರುವ ಕೆ. ಎಸ್. ವೈಶಾಲಿ ದೇಶ ವಿದೇಶ ಗಳಲ್ಲಿಯೂ ಸಂಗೀತ ಕಛೇರಿಗಳನ್ನು ನೀಡಿದ್ದಾರೆ.

'ಸುಲ್ತಾನಳ ಕನಸು' ಎಂಬ ವಿಡಂಬನಾತ್ಮಕ, ಸ್ತ್ರೀ ಕೇಂದ್ರಿತ ಆದರ್ಶ ರಾಜ್ಯದ ನೀಳ್ಗತೆಯನ್ನು ರುಕಿಯಾ ಶೇಖಾವತ್ ಹುಸೇನ್‌ರವರು (1880–1932) ಬರೆದಿದ್ದು 1905ರಲ್ಲಿ. ಅವರ ಕಲ್ಪನೆಯ ಕೂಸಾದ ಈ ಚೊಚ್ಚಿಲ ಕೃತಿಯನ್ನು ಭಾರತೀಯ ಮಹಿಳಾ ಸಾಹಿತ್ಯದ ಇತಿಹಾಸ ಪರಂಪರೆಯಲ್ಲಿ ಬಂದ ಮೊತ್ತ ಮೊದಲ ಕಥನವೆನ್ನಬಹುದು. ಅದರಲ್ಲೂ, ಮಹಿಳಾಪರ ನಿಲುವುಗಳ ಸುತ್ತಲೇ ಹೆಣೆದ ಈ ಆದರ್ಶರಾಜ್ಯದ ಪರಿಕಲ್ಪನೆ, ಸುಮಾರು ಅದೇ ಸಮಯದಲ್ಲಿ ಪ್ರಕಟವಾದ ಅಮೆರಿಕಾದ ಲೇಖಕಿ ಶಾರ್ಲೆಟ್ ಪರ್ಕಿನ್ಸ್ ಗಿಲ್‌ಮನ್‌ರವರ ಕಾದಂಬರಿ 'ಅವಳ ನಾಡು' (Her Land)ವಿಗಿಂತ ಹಿಂದಿನದು. ಆದುದರಿಂದ ಸ್ತ್ರೀವಾದಿ ವಿಮರ್ಶಾ ಪರಂಪರೆಯಲ್ಲಿ ಈ ಕೃತಿಗೆ ಒಂದು ಮಹತ್ವವಾದ ಚಾರಿತ್ರಿಕ ಪ್ರಾಮುಖ್ಯ ದೊರೆತಿದೆ. ತನ್ನ ಪತ್ನಿಯ ಸಾಹಿತ್ಯ ರಚನೆಗೆ ಉತ್ತೇಜನ ನೀಡುತ್ತಿದ್ದ ಆಕೆಯ ಪತಿ ಶೇಖಾವತ್ ಹುಸೇನ್‌ರವರು ಈ ಕಥೆಯನ್ನು ಕುರಿತು ಹೆಮ್ಮೆಯಿಂದ 'ಪುರುಷರ ಮೇಲೆ ತೆಗೆದುಕೊಂಡ ಒಂದು ಉಗ್ರ ಪ್ರತೀಕಾರ'ವೆಂದೇ ಬಣ್ಣಿಸಿದ್ದರು.

•

ಈಗಿನ ಬಾಂಗ್ಲಾದೇಶದ ಪೈರಾಬಾದ್ ಎಂಬ ಗ್ರಾಮದಲ್ಲಿ ಜನಿಸಿದ ರುಕಿಯಾರವರು ಜೀವನದುದ್ದಕ್ಕೂ ಮುಸ್ಲಿಂ ಮಹಿಳೆಯರ ಹಕ್ಕುಗಳ ಪರವಾಗಿ ಹೋರಾಡಿದರು. 'ಅಜ್ಞಾನದ ಪರ್ದಾ'ವನ್ನು ತೊಲಗಿಸುವುದೇ ಆಕೆಯ ಪರಮೋಚ್ಚ ಗುರಿಯಾಗಿತ್ತು. ಶ್ರೀಮಂತ ಜಮೀನ್ದಾರಿ ಕುಟುಂಬದಲ್ಲಿ ಜನಿಸಿದ ರುಕಿಯಾ, ಬಾಲ್ಯದಲ್ಲಿ ತಂದೆಯ ಮಡಿವಂತ ಧೋರಣೆಯಿಂದಾಗಿ ಪ್ರಾಥಮಿಕ ಶಿಕ್ಷಣದಿಂದ ವಂಚಿತರಾದರೂ ಎದೆಗುಂದಲಿಲ್ಲ. ಮನೆಯಲ್ಲಿದ್ದು ಕೊಂಡೇ ತನ್ನ ಪ್ರೀತಿಯ ಅಣ್ಣ ಇಬ್ರಾಹಿಂಸಬೇರ್ ಹಾಗೂ ಸಹೋದರಿ ಕರೀಮುನ್ನೀಸಾರವರ ಸಹಕಾರದಿಂದ ಗುಟ್ಟಾಗಿ ಬಂಗಾಲಿ ಮತ್ತು ಇಂಗ್ಲಿಷ್ ಭಾಷೆಗಳನ್ನು ಕಲಿತರು. ಮನೆಯಲ್ಲಿ ರಾತ್ರಿಯ ಹೊತ್ತು ಎಲ್ಲರೂ ಮಲಗಿದ ಮೇಲೆ ಅಧ್ಯಯನ ಮಾಡುತ್ತಿದ್ದ ರುಕಿಯಾ ಎರಡೂ ಭಾಷೆಗಳಲ್ಲಿ ಪ್ರೌಢಿಮೆ ಗಳಿಸಿದರು. 'ಸುಲ್ತಾನಳ ಕನಸು' ಎಂಬ ಕಥೆಯನ್ನು ಆಕೆ ಇಂಗ್ಲಿಷ್‌ನಲ್ಲೇ ಬರೆದು, ತರುವಾಯ ಅದನ್ನು ಬಂಗಾಳಿ ಭಾಷೆಗೆ ಅನುವಾದಿಸಿದರು.

•

1911ರಲ್ಲಿ ರುಕಿಯಾ ಸಾಕಷ್ಟು ವಿರೋಧದ ನಡುವೆಯೂ ಅಪಾರ ಪರಿಶ್ರಮದಿಂದ ಮತ್ತೊಂದು ಹೆಣ್ಣುಮಕ್ಕಳ ಶಾಲೆಯನ್ನು ಕಲ್ಕತ್ತಾದಲ್ಲಿ ಪ್ರಾರಂಭಿಸಿದರು. ತರಗತಿಗಳಿಗೆ ಕೇವಲ ಎಂಟು ಮಂದಿ ವಿದ್ಯಾರ್ಥಿನಿಯರು ಮಾತ್ರ ಹಾಜರಾಗುತ್ತಿದ್ದರೂ, ರುಕಿಯಾ ಪಾಠ ಪ್ರವಚನಗಳನ್ನು ಮುಂದುವರಿಸಿದರು. ಪೌರನೀತಿ ಸಂಹಿತೆಗಳ ಬಗ್ಗೆಯೂ ಆಸಕ್ತಿ ಹೊಂದಿದ್ದ ಆಕೆ 'ಅಂಜುಮನ್–ಖವಾತಿನ್–ಇ–ಇಸ್ಲಾಂ' ಎಂಬ ಮುಸ್ಲಿಂ ಮಹಿಳಾ ಸಂಘಟನೆಯ ಸದಸ್ಯತ್ವವನ್ನು ಪಡೆದರು. ಈ ಸಂಘಟನೆಯವತಿಯಿಂದ ಮುಸ್ಲಿಂ ಮಹಿಳೆಯರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಳ್ಳಲಾಯಿತು. ಆರ್ಥಿಕವಾಗಿ ಹಿಂದುಳಿದ ಹಿನ್ನೆಲೆಯಿಂದ ಬಂದ ಮಹಿಳೆಯರಿಗೆ ಕೆಲವು ಕಸುಬುಗಳಲ್ಲಿ ತರಬೇತಿ ನೀಡುವುದು, ಸಂತ್ರಸ್ತ ವಿಧವೆಯರಿಗೆ ಸಹಾಯಮಾಡುವುದು, ಹುಡುಗಿಯರಿಗೆ ಶಿಕ್ಷಣ ನೀಡಿ ಅವರನ್ನು ಕೊಳಚೆ ಪ್ರಾಂತದ ಗುಡಿಸಲುವಾಸಿಗಳಿಗೆ ವಿದ್ಯೆ ಕಲಿಸಲು ಪ್ರೋತ್ಸಾಹ ನೀಡುವುದು–ಇವೇ ಮೊದಲಾದ ಯೋಜನೆಗಳನ್ನು ಸಾಕಾರಗೊಳಿಸಲು ರುಕಿಯಾ ಅವಿರತವಾಗಿ ಶ್ರಮಿಸಿದರು. ಇನ್ನೊಂದು ಗಮನಾರ್ಹ ವಿಷಯವೆಂದರೆ 'ಅಂಜುಮನ್–ಇ–ಖವಾತಿನ್–ಇ–ಇಸ್ಲಾಂ' ಸಂಸ್ಥೆಯಲ್ಲಿ ಹಿಂದೂ ಮಹಿಳಾ ಕಾರ್ಯಕರ್ತೆಯರೂ ಇದ್ದರು. ಸೂಫಿಯಾ ಕಮಲ್ ಎಂಬ ಬಾಂಗ್ಲಾದೇಶಿ ಸ್ವಾತಂತ್ರ್ಯ ಹೋರಾಟಗಾರ್ತಿ, ಲೇಖಕಿ ಹಾಗೂ ಸಮಾಜ ಸುಧಾರಕಿ ತಮ್ಮನ್ನು ರುಕಿಯಾ ಹೇಗೆ ಕಲ್ಕತ್ತಾದ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಮಹಿಳೆಯರಿಗೆ ಮಾರ್ಗದರ್ಶನ ಮಾಡಲು ಕಳುಹಿಸುತ್ತಿದ್ದರು ಎಂಬುದನ್ನು ಜ್ಞಾಪಿಸಿಕೊಳ್ಳುತ್ತಾರೆ.



ಭವನದ ಖರ್ಚು–ವೆಚ್ಚವನ್ನು ದಮನಿತ ಮಹಿಳೆಯರ ಅಭ್ಯುದಯಕ್ಕಾಗಿ ನಿರ್ಮಿಸಿದ ಸಮಾಜವೇ ಭರಿಸುತ್ತಿತ್ತು ಎನ್ನುವಲ್ಲಿ ಸ್ವಾಯತ್ತತೆಯ ಕಲ್ಪನೆಯನ್ನು ರುಕಿಯಾ ಶೇಖಾವತ್ ಹುಸೇನ್ ಸ್ಪಷ್ಟವಾಗಿ ಹೊಂದಿದ್ದರು ಎಂಬುದನ್ನು ನಿರೂಪಿಸುತ್ತದೆ.

'ತಾರಿಣಿ ಭವನ'ದ ತಾರಿಣಿಯವರನ್ನು ವೇಶ್ಯೆಯೆಂದು ಜರಿಯಲಾಗುತ್ತದೆ. ಮರ್ಯಾದೆ ಇಲ್ಲದ ಹೆಂಗಸರು ಇಲ್ಲಿರುತ್ತಾರೆ ಎಂದು ಕಟುಟೀಕೆ ಮಾಡಲಾಗುತ್ತದೆ. ಪುರುಷರು ತಮ್ಮ ಓಡಿಹೋದ ಪತ್ನಿಯರಿಗಾಗಿ ಇಲ್ಲಿ ಹುಡುಕಬೇಕಾಗುತ್ತದೆ ಎಂದು ವ್ಯಂಗ್ಯಮಾಡಲಾಗುತ್ತದೆ. ಕುಟುಂಬನಾಶ ಮಾಡುವಂತಹ ಪ್ರವೃತ್ತಿ ಇಲ್ಲಿ ಇದೆ ಎಂದು ಹೇಳಲಾಗುತ್ತದೆ. ಈ ಸಮಸ್ಯೆಗಳು ರುಕಿಯಾ ಶೇಖಾವತ್ ಹುಸೇನ್ ಕಾಲದವು ಮಾತ್ರವಲ್ಲ, ಇಂದಿಗೂ ಸಹ ಇಂತಹ ಕಟುಟೀಕೆಯನ್ನು ಮಹಿಳಾ ಸಂಘಟನೆಗಳು ಎದುರಿಸುತ್ತಲೇ ಇವೆ.

'ತಾರಿಣಿ ಭವನ'ದಲ್ಲಿ ಶಿಕ್ಷಕವೃತ್ತಿ, ದಾದಿವೃತ್ತಿ ಇತ್ಯಾದಿ ಮಾಡುತ್ತಲೇ ಕಾರ್ಯಾಗಾರದಲ್ಲಿ ತರಬೇತಿ ಹೊಂದುವ ಮಹಿಳೆಯರಿದ್ದಾರೆ. ಇವರ ಉಡುಗೆ–ತೊಡುಗೆಗಳು ಸರಳ. ಎಲ್ಲರೂ ಆಭರಣ ರಹಿತರೇ. 'ಅಕ್ಕ,' 'ಬೀ' ಎಂದೇ ಒಬ್ಬರನ್ನೊಬ್ಬರು ಸಂಬೋಧಿಸುತ್ತಾರೆ. ದೊಡ್ಡ ಹಜಾರದಲ್ಲಿ ಪ್ರತ್ಯೇಕ ಮರದ ಹಾಸಿಗೆಯ ಬದಿಯಲ್ಲಿ ಅವರವರ ವಸ್ತುಗಳು. ಅಲ್ಲಿಯೇ ಮಲಗುತ್ತಾರೆ. ಅವರವರಿಗೆ ನಿಗದಿಯಾದ ಕೆಲಸ–ಕಾರ್ಯದಲ್ಲಿ ತನ್ಮಯತೆಯಿಂದ ತೊಡಗಿಸಿಕೊಂಡಿರುತ್ತಾರೆ. ಒಬ್ಬರ ನೋವಿನೊಳಗೆ ಇನ್ನೊಬ್ಬರ ಕಣ್ಣೀರಿನ ಕಥೆ ಬಿಚ್ಚಿಕೊಳ್ಳುವುದು. ಈ ನೋವು, ದುಃಖ, ದುಮ್ಮಾನದ ಲಯಗಳಲ್ಲಿಯೇ ಒಬ್ಬರನ್ನೊಬ್ಬರು ಕಂಡುಕೊಳ್ಳುವುದು, ಹಂಚಿಕೊಳ್ಳುವುದು, ಸಂವೇದಿಸುವುದು, ಆಸರೆಯಾಗಿ ನಿಲ್ಲುವುದು. ಇಂತಹ ಬಂಧದಿಂದ ರಚಿತವಾದ 'ಪದ್ಮರಾಗ' ಕಾದಂಬರಿಯ ಚೌಕಟ್ಟಿನಲ್ಲಿ ಪುರುಷ ಪ್ರಧಾನ ಸಮಾಜದ ವೈರುಧ್ಯಮಯ ಮೌಲ್ಯಗಳ ಬಗ್ಗೆ ಬಲವಾದ ಟೀಕೆಯಿದೆ. ಹಿಂಸೆಗೆ ಸಾವೊಂದೇ ಉತ್ತರವಲ್ಲ ಎನ್ನುವ ಆಶಯವಿದೆ. ಬದುಕಿಗೆ ಇನ್ನೊಂದು ಆಯಾಮವಿದೆ ಎಂದು ತೋರಿಸಲಾಗಿದೆ. ಕುಟುಂಬದ ಹೊರಗೆ ವಿಸ್ತಾರವಾದ ಕಾರ್ಯಕ್ಷೇತ್ರದ ಹೊಸ ಜೀವನ ಪಡೆಯಬಹುದೆಂಬ ಕಲ್ಪನೆಯಿದೆ. ಕಾದಂಬರಿಯುದ್ದಕ್ಕೂ ಪುರುಷಪ್ರಧಾನ ಮೌಲ್ಯಗಳ ಬಗ್ಗೆ ವಿರೋಧವಿದ್ದರೂ, ಪುರುಷ ದ್ವೇಷದ ಎಳೆ ಇಲ್ಲ. ಹಾಗಾಗಿಯೇ 'ಪದ್ಮರಾಗ'ದಲ್ಲಿ ಲತೀಫನಂತಹ ಪುರುಷ ಪಾತ್ರ ಕೂಡಾ ಮಾನವೀಯ ಎಳೆಯಲ್ಲಿಯೇ ನಿರೂಪಿಸಲ್ಪಟ್ಟಿದೆ. ಹಾಗೆಯೇ ಸಂಕುಚಿತ, ಕಲ್ಮಷ ಮನಸ್ಸಿನ ಹೆಂಗಸರೂ ಕಾಣಸಿಗುತ್ತಾರೆ. ಲತೀಫನಂತಹ ಪುರುಷ ಮನಸ್ಸುಗಳ ಒಳಗಿರುವ ಮಾನವೀಯ ನೆಲೆಯ ಸಂವೇದನೆಯನ್ನು ರುಕಿಯಾ ಶೇಖಾವತ್ ಹುಸೇನ್ ಹಿಡಿಯಬಲ್ಲವರಾಗಿದ್ದರು ಎಂಬುದು

ಆಕೆ ಮಹಿಳಾ ಬದುಕನ್ನು ಅರ್ಥೈಸಿಕೊಳ್ಳುತ್ತಿದ್ದ ಸಮ-ಚಿತ್ತ ಭಾವವನ್ನು ಎತ್ತಿಹಿಡಿಯುತ್ತದೆ.

ಗಂಡು-ಹೆಣ್ಣಿನ ಸಂಬಂಧದ ಮಧುರ ಭಾವನೆ, ಆಂತರ್ಯದ ತಳಮಳಗಳನ್ನು ಲೇಖಕಿ ಲತೀಫ್ ಹಾಗೂ ಪದ್ಮರಾಗಳ ಸಂಬಂಧ ದಲ್ಲಿ ಬಿಚ್ಚಿ ಇಡುತ್ತಾರೆ. ಲೇಖಕಿಗೆ ಬದುಕಿನ ಬಗ್ಗೆ ಇರುವ ಶ್ರದ್ಧೆ, ನಂಬಿಕೆಗಳ ಒಂದು ಆಯಾಮವನ್ನು ಈ ಸಂಬಂಧದ ಚಿತ್ರಣ ತೋರಿಸುತ್ತದೆ. 'ಪದ್ಮರಾಗ'ಳ 'ಆಯ್ಕೆ' ಅಷ್ಟು ಸುಲಭದ ಆಯ್ಕೆ ಯಾಗಿರಲಿಲ್ಲವೆಂಬುದು ಆಕೆಯ ಆಂತರ್ಯದ ತುಮುಲಗಳಿಂದ ತೋರಿಸುವಲ್ಲಿ ಲೇಖಕಿ ಯಶಸ್ವಿಯಾಗುತ್ತಾರೆ.

ಈ 'ತಾರಿಣಿ ಭವನ'ದಲ್ಲಿ ಸಿದ್ಧಿಕಾ, ಭಿಬಾ, ಕೊರೇಶಾ, ನಳಿನಿ, ಉಷಾ, ಹೆಲೆನಾ, ಸೌದಾಮಿನಿ ಹೀಗೆ ಅನೇಕ ಬಗೆಯ ಮಹಿಳೆಯರಿದ್ದಾರೆ. ಇವರೆಲ್ಲಾ ಇಲ್ಲಿ ನೆಲೆ ಕಂಡುಕೊಂಡವರು. ಪಿತೃಪ್ರಧಾನ ಮೌಲ್ಯಗಳಲ್ಲಿ ಕುಟುಂಬದ ಒಳಗೆ ಒಂದಲ್ಲ ಒಂದು ರೀತಿಯ ಸಂಕಟಗಳಿಗೆ ಒಳಗಾದವರು. ಎರಡನೇ ಮದುವೆಯಾದ ಸೌದಾಮಿನಿ ಗಂಡನ ಮೊದಲನೇ ಹೆಂಡತಿಯ ತಂಗಿಯಿಂದಾಗಿ 'ಮಲತಾಯಿ' ಪಟ್ಟ ಹೊಂದಿ ಹಿಂಸೆಗೊಳಗಾದವಳು; ಕೊರೇಶಾ ಬೀ ಗಂಡನ ಕುಟುಂಬದವರು ಆಕೆಯ ವಿರುದ್ಧ ಪಿತೂರಿ ನಡೆಸಿ ಆಕೆಯನ್ನು ಗಂಡನಿಂದ ದೂರಾಗಿಸಿದ್ದಕ್ಕಾಗಿ ನೆಲೆತಪ್ಪಿ ಬಂದವಳು; ಹೆಲೆನ್ ಇಂಗ್ಲಿಷ್ ಕಾನೂನು ಬಲವಂತಪಡಿಸಿದ್ದಕ್ಕಾಗಿ ಹುಚ್ಚು ಗಂಡನ ಜೊತೆಗೇ ಬದುಕಬೇಕಾಗಿ ಬಂದ ನತದೃಷ್ಟೆ, ಇಂಗ್ಲಿಷ್ ಕಾನೂನಿನ ವಿರುದ್ಧ ಹೋರಾಟ ನಡೆಸುವ ಛಲ ಹೊಂದಿದವಳು; ಸಕೀನಾ ಗಂಡನ ಪರಿಚಾರಿಕೆ ಬಿಟ್ಟು ಹೊರ ಬಂದಿರುವವಳು; ಉಷಾಳ ಮನೆಗೆ ಕಳ್ಳರು ನುಗ್ಗಿದಾಗ ಆಕೆಯ ಗಂಡ ಹಾರಿ ಓಡಿಹೋಗುವುದು, ಕಳ್ಳರು ಹರೆಯದ ತರುಣಿಯನ್ನು ಹೊತ್ತು ಕೊಂಡು ಹೋಗುವುದು, ಇನ್ನಾರೋ ಮೂವರು ಗಂಡಸರು ಆಕೆಯನ್ನು ರಕ್ಷಿಸಿ ಮನೆಗೆ ತರುವುದು, ಈ ಹಂತದಲ್ಲಿ ಉಷಾ ಎಲ್ಲರಿಂದ ನಿಂದನೆಗೊಳಗಾಗಿ ತಾರಿಣಿಭವನ ಸೇರಿದವಳು- ಇಂತಹ ಹೆಂಗಸರ ಬದುಕಿನ ಆಂತರ್ಯದ ಕತೆಗಳು 'ತಾರಿಣಿಭವನ'ದ ಚೌಕಟ್ಟು, ಹಾಗೇ 'ಪದ್ಮರಾಗ' ಕಾದಂಬರಿಯ ಬಂಧ ಕೂಡಾ.

'ಪದ್ಮರಾಗ' ಕಾದಂಬರಿ ಹಲವಾರು ಹೆಂಗೆಳೆಯರ ಕಥೆ ಯಾದರೂ ಕೂಡಾ ಪದ್ಮರಾಗಳೇ ಕೇಂದ್ರ ಬಿಂದು. ನಿಶ್ಚಿತಾರ್ಥ ವಾಗಿರುವ ಜೈನಾಬ್ ಅನೇಕರ ಕುಟಿಲತೆಯಿಂದಾಗಿ ಯೂಸುಫನನ್ನು ಮದುವೆಯಾಗದೇ, ವಿಚ್ಛೇದನವೂ ಸಿಗದೇ ಒಂದು ರೀತಿ ಬಾಲವಿಧವೆ ಎನಿಸಿಕೊಳ್ಳುತ್ತಾಳೆ. ಆಸ್ತಿಯ ಸಂಚಿಗಾಗಿ ರಾಬಿನ್‌ಸನ್ ನಡೆಸುವ ಕೊಲೆ ಮತ್ತು ಅವನ ಕುಟಿಲತೆಯಿಂದಾಗಿ ಈಕೆ ಅಪರಾಧಿ ಎನ್ನಿಸಿಕೊಳ್ಳುತ್ತಾಳೆ. ಗಂಡಸಿನ ಮಾರು ವೇಷದಲ್ಲಿ ತಪ್ಪಿಸಿಕೊಂಡು ಬಂದು 'ಸಿದ್ಧಿಕಾ' ಆಗಿ 'ತಾರಿಣಿ ಭವನ' ಸೇರುತ್ತಾಳೆ. ತಾವರೆಬಣ್ಣದ ರತ್ನದಂತಿರುವ ಈಕೆಗೆ ತಾರಿಣಿ 'ಪದ್ಮರಾಗ' ಎಂದು ಕರೆಯುತ್ತಾರೆ. ಇಲ್ಲಿ ಈಕೆ ಲತೀಫನನ್ನು ಭೇಟಿಯಾಗುತ್ತಾಳೆ. ನಿಶ್ಚಿತಾರ್ಥವಾಗಿದ್ದ ಗಂಡ ಲತೀಫನ ಬಗ್ಗೆ ಆಕೆಯಲ್ಲಿ ತುಮುಲ ಪ್ರಾರಂಭವಾಗುತ್ತದೆ. ತಾರುಣ್ಯದ ಕನಸುಗಳು ಕಣ್ತುಂಬಿಕೊಂಡರೂ ಆತನ ಜೊತೆ ಹೋಗಲು ನಿರಾಕರಿಸುತ್ತಾಳೆ. ಆದರೂ ಅವನಿಗಾಗಿ ಕಾಯುತ್ತಾಳೆ. ವಿಚ್ಛೇದನ ನೀಡಬೇಡ ಎನ್ನುತ್ತಾಳೆ; ಆದರೂ ಒಬ್ಬಳೇ ತನ್ನೂರಿಗೆ ತೆರಳುವ ನಿರ್ಧಾರ ಕೈಗೊಳ್ಳುತ್ತಾಳೆ. ಈ ರೀತಿಯ ಒಂದು ಸಂಕೀರ್ಣ ವ್ಯಕ್ತಿತ್ವದ ಪದ್ಮರಾಗ ಕಾದಂಬರಿಯ ಮುಖ್ಯಪಾತ್ರವಾಗಿ, ಮಹಿಳಾ ಬದುಕಿನ ಸಂಕೀರ್ಣತೆಯ ಆಯಾಮ ವನ್ನು ಸೂಚಿಸುತ್ತಾಳೆ, ಮಹಿಳಾ ಸಂವೇದನೆಯ ಆಂತರ್ಯವನ್ನು ಪ್ರತಿನಿಧಿಸುತ್ತಾಳೆ.




ರುಕಿಯಾರವರ ಕೃತಿಗಳು ಬಾಂಗ್ಲಾ ದೇಶದಲ್ಲಿ ಹೆಚ್ಚು ಜನಪ್ರಿಯವಾಗಿವೆ. ಅವರು ಬಂಗಾಳಿಯಲ್ಲಿ ಬರೆದ ಲೇಖನಗಳನ್ನು ಶ್ರೀಮತಿ ರೋಶನ್‌ಜಹಾನ್ ಎಂಬ ಮಹಿಳೆ ಇಂಗ್ಲಿಷಿಗೆ ಅನುವಾದ ಮಾಡಿದ್ದಾರೆ. ಎರಡು ಸಂಪುಟಗಳಲ್ಲಿ ಹೊರ ಬಂದ ಅವರ ಲೇಖನ ಮಾಲಿಕೆ 'ಮೋತಿಚರ್' ಕೃತಿಯನ್ನು 18ನೇ ಶತಮಾನದ ಬ್ರಿಟಿಷ್ ಸ್ತ್ರೀವಾದಿ ಲೇಖಕಿ ಮೇರಿ ವುಲ್‌ಸ್ಟೋನ್ ಕ್ರಾಫ್ಟಳ ಪ್ರಸಿದ್ಧ ಕೃತಿ 'ಮಹಿಳಾ ಹಕ್ಕುಗಳ ಸಮರ್ಥನೆ' (Vindication of the Rights of Women)ಗೆ ಹೋಲಿಸಲಾಗುತ್ತದೆ. ರುಕಿಯಾರವರು ಆಕೆಯ ಕೃತಿಯನ್ನು ಓದಿರಲಿಕ್ಕಿಲ್ಲವಾದರೂ, ಸೋಜಿಗದ ಸಂಗತಿಯೆಂದರೆ, ಸಾಯುವ ಸ್ವಲ್ಪ ಕಾಲದ ಮುನ್ನ ಡಿಸೆಂಬರ್ 1932ರಲ್ಲಿ ಆಗ ಬರೆಯುತ್ತಿದ್ದ 'ನಾರೀರ್ ಅಧಿಕಾರ್' ಎಂಬ ಲೇಖನದಲ್ಲಿ 'ಖೈದಿಗಳನ್ನು ಕಬ್ಬಿಣದ ಸರಪಳಿಯಿಂದ ಹೇಗೆ ಬಂಧಿಸಲಾಗುತ್ತದೋ ಹಾಗೆಯೇ ಮುಸ್ಲಿಂ ಮಹಿಳೆಯರು ಚಿನ್ನ ಬೆಳ್ಳಿಯ ಸಂಕೋಲೆಗಳಲ್ಲಿ, ಪರ್ದಾಗಳಲ್ಲಿ ಬಂಧಿತ ರಾಗಿದ್ದಾರೆ' ಎಂದು ರುಕಿಯಾ ಹೇಳಿದ್ದಾರೆ. ಬಂಗಾಳಿಯಲ್ಲಿ ಬರೆದ ತಮ್ಮ ಪ್ರಬಂಧ ಸಂಕಲನ 'ಅವರೋಧ ಭಾಷಿಣಿ' (ಪರ್ದಾನಶೀನ ಮಹಿಳೆ)ಯನ್ನು ರುಕಿಯಾ ಅವರೋಧ ಭಾಷಿಣಿಯಾದ ತಮ್ಮ ತಾಯಿ ರಹತುನ್ನೀಸಾ ಸಬೇರಾ ಚೌಧುರಾಣಿಯವರಿಗೆ ಅರ್ಪಣೆ ಮಾಡಿದ್ದಾರೆ. ತಮ್ಮ ಕಾದಂಬರಿ 'ಪದ್ಮರಾಗ'ವನ್ನು ತನ್ನ ಪ್ರೀತಿಯ ಅಣ್ಣ ಅಬ್ದುಲ್ ಅಸದ್ ಇಬ್ರಾಹಿಂ ಸಬೇರನಿಗೆ ಅರ್ಪಿಸಿದ್ದಾರೆ. ಇವಲ್ಲದೆ ಬಂಗಾಳಿಯಲ್ಲಿ 'ಪಿಪಾಸಾ' ಹಾಗೂ 'ಮಹಮದಿ' ಎನ್ನುವ ಪ್ರಬಂಧ ಸಂಕಲನಗಳನ್ನೂ ಪ್ರಕಟಿಸಿದ್ದಾರೆ.

●

ತಮ್ಮ ಸಮಕಾಲೀನರಾದ ಮಹಾರಾಷ್ಟ್ರದ ಪಂಡಿತಾ ರಮಾಬಾಯಿ ಯವರಂತೆ ರುಕಿಯಾ ಕೂಡ ಅನೇಕ ಸವಾಲುಗಳನ್ನು, ಟೀಕಾ ಪ್ರಹಾರ ಗಳನ್ನೂ ಎದುರಿಸ ಬೇಕಾಯಿತು. ಸಂಪ್ರದಾಯತ್ವದ ಹೆಸರಿನಲ್ಲಿ ಮುಸ್ಲಿಂ ಸಮಾಜವು ಆಕೆಯ ಚಿಂತನೆಗಳನ್ನು ಹಾಗೂ ಬರವಣಿಗೆಯನ್ನು ವಿರೋಧಿಸಿತು. ತಮ್ಮ ಐವತ್ತೂರನೇ ವಯಸ್ಸಿನಲ್ಲೇ ಹೃದಯಾಘಾತದಿಂದ ತೀರಿಕೊಂಡ ರುಕಿಯಾರವರ ಬಗ್ಗೆ ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಮನೆಯ ನಾಲ್ಕು ಗೋಡೆಗಳ ನಡುವಿನ ಅಂಧಕಾರದಲ್ಲಿದ್ದುಕೊಂಡೇ, ಅಸಂಖ್ಯಾತ ಕಟ್ಟುಪಾಡುಗಳನ್ನು ಮೀರಿ, ಅರಳಿದ ಓರ್ವ ಬುದ್ಧಿವಂತ, ಪ್ರಜ್ಞಾವಂತ, ಸುಸಂಸ್ಕೃತ, ಸ್ವತಂತ್ರ ಮನೋಭಾವದ ಸ್ತ್ರೀ ಚೇತನ ಆಕೆ. ತಮ್ಮ ಲೇಖನವೊಂದರಲ್ಲಿ ಮುಸ್ಲಿಂ ಮಹಿಳಾ ಸಮುದಾಯಕ್ಕೆ ರುಕಿಯಾ ನೀಡಿದ ಅನುಪಮ ಕೊಡುಗೆಯನ್ನು ಕುರಿತು ಪ್ರಶಂಸೆ ವ್ಯಕ್ತಪಡಿಸುತ್ತಾ, ತಮ್ಮ ದಿಟ್ಟ ನಿಲುವುಗಳಿಂದ ಸಾರಸ್ವತ ಲೋಕದಲ್ಲಿ, ಮುಸ್ಲಿಂ ಸಮುದಾಯದಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದ, ಮೂಲಭೂತ ವಾದಿಗಳ ಕೆಂಗಣ್ಣಿಗೆ ಗುರಿಯಾದ ಲೇಖಕಿ ತಸ್ಲೀಮಾನಸ್ರೀನ್ ರವರು, "ಪುರುಷ ಸಾರ್ವಭೌಮತ್ವ, ಮಹಿಳಾ ವಿರೋಧಿ ಚಿಂತನೆಗಳೇ ತಾಂಡವ ವಾಡುತ್ತಿರುವ ತಮ್ಮ ಸಮುದಾಯಗಳಲ್ಲಿ ಈಗ ರುಕಿಯಾರಂಥ ಮಹಿಳೆಯರೇಕೆ ಕಂಡುಬರುತ್ತಿಲ್ಲ?" ಎಂಬ ನೋವಿನ ಉದ್ಗಾರವೆತ್ತಿದ್ದಾರೆ.

ಬಹುಶಃ ನಾವೆಲ್ಲರೂ, ನಮ್ಮ ನಮ್ಮ ಸಂದರ್ಭಗಳಲ್ಲಿ, ನಮಗೇ ಕೇಳಿಕೊಳ್ಳ ಬೇಕಾದ ಗಂಭೀರ ಪ್ರಶ್ನೆ ಇದು.

('ಪದ್ಮರಾಗ'ದ ಮುನ್ನುಡಿಯಿಂದ)



‘ಪದ್ಮರಾಗ’ದಲ್ಲಿ ಸಾಹಿತ್ಯವಿದೆ, ಕಾವ್ಯವಿದೆ, ಕಾವ್ಯಾತ್ಮಕ ಭಾಷೆ ಕೂಡಾ ಇದೆ. ಈ ಕಾವ್ಯಾತ್ಮಕ ಭಾಷೆಯಲ್ಲಿ ನವೋದಯ ಕಾಲದ ಭಾಷೆಗೆ ಹತ್ತಿರವಾಗುವಂತಹ ಪ್ರಕೃತಿಯ ವರ್ಣನೆ ಇದೆ. ಈ ಭಾಷೆಯ ರಮ್ಯತೆಯನ್ನು ಕೆ.ಎಸ್. ವೈಶಾಲಿಯವರು ಕನ್ನಡಕ್ಕೆ ಸಮರ್ಥವಾಗಿಯೇ ಅನುವಾದಿಸಿದ್ದಾರೆ.

‘ಪದ್ಮರಾಗ’ದಲ್ಲಿರುವ ಜೈನಾಬಳ ಹಾಗೂ ಲತೀಫನ ಜೀವನದ ಚೌಕಟ್ಟಿನಲ್ಲಿ ಬರುವ ಅನೇಕ ಅಂಶಗಳು ಸಿನಿಮೀಯವಾಗಿದ್ದರೂ ಸಹ ಅಸಹಜ ಎಂದೇನೂ ಅನಿಸುವುದಿಲ್ಲ. ಜೈನಾಬ್–ಸಿದ್ಧಿಕಾ–ಪದ್ಮರಾಗಳಾಗಿರುವ ಮುಸ್ಲಿಂ ಮಹಿಳೆಯ ವ್ಯಕ್ತಿತ್ವ ಚಿತ್ರಣದಲ್ಲಿ ಅನೇಕ ಸೂಕ್ಷ್ಮಗಳನ್ನು, ಸಂಕೀರ್ಣತೆಗಳನ್ನು ರುಕಿಯಾ ಶೇಖಾವತ್ ಹುಸೇನ್ ಚಿತ್ರಿಸುತ್ತಾರೆ.

ಶ್ರೇಣಿರಹಿತ ಸಂಘಟನೆ, ಸಮೂಹ ನಾಯಕತ್ವ, ಜಾತ್ಯತೀತ ನಿಲುವು, ಪುರುಷ–ಸ್ತ್ರೀಯರನ್ನೊಳಗೊಂಡ ಬದುಕಿನ ವಿಶಾಲ ದೃಷ್ಟಿಕೋನ, ಸೋದರಿತ್ವದ ಅನಿವಾರ್ಯ–ಅವಶ್ಯಕತೆಯನ್ನೊಳಗೊಂಡ ‘ತಾರಿಣಿ ನಿಲಯ’ದ ಕಲ್ಪನೆಯೊಂದಿಗೆ ‘ಪದ್ಮರಾಗ’ ಕಾದಂಬರಿ ರಚಿಸಿದ ರುಕಿಯಾ ಶೇಖಾವತ್ ಹುಸೇನ್‌ರವರ ನಿಲುವು ಇಂದಿನ ಮಹಿಳಾ ಹೋರಾಟದ ಲಯಗಳಲ್ಲಿಯೂ ಪ್ರಸ್ತುತತೆ ಪಡೆಯುತ್ತದೆ ಎನ್ನುವುದಕ್ಕಾಗಿ ಇದು ಮಹಿಳಾ ಲೋಕದ ಆಶಯದ ಕಾದಂಬರಿಯಾಗಿ ಧ್ವನಿಸುತ್ತದೆ. ಈ ಆಶಯದ ಧ್ವನಿಯನ್ನು ಕನ್ನಡಕ್ಕೆ, ಮಹಿಳಾ ಲೋಕಕ್ಕೆ ಪರಿಚಯಿಸಿದ ಅನುವಾದ ಗಾರ್ತಿ ಕೆ.ಎಸ್. ವೈಶಾಲಿಯವರ ಕೊಡುಗೆ ಅಪೂರ್ವವಾದದ್ದು. ಅವರಿಗೆ ಅಭಿನಂದನೆಗಳು.


❑

ಮಾನಸ ವೇದಿಕೆಯ ಆಹ್ವಾನ

ಚರ್ಚೆ, ವಿಚಾರ ವಿನಿಮಯ, ಆತ್ಮೀಯರ ಭೇಟಿ ಮಾನಸ ಪತ್ರಿಕೆಯ ಬಗ್ಗೆ ಸಲಹೆ ಸೂಚನೆ, ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆ, ಕೊಂಚ ಹರಟೆ, ಕೊಂಚ ಕ್ಯಾಂಟೀನ್‌ಕಾಫಿಗಾಗಿ ಪ್ರತಿ ತಿಂಗಳೂ ಎರಡನೇ ಬುಧವಾರ ಸಂಜೆ 5.30 ಗಂಟೆಗೆ ಆಸಕ್ತರೆಲ್ಲರೂ ಸೇರೋಣ. ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದ ಮೆಟ್ಟಿಲುಗಳಿಗೂ ಮಾನಸ ವೇದಿಕೆಗೂ ಒಂದು ಅವಿನಾಭಾವ ಸಂಬಂಧವಿದೆ. ಮಹಿಳಾ ಧ್ವನಿಗಾಗಿ ಸಾರ್ವಜನಿಕ ಸ್ಥಳವನ್ನು ಉಪಯೋಗಿಸುವುದರ ಹಿಂದೆ ಸ್ತ್ರೀವಾದದ ಪರಿಕಲ್ಪನೆಯೂ ಇದೆ. ಈ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಆಗಸ್ಟ್ 10, ಬುಧವಾರ ಸಂಜೆ ನೀವೂ ಬನ್ನಿ. ನಿಮ್ಮ ಗೆಳತಿಯರನ್ನೂ ಕರೆತನ್ನಿ.

–ಮಾನಸ ವೇದಿಕೆ

ಹಕ್ಕುಬೇಕು



ಶತಮಾನಗಳಿಂದ ಸಿಕ್ಕ ಹಕ್ಕು
ಇದು ಗಂಡು ಪ್ರಪಂಚ

ಗಂಡು ಬರೆದ ವೇದ ಪುರಾಣ
ಗಂಡು ಕಟ್ಟಿದ ಮನೆ
ಅವರೇ ಕೊರೆದ ಶಿಲ್ಪ
ಅವರದೇ ದೇವಸ್ಥಾನ


ವ್ಯಾಪಾರ ವ್ಯವಹಾರ ವಹಿವಾಟು
ಎಲ್ಲ ಕಡೆ ಗಂಡಿನದೇ ಛಾಪು
ಜಮೀನಿನ ಹಕ್ಕುಪತ್ರ
ಅದು ಗಂಡಸಿನ ಪತ್ರ
ಶತಮಾನಗಳಿಂದ ಸಿಕ್ಕ ಹಕ್ಕು
ಇದು ಗಂಡುಪ್ರಪಂಚ

ತಾಯಾಗಿ ಪೊರೆವವಳು
ಪತ್ನಿಯಾಗಿ ಸಲಹುವಳು
ಮಗಳಾಗಿ ಸೇವೆಗೈವಳು
ಪ್ರಿಯೆಯಾಗಿ ದ್ರವಿಸುವಳು
ಅವಳು ಕೇಳಿದರೆ ಹಕ್ಕು
ಗರ್ಭಕೋಶಕ್ಕೇ ಬ್ರೇಕು!

ಗಂಡು ಹೆಣ್ಣಿನ ಪ್ರೀತಿ
ಎಲ್ಲ ಕಾವ್ಯಕೆ ಸ್ಫೂರ್ತಿ
ಗಂಡು ಹೆಣ್ಣಿನ ಮಿಲನ
ಸೃಷ್ಟಿಕಾರ್ಯಕೆ ಮೂಲ
ಇಲ್ಲೂ ಯಜಮಾನಿಕೆಯ ಪೊಗರು
ರಸಾನಂದವೆಲ್ಲ ಒಗರು
ಶತಮಾನಗಳಿಂದ ಸಿಕ್ಕ ಹಕ್ಕು
ಇದು ಗಂಡು ಪ್ರಪಂಚ

ಹೆಣ್ಣು ಸ್ವತಂತ್ರಳಾಗಬೇಕು
ಮನೆ ಕಟ್ಟಬೇಕು
ಕಾವ್ಯ ಹೆಣೆಯಬೇಕು
ತಾಯಾಗುವ ಸವಿಸಮಯದಲಿ
ಪ್ರೀತಿಯನ್ನಷ್ಟೇ ಉಣ್ಣಬೇಕು
ಕನಸು ಕಾಣಲು ಬೇಕು
ಗಂಡಿನ ದಬ್ಬಾಳಿಕೆ ಮೀರಲು
ನಮಗೂ ಹಕ್ಕುಗಳು ಬೇಕು

■ ಎಸ್. ಮಾಲತಿ, ಸಾಗರ



ಕೌಟುಂಬಿಕ ಹಿಂಸೆ: ಕಾಯಿದೆ, ಕಾನೂನು ವ್ಯವಸ್ಥೆ ಮತ್ತು ವಾಸ್ತವ

■ *ಸೌಮ್ಯ ಲಕ್ಷ್ಮೀ ಭಟ್*
ನ್ಯಾಯವಾದಿ

ಮಾನವ ಜನಾಂಗ "ಬೆಳವಣಿಗೆ", "ಅಭಿವೃದ್ಧಿ"ಗಳನ್ನು ಕಾಣುತ್ತಾ ಶತಮಾನಗಳನ್ನೇ ಕ್ರಮಿಸಿದರೂ ಈ ಕಾಲದಲ್ಲೂ ಕೌಟುಂಬಿಕ ಹಿಂಸೆಯ ಬಗ್ಗೆ ಹೆಂಗಸರು ಹೊಸತಾಗಿ ಹೋರಾಟಗಳನ್ನು ಪ್ರಾರಂಭಿಸಬೇಕಾದ್ದು ನಮ್ಮ ಜನಜೀವನದ ಕಟು ಸತ್ಯ. ಹಾಗೆ ನೋಡಿದರೆ, "ಕೌಟುಂಬಿಕ ಹಿಂಸೆ" ಎನ್ನುವುದೇ ನಮ್ಮ "ಮುಂದುವರಿದ" ಜನಾಂಗದ ವಿಪರ್ಯಾಸ. ಯಾವ ಒಂದು ಕುಟುಂಬ, ಮನೆ, ನಮ್ಮ ಜನರು, ಮನೆಯ ಮಗಳನ್ನು, ಹೆಣ್ಣನ್ನು ಕಾಪಾಡಿ, ಬೆಳೆಸಿ, ಪ್ರೀತಿಯಿಟ್ಟು ಪೋಷಿಸಬೇಕೋ ಅಂಥಾ ಕುಟುಂಬ, ಕುಟುಂಬದ ಸದಸ್ಯರು ಅವರದ್ದೇ ಆ ಹೆಣ್ಣುಜೀವದ ಮೇಲೆ ಮಾಡುವ ಹಿಂಸೆ, ಕ್ರೌರ್ಯ– ಮನುಷ್ಯನ ಅತ್ಯಂತ ಬರ್ಬರ ಮುಖವನ್ನು ತೋರಿಸುತ್ತದೆ.

"ಹಿಂಸೆ" ಅನ್ನುವುದು – ಹೊಡೆಯುವುದು, ಬಡೆಯುವುದು, ತುಳಿಯುವುದು – ಹೀಗೆ ದೈಹಿಕ ಹಿಂಸೆಗೆ, ಹೆಚ್ಚೆಂದರೆ ಅವಾಚ್ಯ ಶಬ್ದಗಳಿಂದ ಬೈಯ್ಯುವಂಥ ಮೌಖಿಕ ಹಿಂಸೆಗೆ ಸೀಮಿತವಾಗಿರುವುದು ಎಂದು ಮೇಲ್ನೋಟದಿಂದ ಗ್ರಹಿಸಿರುವ ನಾವು ಎಷ್ಟೋಜನ, "ಅದೆಲ್ಲಾ ನಮ್ಮ ಮನೆಯಲ್ಲಿ ಆಗುವಂಥದಲ್ಲಪ್ಪ" ಎಂಬ "ಸಮಾಧಾನ"ದಲ್ಲಿ ಇದ್ದುಬಿಡುತ್ತೇವೆ. ಅದೇ, ಒಂದೊಂದು ಕುಟುಂಬವನ್ನೂ, ಕೌಟುಂಬಿಕ ಸಂಬಂಧವನ್ನೂ ಹತ್ತಿರದಿಂದ ಅವಲೋಕಿಸಿದಾಗ, ಕ್ರೌರ್ಯ, ಹಿಂಸೆಯ ಹಲವಾರು ಮುಖಗಳು, ವಿಧ, ಬಣ್ಣಗಳನ್ನು ಕಾಣುತ್ತೇವೆ.

ಒಂದು ಸಮಾಜವು ತನ್ನ ಕ್ರೌರ್ಯ, ಕಪಟ, ದುರ್ಬುದ್ಧಿಗಳನ್ನು ಹದ್ದುಬಸ್ತಿನಲ್ಲಿಡಲು, ಜನರ ಸಾಮಾನ್ಯ ಹಕ್ಕುಗಳನ್ನು ಕಾಯಲು, ತಾನೇ ನಿರ್ಮಿಸಿದ ಒಂದು ನ್ಯಾಯ ವ್ಯವಸ್ಥೆಯನ್ನು ಬಳಸುತ್ತದೆ. ಹಾಗಿರುವಾಗ, ಒಂದು ವ್ಯವಸ್ಥೆ, ಕಾನೂನು, ಕಾಯಿದೆಗಳು ಸಮಾಜದ ಇಂಥಾ ಕಠೋರ ವಿಕೃತಿಗಳನ್ನು ಎಷ್ಟು ಸರಿಪಡಿಸಬಲ್ಲುದು ಎಂಬುದು ದೊಡ್ಡ ಪ್ರಶ್ನೆಯೇ ಆಗಿದೆ. ಈ ಪ್ರಶ್ನೆಯನ್ನು ಜೊತೆಯಲ್ಲಿರಿಸಿಕೊಂಡೂ, ಅಂಥಾ ಎಲ್ಲಾ ಕಾಯಿದೆಗಳನ್ನೂ, ಕಾನೂನು ವಯವಸ್ಥೆಯ ರೂಪ, ಅಂಗಗಳನ್ನು ಅರಿಯುವುದು, ಮತ್ತು ಸಾಧ್ಯವಿದ್ದಷ್ಟೂ ಸಮರ್ಪಕವಾಗಿ ಬಳಸುವುದು ಅತೀ ಮುಖ್ಯವಾಗಿಯೇ ಇದೆ.

ಕೌಟುಂಬಿಕ ಹಿಂಸೆಯನ್ನು ನಿಯಂತ್ರಿಸುವಲ್ಲಿ ಇತ್ತೀಚೆಗೆ ಬಂದಂಥ ಕಾನೂನು, "ಕೌಟುಂಬಿಕ ಹಿಂಸೆ ತಡೆ ಕಾಯಿದೆ, 2005". ಅದಕ್ಕೂ ಮೊದಲೇ ಇದ್ದದ್ದು, ಈಗಲೂ ಇರುವ ಕಾಯಿದೆ, 1983ರಲ್ಲಿ ಜಾರಿಗೆ ಬಂದಂಥ, ಐ.ಪಿ.ಸಿ. ಸೆಕ್ಷನ್ 498 A. ಇವೆರಡೂ ಕೌಟುಂಬಿಕ ಹಿಂಸೆ ತಡೆಗಟ್ಟಲು ಈಗ ಇರುವಂಥಾ ಮುಖ್ಯ ಕಾಯಿದೆಗಳು. ಐ.ಪಿ.ಸಿ. ಸೆಕ್ಷನ್ 498 A ಕಾಯಿದೆ ಏನು ಸೂಚಿಸುತ್ತದೋ, ನಿಯಂತ್ರಿಸುತ್ತದೋ, ಅದರಿಂದಲೂ ವಿಶಾಲವಾದ ಸಮಸ್ಯೆಯನ್ನು ಒಂದು ಹೆಣ್ಣು ತನ್ನ ಕುಟುಂಬದಲ್ಲೇ ಅನುಭವಿಸಿತ್ತಾಳೆ ಎಂಬ ಕಾರಣಕ್ಕಾಗಿ ಕೌಟುಂಬಿಕ ಹಿಂಸೆಯ ಎಲ್ಲಾ ಮಜಲು, ಮುಖ, ಒಳ ಆಯಾಮಗಳನ್ನು ಮನಸ್ಸಲ್ಲಿಟ್ಟುಕೊಂಡು 2005ರಲ್ಲಿ "ಕೌಟುಂಬಿಕ ಹಿಂಸೆ ತಡೆ ಕಾಯಿದೆ"ಯನ್ನು ಜಾರಿಗೆ ತರಲಾಯಿತು.

ಐ.ಪಿ.ಸಿ. ಸೆಕ್ಷನ್ 498 A ಹೇಳುತ್ತದೆ:

ಗಂಡ ಅಥವಾ ಗಂಡನ ಯಾವುದೇ ಸಂಬಂಧಿಕರು, ಹೆಣ್ಣಿನ ಮಾನಸಿಕ ಯಾ ದೈಹಿಕ ಸ್ವಾಸ್ಥ್ಯಕ್ಕೆ ಧಕ್ಕೆ ಬರುವಂಥ ಯಾವುದೇ ಹಿಂಸೆ ನೀಡಿದಲ್ಲಿ ಅಥವಾ ವರದಕ್ಷಿಣೆ ಅಥವಾ ಇನ್ನಾವುದೇ ಬೇಡಿಕೆಗಾಗಿ ಯಾವುದೇ ಹಿಂಸೆ ನೀಡಿದಲ್ಲಿ ಅದು ಈ ಕಾಯಿದೆಯ ಪ್ರಕಾರ ಶಿಕ್ಷಾರ್ಹವಾಗುತ್ತದೆ. ಈ ಕಾಯಿದೆಯ ಪ್ರಕಾರ ತಪ್ಪೆಸಗಿದವರು 3 ವರ್ಷಗಳ ವರೆಗಿನ ಕಠಿಣ ಜೈಲುಶಿಕ್ಷೆ ಅನುಭವಿಸಬೇಕಲ್ಲದೇ ದಂಡವನ್ನೂ ತೆರಬೇಕಾಗುತ್ತದೆ. ಇದು ಕ್ರಿಮಿನಲ್ ಕಾಯಿದೆಯಾದ್ದರಿಂದ ಇದರ ವಿಚಾರಣೆ, ಪ್ರಕರಣ ಪೊಲೀಸ್‌ರಿಗೆ ದೂರು ಕೊಡುವಲ್ಲಿಂದ ಪ್ರಾರಂಭ ವಾಗುತ್ತದೆ.

ಕೌಟುಂಬಿಕ ಹಿಂಸೆ ತಡೆ ಕಾಯಿದೆ ಅಥವಾ Protection of Women from Domestic Violence Act ಕುಟುಂಬದಲ್ಲಿ ಹೆಂಗಸಿನ ಮೇಲೆ ಆಗುವ ಹಿಂಸೆ ಮತ್ತು ಅದರ ಬೇರೆ ಬೇರೆ ವಿಧಗಳನ್ನು ಗ್ರಹಿಸಿ, ಯಾವ ರೀತಿಯಲ್ಲಿ ಆಕೆಗೆ ಪರಿಹಾರ ಒದಗಿಸಬಹುದು ಎಂಬುದನ್ನು ಸಮಗ್ರವಾಗಿ ನೋಡಿ, ಪರಿಹಾರ ಒದಗಿಸಲು ಮಾಡಿದ ಕಾಯಿದೆಯಾಗಿದೆ.



"ಕುಟುಂಬ" ಅಂದರೆ ಏನು, "ಹಿಂಸೆ"ಗಳಲ್ಲಿ ಯಾವ ಯಾವ ವಿಧಗಳು, ಯಾವುದೆಲ್ಲಾ "ಕೌಟುಂಬಿಕ ಹಿಂಸೆ"ಯಾಗಬಹುದು, ಯಾರಿಂದ ಹಿಂಸೆಯಾಗಬಹುದು, ಯಾವ ರೀತಿ ಪರಿಹಾರಗಳನ್ನು ಒದಗಿಸಬಹುದು; ಹೀಗೆ ವಿಷಯವನ್ನು ಬಿಡಿಸಿ, ಅವಲೋಕಿಸಿ, ಇವುಗಳಿಗೆ ಈ ಕಾಯಿದೆ ನೀಡಿರುವ ವಿವರಣೆ, ಶಬ್ದಾರ್ಥಗಳು ಹಾಗೂ ಅದರ ಸಾಧ್ಯತೆಗಳು – ಕಾನೂನು ವಲಯದಲ್ಲಿ ಸಾಧಿಸಿರುವ ದೊಡ್ಡ ಮೆಟ್ಟಲಾಗಿದೆ.

ಈ ಕಾಯಿದೆಯನ್ವಯ "ಹಿಂಸೆ" ಎಂದರೆ:

- **ದೈಹಿಕ:** ಹೊಡೆಯುವುದು, ನೂಕುವುದು, ತುಳಿಯುವುದು, ಇನ್ಯಾವುದೇ ದೇಹಕ್ಕೆ ಮಾಡುವ ಹಿಂಸೆ
- **ಮೌಖಿಕ:** ಬೈಯ್ಯುವುದು, ಹೀಯಾಳಿಸುವುದು, ವ್ಯಂಗ್ಯ ನುಡಿಯುವುದು ಇತ್ಯಾದಿ
- **ಮಾನಸಿಕ:** ಕೀಳಾಗಿ ಕಾಣುವುದು, ದೂರ ಇಡುವುದು, ಮಾತನಾಡದೇ ಇರುವುದು, ಮಕ್ಕಳನ್ನು ದೂರವಿಡುವುದು, ಶೀಲದಬಗ್ಗೆ ಸಂಶಯ ಪಡುವುದು, ಅಸಹ್ಯ ರೀತಿಯಿಂದ ನೋಡುವುದು ಇತ್ಯಾದಿ ಭಾವನೆಗಳ ಮೇಲೆ ಎಸಗುವ ಹಿಂಸೆ
- **ಲೈಂಗಿಕ:** ಇಚ್ಛೆಯ ವಿರುದ್ಧ ಲೈಂಗಿಕ ಕ್ರಿಯೆ, ಲೈಂಗಿಕ ಸಂಬಂಧ ಬಯಸುವುದು, ಅದಕ್ಕಾಗಿ ಒತ್ತಾಯ ಪಡಿಸುವುದು, ಇಚ್ಛೆಯ ವಿರುದ್ಧ ಲೈಂಗಿಕ ಉದ್ದೇಶದಿಂದ ಮುಟ್ಟುವುದು, ಲೈಂಗಿಕ ಅರ್ಥ ಬರುವ ಮಾತಾಡುವುದು, ಚೀಟಿ, ಎಸ್.ಎಮ್.ಎಸ್/ ಇ-ಮೇಲ್ ಕಳಿಸುವುದು ಇತ್ಯಾದಿ
- **ಆರ್ಥಿಕ:** ಅವಳು ದುಡಿದ ಹಣದಲ್ಲಿ ಬಲವಂತದಿಂದ ಪಾಲು ಕೇಳುವುದು, ಹಣವನ್ನು ಹೀಗೇ ವ್ಯಯಿಸಬೇಕೆಂದು ಒತ್ತಾಯಿಸುವುದು, ಆಸ್ತಿಯಲ್ಲಿ ಪಾಲು ಕೊಡಲು ಬಲವಂತಪಡಿಸುವುದು, ಕೆಲಸಕ್ಕೆ ಹೋಗಿ ಮನೆಯನ್ನು, ತಮ್ಮನ್ನು ನೋಡಿಕೊಳ್ಳುವಂತೆ ಬಲವಂತ ಹೇರುವುದು ಇತ್ಯಾದಿ

"ಕುಟುಂಬ" ಎಂದರೆ: ಕೂಡಿ ಬಾಳುವ ಮನೆ/ ಸಂಸಾರ

ಹಾಗಾಗಿ, **"ಕುಟುಂಬದ ಸದಸ್ಯ"** ಎಂದರೆ:

ಮದುವೆಯಿಂದಾದ ಸಂಬಂಧವಿರಬಹುದು: ಗಂಡ, ಅತ್ತೆ, ಮಾವ, ಗಂಡನ ಸಂಬಂಧಿಕರು.

ರಕ್ತಸಂಬಂಧಿ: ತಂದೆ, ಸೋದರ, ಸೋದರಿ, ಜೊತೆಗೆ ವಾಸಿಸುತ್ತಿರುವ ತಂದೆ-ತಾಯಿಯ ರಕ್ತಸಂಬಂಧಿಕರು.

ಒಂದೇ ಮನೆಯಲ್ಲಿ ವಾಸಿಸುತ್ತಿರುವ ಇನ್ನಿತರ ಸಂಬಂಧಿ, ಕುಟುಂಬದಲ್ಲಿ ವಾಸಿಸುತ್ತಿರುವ ದೂರದ ಸಂಬಂಧಿ, ಸ್ನೇಹಿತರು.

ಮದುವೆಯಂತಹ ಸಂಬಂಧ: ಕಾನೂನಿನನ್ವಯ ಮದುವೆ ಎಂದು ಗುರುತಿಸಲಾಗದ ಆದರೆ ಮದುವೆಯಂಥ ಸಂಬಂಧ, ಸಂಗಾತಿ, ಸ್ನೇಹಿತ

ಈ ಕಾನೂನಿನನ್ವಯ **ಪರಿಹಾರಗಳು** ಈ ಬಗೆಯವಾಗಿರಬಹುದು:

ರಕ್ಷಣೆ ನೀಡುವಂತೆ ಆದೇಶ, ವಾಸಸ್ಥಳ ನೀಡುವಂತೆ ಆದೇಶ, ತಪ್ಪು ಮಾಡಿದವರಿಂದ ಆರ್ಥಿಕ ಪರಿಹಾರ ಅಥವಾ ಇನ್ಯಾವುದೇ ಬಗೆಯ ಪರಿಹಾರ ಸೂಚಕ ಆದೇಶ. ಈ ಆದೇಶವನ್ನು ಉಲ್ಲಂಘಿಸಿದಲ್ಲಿ, ನ್ಯಾಯಾಲಯವು ರೂ.20,000 ಅಥವಾ ಒಂದು ವರ್ಷ ಜೈಲುವಾಸ ಅಥವಾ ಎರಡನ್ನೂ ವಿಧಿಸಬಹುದು.

ಇಷ್ಟು ಪ್ರಾಥಮಿಕ ಅಂಶಗಳನ್ನು ಗಮನದಲ್ಲಿರಿಸಿಕೊಂಡು, ಈಗ ಕೆಲವು ಉದಾಹರಣೆಗಳನ್ನು ನೋಡೋಣ:

1. ಆಕೆಗೆ ತನ್ನ ಗಂಡ ಮತ್ತು ಅವನ ತಾಯಿ, ತಂಗಿ-ಮೂರೂ ಜನ ಅಗಾಗ ಹೊಡೆದು, ಬೈದು ಹಿಂಸಿಸುತ್ತಾರೆ. ಉಣ್ಣಲೂ ನೀಡುವುದಿಲ್ಲ. ಯಾವಾಗಲೂ ಅವಳ ತಂದೆಯ ಮನೆಯಿಂದ ಹಣ ತರುವಂತೆ ಒತ್ತಾಯಿಸುತ್ತಾ ಹಿಂಸಿಸುತ್ತಾರೆ.

   ಹಿಂಸೆ: ದೈಹಿಕ, ಮಾನಸಿಕ, ಮೌಖಿಕ, ಆರ್ಥಿಕ.

   ಕೇಳಬಹುದಾದ ಪರಿಹಾರ: ಹಿಂಸೆ ನಿಯಂತ್ರಣಾ ಆದೇಶ, ರಕ್ಷಣಾ ಆದೇಶ, ಆರ್ಥಿಕ ಪರಿಹಾರ, ಬೇರೆ ವಾಸಸ್ಥಳ ನೀಡಬೇಕಾಗಿ ಆದೇಶ.

2. ಆಕೆಯ ಸಂಗಾತಿ ಅವಳು ದುಡಿದ ಹಣ ಪ್ರತೀ ತಿಂಗಳು ತಂದು ತನಗೇ ಕೊಡಬೇಕೆಂದು ಬಲವಂತ ಪಡಿಸುತ್ತಾನೆ.

   ಹಿಂಸೆ: ಆರ್ಥಿಕ ಹಿಂಸೆ, ಮಾನಸಿಕ ಹಿಂಸೆ

   ಕೇಳಬಹುದಾದ ಪರಿಹಾರ: ನಿಯಂತ್ರಣಾ ಆದೇಶ, ಈ ವರೆಗೆ ಅವಳು ಆತನಿಗೆ ಕೊಟ್ಟಿರುವ ಹಣ ವಾಪಾಸು ಮಾಡುವಂತೆ ಆದೇಶ, ಆರ್ಥಿಕ ಪರಿಹಾರ.

3. ಆಕೆ ಓದಲೆಂದು ತನ್ನ ದೂರದ ಸಂಬಂಧಿಯಾದ ಮಾವನ ಮನೆಯಲ್ಲಿದ್ದು ಕಾಲೇಜಿಗೆ ಹೋಗಿಬರುತ್ತಿರುತ್ತಾಳೆ. ಆ ಮಾವನ ಮಗ ಅವಳನ್ನು ಲೈಂಗಿಕ ಕ್ರಿಯೆಗೆ ಒತ್ತಾಯಿಸುತ್ತಿರುತ್ತಾನೆ, ಹಾಗೂ ಅದನ್ನೇ ಸೂಚಿಸುತ್ತಾ ಎಸ್.ಎಮ್.ಎಸ್. ಕಳಿಸುತ್ತಿರುತ್ತಾನೆ.

   ಹಿಂಸೆ: ಮಾನಸಿಕ ಹಿಂಸೆ, ಲೈಂಗಿಕ ಹಿಂಸೆ.

   ಕೇಳಬಹುದಾದ ಪರಿಹಾರ: ನಿಯಂತ್ರಣಾ ಆದೇಶ, ಆರ್ಥಿಕ ಪರಿಹಾರ.

4. ಆಕೆಗೆ ಮದುವೆಯಾಗಿ ಎರಡು ವರ್ಷವಾಗಿದೆ, ಮಕ್ಕಳಾಗಿಲ್ಲ; ಹಾಗಾಗಿ ಅವಳ ಗಂಡ ಹಾಗೂ ಮನೆಯವರು ಅವಳನ್ನು ನಿರುಪಯೋಗಿ, ಬಂಜೆ ಎಂದು ಹಂಗಿಸುತ್ತಿರುತ್ತಾರೆ.

   ಹಿಂಸೆ: ಮಾನಸಿಕ, ಮೌಖಿಕ.

   ಕೇಳಬಹುದಾದ ಪರಿಹಾರ: ನಿಯಂತ್ರಣಾ ಆದೇಶ.

5. ಆಕೆ ವಿಧವೆ, ಅವಳಿಗೆ ವಾಸಿಸಲು ಬೇರೆ ಮನೆಯಿಲ್ಲ. ಅವಳನ್ನು ಅವಳ ಗಂಡನ ಮನೆಯವರು, ಅವಳು ವಾಸಿಸುತ್ತಿರುವ ಮನೆಯಿಂದ ಹೊರಹಾಕಲು ಪ್ರಯತ್ನಿಸುತ್ತಿದ್ದಾರೆ.

   ಹಿಂಸೆ: ಮಾನಸಿಕ.

   ಕೇಳಬಹುದಾದ ಪರಿಹಾರ: ನಿಯಂತ್ರಣಾ ಆದೇಶ, ರಕ್ಷಣಾ ಆದೇಶ, ವಾಸಸ್ಥಳ ನೀಡಬೇಕಾಗಿ ಆದೇಶ.

6. ಆಕೆಯ ಗಂಡ ಪ್ರತೀ ನಿತ್ಯ, ದಿನ-ರಾತ್ರಿಯೆನ್ನದೇ ತನಗೆ ಬೇಕೆನಿಸಿದಾಗ, ಅವಳ ಇಚ್ಛೆಯ ವಿರುದ್ಧ ಅವಳು ತನ್ನ ಲೈಂಗಿಕ ಬಯಕೆಯನ್ನು ತೃಪ್ತಿ ಪಡಿಸಬೇಕಾಗಿ ಪೀಡಿಸುತ್ತಾನೆ.

   ಹಿಂಸೆ: ಲೈಂಗಿಕ.

   ಕೇಳಬಹುದಾದ ಪರಿಹಾರ: ನಿಯಂತ್ರಣಾ ಆದೇಶ, ರಕ್ಷಣಾ ಆದೇಶ.

7. ಆಕೆ 15-16 ವರ್ಷದ ಯುವತಿ. ಆಕೆಗೆ ತಾಯಿ ಇಲ್ಲ. ಅವಳಿಗೆ ಇಬ್ಬರು ತಮ್ಮಂದಿರು. ಅವರ ತಂದೆ ಅವಳು ದುಡಿದು ಮನೆ ನಡೆಸಬೇಕೆಂದು ತಾಕೀತು ಮಾಡಿದ್ದಾನೆ. ಹಾಗೂ ಹಾಗೆ ಮಾಡದಿದ್ದಲ್ಲಿ ಅವಳಿಗೆ ಹೊಡೆಯುತ್ತಾನೆ.

   ಹಿಂಸೆ: ದೈಹಿಕ, ಮಾನಸಿಕ, ಆರ್ಥಿಕ.

   ಕೇಳಬಹುದಾದ ಪರಿಹಾರ: ನಿಯಂತ್ರಣಾ ಆದೇಶ, ರಕ್ಷಣಾ ಆದೇಶ, ಆರ್ಥಿಕ ಪರಿಹಾರ; ಆತ ಅವಳನ್ನೂ, ತನ್ನ ಇನ್ನಿಬ್ಬರು ಮಕ್ಕಳನ್ನೂ ನೋಡಿಕೊಳ್ಳಬೇಕಾಗಿ ಆದೇಶ.


ಹೀಗೇ, ಓದುವುದು/ ಕೆಲಸಕ್ಕೆ ಹೋಗುವುದರಿಂದ ತಡೆಯುವುದು, ರೂಪ, ಬಣ್ಣದ ಬಗ್ಗೆ ಹಂಗಿಸುವುದು, ಅನುಮಾನ ಪಡುವುದು, ಮದುವೆಗೆ ಒತ್ತಾಯ ಪಡಿಸುವುದು, ವಯಸ್ಸಿಗೆ ಬಂದವಳನ್ನು ಮದುವೆ ಆಗುವುದರಿಂದ ತಡೆಯುವುದು, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸುವುದು, ಆತ್ಮಹತ್ಯೆಗೆ ಪ್ರಚೋದಿಸುವುದು-ಇವೆಲ್ಲವೂ ಬೇರೆ ಬೇರೆ ಬಗೆಯ, ಒಂದಲ್ಲ ಒಂದು ರೀತಿಯ ಹಿಂಸೆಯಾಗಿವೆ. ಹಾಗೂ

ಇವೆಲ್ಲಾ ಸಂದರ್ಭಗಳಲ್ಲಿ ನ್ಯಾಯಾಲಯದ ಆದೇಶ, ಪರಿಹಾರ ಪಡೆಯಬಹುದಾಗಿದೆ.

ಇಷ್ಟೇ ಅಲ್ಲದೆ ಈ ಕಾಯಿದೆಯನ್ವಯ ರಕ್ಷಣಾ ಅಧಿಕಾರಿಗಳು, ಸೇವಾ ಕೇಂದ್ರಗಳೂ ಇರುತ್ತವೆ. "ರಕ್ಷಣಾಧಿಕಾರಿ"ಯು, ದೂರು ಸಲ್ಲಿಸಲು, ಅರ್ಜಿ ಸಲ್ಲಿಸಲು, ಬೇಕಾದಲ್ಲಿ ಕೌನ್ಸಲಿಂಗ್, ವೈದ್ಯಕೀಯ ಸಲಹೆ ಪಡೆಯಲು, ಮತ್ತು ಕೋರ್ಟ್(ನ್ಯಾಯಾಲಯ) ನೀಡುವ ಆದೇಶ ಜಾರಿಗೆ ತರಲು ಬೇಕಾದ ಸಹಾಯ ಒದಗಿಸುತ್ತಾರೆ. ಮತ್ತು, ಮಹಿಳೆಯರಿಗೆ ಸೇವೆಯನ್ನು ನೀಡಲು ಶಕ್ತವಿರುವ ಸ್ವಯಂ ಸೇವಾ ಸಂಸ್ಥೆಗಳನ್ನು ಸರ್ಕಾರವು ಈ ಕಾಯಿದೆಯಡಿಯಲ್ಲಿ "ಸೇವಾ ಕೇಂದ್ರ"ಗಳಾಗಿ ನೋಂದಾಯಿಸಿರುತ್ತದೆ. ಈ ಅಂಗಗಳೂ ಕೌಟುಂಬಿಕ ಹಿಂಸೆ ತಡೆಗಟ್ಟುವಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತವೆ.

ಹೀಗೆ, ಮೇಲೆ ಹೇಳಿರುವ ಅಥವಾ ಇನ್ನಾವುದೇ ಹಿಂಸೆಯಾದಾಗ, ಒಬ್ಬ ಹೆಂಗಸು ಈ ಕಾಯಿದೆಯಲ್ಲಿ ಹೇಳಿರುವಂತೆ ರಕ್ಷಣಾ ಅಧಿಕಾರಿಗೆ, ಸೇವಾ ಕೇಂದ್ರಕ್ಕೆ, ಪೊಲೀಸರಿಗೆ ಅಥವಾ ನೇರವಾಗಿ ಕೋರ್ಟ್‌ನಲ್ಲಿ ದೂರು ಸಲ್ಲಿಸಬಹುದು, ಅಥವಾ ಆಕೆಯ ಪರವಾಗಿ ಯಾರಾದರೂ ದೂರು ಸಲ್ಲಿಸಬಹುದಾಗಿದೆ. ಮತ್ತು ಅರ್ಜಿ ಸಲ್ಲಿಸಿ 60 ದಿನದೊಳಗೆ ನ್ಯಾಯಾಲಯವು(ಕೋರ್ಟ್) ಆದೇಶ ನೀಡಬೇಕಾಗಿದೆ.

ಇಷ್ಟೆಲ್ಲಾ ಈ ಕಾಯಿದೆ ಹೇಳುತ್ತಿದ್ದರೂ, ವಾಸ್ತವದಲ್ಲಿ ಒಬ್ಬಾಕೆ ಕೌಟುಂಬಿಕ ಹಿಂಸೆಯಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾದರೆ ಬಹಳಷ್ಟು ಹೋರಾಟವೇ ನಡೆಸಬೇಕಾಗಿದೆ. ಒಂದು ದೊಡ್ಡ ಜಟಿಲ ವ್ಯವಸ್ಥೆ ಯಾವುದೆಲ್ಲಾ ಮಿತಿಗಳನ್ನು ಹೊಂದಬಹುದೋ ಅವೆಲ್ಲಾ ಮಿತಿಗಳು ಈ ಕಾಯಿದೆ, ಕಾನೂನು ವ್ಯವಸ್ಥೆಯಲ್ಲೂ ಇವೆ. ಹಿಂಸೆಯಾದೊಡನೇ ಕೌಟುಂಬಿಕ ವಿಷಯವನ್ನು ಅಧಿಕಾರಿಗಳ ಮುಂದೆ ಹೇಳಿಕೊಳ್ಳುವುದು ಹೇಗೆ ಎನ್ನುವ ಸಂಕೋಚ ಹೆಂಗಸರಿಗೆ ಸಹಜವಾಗಿ ಇರುವುದರಿಂದ ಮೊದಲಾಗಿ, ಅಷ್ಟೂ ಮೀರಿ ಆಕೆ ಹೋದರೂ, ಆ ವ್ಯವಸ್ಥೆಯಲ್ಲಿ ಆಕೆ ಎದುರಿಸಬೇಕಾಗುವ ಕಷ್ಟಗಳೂ ಹಲವಾರಿವೆ. ಪೊಲೀಸರು, ರಕ್ಷಣಾ ಅಧಿಕಾರಿಗಳು, ಸೇವಾ ಕೇಂದ್ರಗಳನ್ನು ಗುರುತಿಸಿ ಅವರ ಸೇವೆಗಳ ಸೌಲಭ್ಯ ಪಡೆಯುವುದು ಒಂದು ಸಾಹಸವಾದರೆ, ಅವರು ಸಿಕ್ಕರೂ ಅವರಲ್ಲಿ ಸಮಯದ ಅಭಾವವೋ, ಸಿಬ್ಬಂದಿಗಳ ಕೊರತೆಯೋ ಇರಬಹುದು. ನ್ಯಾಯಾಂಗ ವ್ಯವಸ್ಥೆಯು ಇನ್ನೂ ಈ ಕಾಯಿದೆಗೆ ಬೇಕಾದ ಮಾನಸಿಕ, ಬೌದ್ಧಿಕ ತಯಾರಿಯಿಲ್ಲದೇ, "ಇದ್ಯಾವ ಗೋಳಪ್ಪಾ" ಎಂಬ ರೀತಿಯಲ್ಲಿ ಈ ಅರ್ಜಿಗಳನ್ನು ಕಾಣುವ ಸಂದರ್ಭಗಳನ್ನೂ ಮಹಿಳೆಯರು ಅನುಭವಿಸುತ್ತಿದ್ದಾರೆ. ಒಳ್ಳೆಯ ಆದೇಶಗಳನ್ನು ಮಹಿಳೆ ಪಡೆಯುವಲ್ಲಿ ಸಫಲಳಾದರೂ, ಅದನ್ನು ತಪ್ಪು ಮಾಡಿದವ ಉಲ್ಲಂಘಿಸಿದರೆ, ಆಕೆ ಮತ್ತೆ ಮುಂದಿನ ಆದೇಶಕ್ಕೆ ನ್ಯಾಯಾಲಯದ



ಮೊರೆಹೋಗಬೇಕಾಗಿದೆ; ಅಥವಾ ಆತ, ತನ್ನ ವಿರುದ್ಧವಾಗಿ ಬಂದ ಆದೇಶ ತನಗೆ ಸಮರ್ಪಕವಾಗಿ ತೋರುತ್ತಿಲ್ಲ ಎನಿಸಿದರೆ ಮೇಲಿನ ನ್ಯಾಯಾಲಯಕ್ಕೆ ಅಪೀಲ್ (ಮನವಿ) ಸಲ್ಲಿಸಬಹುದಾಗಿದೆ. ಇವೆಲ್ಲಾ ಅಂಶಗಳು ಬಹಳ ಸಮಯವನ್ನು ತೆಗೆದುಕೊಳ್ಳುತ್ತವೆ, ಹಾಗೂ ಪರಿಹಾರವೆನ್ನುವುದು ದೂರದ ಆಸೆಯಾಗಿಯೇ ಉಳಿಯಬಹುದು.

ಒಂದು ಸಲಹೆಯೆಂದರೆ, ಪ್ರತೀ ವಲಯದಲ್ಲೂ, ಅಲ್ಲಿನ ರಕ್ಷಣಾ ಅಧಿಕಾರಿಗಳು, ಸೇವಾ ಕೇಂದ್ರಗಳು ಯಾರೆಂದು ಗುರುತಿಸುವುದು, ಹೆಂಗಸರಪರ ಸೂಕ್ಷ್ಮಸಂವೇದನೆಯನ್ನು ಇಟ್ಟುಕೊಂಡು ಕೆಲಸ ಮಾಡುವಂಥಾ ವಕೀಲರನ್ನು ಗುರುತಿಸುವುದು, ಇವರೆಲ್ಲರ ಸಂಪರ್ಕ ವಿವರಗಳ ಸಿದ್ಧಪಟ್ಟಿ ಮಾಡಿಡುವುದು; ಮತ್ತು ಇವರೊಡನೆ ಹಾಗೂ ಪೊಲೀಸ್ ಠಾಣೆಗಳಲ್ಲಿನ ಅಧಿಕಾರಿಗಳೊಡನೆ ಜನರು, ವೇದಿಕೆಗಳು ಸಂವಾದ ಏರ್ಪಡಿಸಿ, ಈ ಕಾಯಿದೆ, ಹೆಂಗಸರು ಎದುರಿಸುತ್ತಿರುವ ಒತ್ತಡ, ಹಿಂಸೆಗಳ ಬಗ್ಗೆ ಅವರಲ್ಲಿ ಸಂವೇದನೆಯನ್ನು ಉಂಟುಮಾಡಿ, ನಿರಂತರ ಸಂಪರ್ಕದಲ್ಲಿಟ್ಟುಕೊಳ್ಳುವುದು. ಹೀಗೆ ಒಂದು ಜನಸಮುದಾಯ ಹಾಗೂ ವ್ಯವಸ್ಥೆಯ ನಡುವೆ ಸಂಬಂಧ ಏರ್ಪಟ್ಟಾಗ, ಈ ಕಾಯಿದೆಯ ಉಪಯೋಗವನ್ನು ಹೆಚ್ಚು ಸಮರ್ಪಕವಾಗಿ ಪಡೆಯಬಹುದಾಗಿದೆ ಎಂಬುದು ಈ ಲೇಖಕಳ ಅನಿಸಿಕೆ.

ಇವೆಲ್ಲಾ ಒಂದು ವ್ಯವಸ್ಥೆಯಲ್ಲಿ ಬರುವ ನ್ಯೂನತೆಗಳು. ಇವೆಲ್ಲವನ್ನು ಗಣನೆಗೆ ತೆಗೆದುಕೊಂಡರೂ, ಈ ಕಾಯಿದೆ ಸಾಧಿಸಿರುವುದು ಒಂದು ಮಹತ್ತರವಾದ ಘಟ್ಟವೇ ಆಗಿದೆ. ಇಲ್ಲಿಯವರೆಗೆ ನಮ್ಮ ಕಾನೂನಿನ ವ್ಯವಸ್ಥೆ ಗುರುತಿಸಿರದ "ಹಿಂಸೆ"ಯ ಬಹುರೂಪೀ ಗುಣ, ಸ್ಥರಗಳನ್ನು, ಮುಖಗಳನ್ನು ಈ ಕಾಯಿದೆ ಗುರುತಿಸಿದೆ. ಅದುವೇ ಈ ಕಾಯಿದೆಯ ಬಹು ಮುಖ್ಯ ಸಾಧನೆ. ಹಾಗೇ ಈ ಕಾನೂನಿನ ಸಮರ್ಪಕ ಬಳಕೆ ಹೆಚ್ಚಿದಂತೆ ಅದರ ಗುಣವೂ ವೃದ್ಧಿಸಬಹುದಾಗಿದೆ. ಬಳಸಿದಂತೆ ಅದರ ನ್ಯೂನತೆಗಳನ್ನು ತಿದ್ದುಪಡಿಗಳ ಮೂಲಕ ಸರಿಪಡಿಸುವ ಕಾರ್ಯವನ್ನೂ ಮಾಡಬಹುದಾಗಿದೆ. ❑

"ಹೆಂಗಸರ ಸರಾಸರಿ ವರ್ಷ 50 ಎಂದಾದರೆ ಶೇ. 16.66 ಆಕೆಯ ದಿನಗಳು, ಅಂದರೆ 8.33 ವರ್ಷಗಳು. ಅಂದರೆ ಸುಮಾರು 73 ಸಾವಿರ ಗಂಟೆಗಳನ್ನು ಆಕೆ ಅಡಿಗೆ ಮನೆಯ ಒಳಗೆ ಕಳೆಯುತ್ತಾಳೆ. ಇದು ಬರೀ ಅಡಿಗೆಮನೆಯ ಕೆಲಸಗಳು... ಇದರಲ್ಲಿ ತರಕಾರಿ ಹೆಚ್ಚುವುದು, ನೆಲ ಸಾರಿಸುವುದು, ಮಾರುಕಟ್ಟೆಗೆ ಹೋಗುವುದು, ಮಸಾಲೆ ತಯಾರಿಸುವುದು, ಅಕ್ಕಿಬೇಳೆ ಶುಭ್ರಗೊಳಿಸುವುದು ಇತ್ಯಾದಿ ಬಿಟ್ಟು... ಸುಖ ಕೊಡುವ ಗೊಂಬೆಯಾದ ಹೆಣ್ಣು ತನ್ನ ಮನಃಸ್ಥಿತಿ, ಆಯಾಸ ಯಾವುದನ್ನೂ ಲೆಕ್ಕಿಸದೆ ಗಂಡ ಬಯಸಿದಾಗ ಬಂದು ಬತ್ತಲೆಯಾಗಿ ಮಲಗಬೇಕಾದ ಚರ್ಮದ ಗೊಂಬೆ. ಇದು ಅತ್ಯಾಚಾರವಲ್ಲದೆ ಮತ್ತೇನು?...."

–ರಶ್ಮಿ ಮಯೂರ, ಪರಿಸರವಾದಿ

(ಉದ್ಧೃತ : ಮಹಿಳೆಯರೇ ಮತ್ತು ಮಹಿಳೆಯರೆ)



ಅತ್ಯಾಚಾರಗಳಿಗೆ ಕೊನೆಯಿಲ್ಲವೆ?

■ ಡಾ. ಕೆ. ಷರೀಫಾ

ಒಬ್ಬ ಮಹಿಳೆಯೇ ಮುಖ್ಯಮಂತ್ರಿಯಾಗಿರುವ ಉತ್ತರಪ್ರದೇಶದಲ್ಲಿ ಎರಡು ದಿನದಲ್ಲಿ ಎಂಟು ಅತ್ಯಾಚಾರ ಪ್ರಕರಣಗಳು ನಡೆದಿವೆ. ಮಹಿಳೆಯರ ಮೇಲಿನ ಹಿಂಸೆ, ಕ್ರೌರ್ಯ, ದೌರ್ಜನ್ಯ, ಬಲಾತ್ಕಾರ, ಕೊಲೆ ಪ್ರಕರಣಗಳಲ್ಲಿ ಮಹಿಳೆಯ ರಕ್ಷಣೆಗೆ ನಿಲ್ಲಬೇಕಾದ ಪೊಲೀಸು, ಕೋರ್ಟು, ರಾಜಕೀಯಗಳು ಅಪರಾಧಿಗಳನ್ನು ನ್ಯಾಯಾಲಯದ ಕಟಕಟೆಯಲ್ಲಿ ನಿಲ್ಲಿಸಿ ಶಿಕ್ಷೆಗೊಳಪಡಿಸುವ ಬದಲು ಅವರಿಗೆ ರಕ್ಷಣೆ ನೀಡಲು ಧಾವಿಸುತ್ತಿವೆ. ಹಾಗಾದರೆ ಕೋರ್ಟು, ಪೊಲೀಸು, ವ್ಯವಸ್ಥೆ ಯಾರ ಪರವಾಗಿವೆ? ಉತ್ತರಪ್ರದೇಶದಲ್ಲಿಯೂ ಅತ್ಯಾಚಾರ, ಸಾಮೂಹಿಕ ಅತ್ಯಾಚಾರ ಪ್ರಕರಣಗಳನ್ನು ಪೊಲೀಸರು ಮುಚ್ಚಿಹಾಕುವ ಪ್ರಯತ್ನ ಮಾಡಿರುವುದು ವರದಿಯಾಗಿದೆ. ಇಟಾದ ಮಹಿಳೆಯೊಬ್ಬರ ಮೇಲೆ ಐವರು ಸಾಮೂಹಿಕ ಅತ್ಯಾಚಾರ ಮಾಡಿದ ನಂತರ ಅವಳನ್ನು ಜೀವಂತವಾಗಿ ಸುಟ್ಟು ಹಾಕಿದ್ದಾರೆ. ಅಷ್ಟೇ ಅಲ್ಲದೆ ಅವಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ, ಯಾವ ಅತ್ಯಾಚಾರವೂ ಆಕೆಯ ಮೇಲೆ ನಡೆದಿಲ್ಲವೆಂದು ಇಡೀ ಘಟನೆಯನ್ನೇ ಪೊಲೀಸರು ಮುಚ್ಚಿ ಹಾಕಲು ಪ್ರಯತ್ನಿಸಿದರು.

ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ, ಕೊಲೆಗಳು ನಡೆದಾಗ, ಸುಟ್ಟು ಸಾಯಿಸಿದಾಗ ಅವಳಿಗೆ ಹೊಟ್ಟೆ ನೋವಿತ್ತು. ಅದಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಇಡೀ ಪ್ರಕರಣವನ್ನು ಮುಚ್ಚಿಹಾಕುತ್ತಾರೆ. 'ಮಗಳೇ ಹೊರಟು ಹೋದಳು, ಮತ್ಯಾಕೆ ಕೋರ್ಟು ಕಛೇರಿ ಎಂದು ತಂದೆ, ತಾಯಿಗಳು ಸುಮ್ಮನಾಗುತ್ತಾರೆ. ಇಲ್ಲವಾದರೆ', ಒಳಗಿಂದೊಳಗೆ ಕೊಲೆಗಡುಕರು ಅವರನ್ನೂ ಆಮಿಷದ ಅಂಚಿಗೆ ತಳ್ಳುತ್ತಾರೆ. ಜನ ಎಚ್ಚೆತ್ತು ಪ್ರತಿಭಟಿಸಿದಾಗ, ಸಾಮೂಹಿಕವಾಗಿ ಐದು ಜನರು ಆಕೆಯ ಮೇಲೆ ಅತ್ಯಾಚಾರ ಮಾಡಿಲ್ಲ. ಒಬ್ಬರು ಮಾತ್ರ ಮಾಡಿದ್ದಾರೆಂದು ಪೊಲೀಸ್ ಇಲಾಖೆಯೇ ಹೇಳಿಕೆ ನೀಡುವುದರ ಮೂಲಕ ಘಟನೆಯ ತೀವ್ರತೆಯನ್ನು ತಗ್ಗಿಸುತ್ತದೆ. ಅಪರಾಧಿಗಳನ್ನು ಅವಳು ಗುರುತಿಸುತ್ತಾಳೆಂಬ ಕಾರಣಕ್ಕಾಗಿಯೇ ಅವರು ಅವಳನ್ನು ಸುಟ್ಟು ಹಾಕಿರಬಹುದು.

ಹೆಣ್ಣು ತನ್ನಮೇಲೆ ನಡೆಯುವ ಅತ್ಯಾಚಾರವನ್ನು ಪ್ರತಿಭಟಿಸುವಂತೆಯೂ ಇಲ್ಲ. ಉತ್ತರಪ್ರದೇಶದ ಕನೌಜ್ ಜಿಲ್ಲೆಯ ದಲಿತ ಜನಾಂಗದ ಅಪ್ರಾಪ್ತ ಬಾಲಕಿ ತನ್ನ ಮೇಲೆ ಅತ್ಯಾಚಾರ ಮಾಡುವುದನ್ನು ಪ್ರತಿಭಟಿಸಿದ್ದಕ್ಕಾಗಿ ಅವಳ ಕಣ್ಣುಗಳಿಗೆ ಚಾಕುವಿನಿಂದ ಇರಿದು ಕ್ರೂರವಾಗಿ ಹಿಂಸಿಸಲಾಗಿದೆ. ಈ ಪ್ರಕರಣವನ್ನು ದಾಖಲಿಸಿಕೊಳ್ಳಲು ವಿಫಲರಾದ ಪೊಲೀಸು ಇಲಾಖೆಯ ಕಾನ್‌ಸ್ಟೇಬಲ್ ಹಾಗೂ ಸಬ್‌ಇನ್ಸ್‌ಪೆಕ್ಟರ್‌ನನ್ನು ಉತ್ತರಪ್ರದೇಶ ಸರ್ಕಾರ ಅಮಾನತ್ತುಗೊಳಿಸಿದೆ. ಪೊಲೀಸು ಇಲಾಖೆಯ ಭ್ರಷ್ಟತೆಯ ಕಾರಣಕ್ಕಾಗಿಯೇ ಅನೇಕ ಅತ್ಯಾಚಾರ ಪ್ರಕರಣಗಳನ್ನು ಮುಚ್ಚಿಹಾಕಲಾಗುತ್ತಿದೆ ಅಥವಾ ತಿರುಚಲ್ಪಡುತ್ತಿವೆ. ಬಡ ಹೆಣ್ಣುಮಕ್ಕಳ ಕುಟುಂಬದವರು ಮರ್ಯಾದೆಗೆ ಹೆದರಿಯೋ, ಅತ್ಯಾಚಾರಿಗಳು ಆರ್ಥಿಕ, ರಾಜಕೀಯವಾಗಿ ಬಲಿಷ್ಠರಾಗಿದ್ದಾಗ ಹಾಗೂ ಪೊಲೀಸ್ ಇಲಾಖೆಗೆ ಲಂಚ ನೀಡಲು ಆಗದಿರುವುದಕ್ಕೆ ಇಂತಹ ಪ್ರಕರಣಗಳು ದಾಖಲಾಗುವುದೇ ಇಲ್ಲ. ಅಪರಾಧಿಗಳು ಸುಲಭವಾಗಿ ಕಾನೂನಿನಿಂದ ಜಾರಿಕೊಳ್ಳಲು ಸಾಧ್ಯವಾಗುತ್ತಿರುವುದರಿಂದ ಅಪರಾಧಿಗಳ ಮನೋಬಲ ಗಟ್ಟಿಯಾಗುತ್ತಿದೆ.

ಇತ್ತೀಚೆಗೆ ಲಖೀಂಪುರಖೇರಿ ಜಿಲ್ಲೆಯ ಪೊಲೀಸ್ ಠಾಣೆಯ ಆವರಣದಲ್ಲಿಯೇ ಒಂದು ಘಟನೆ ನಡೆಯಿತು. ಕೇವಲ ಹದಿನಾಲ್ಕು ವರ್ಷ ವಯಸ್ಸಿನ ಬಾಲಕಿಯ ಶವ ಪೊಲೀಸು ಕಛೇರಿಯ ಆವರಣದ ಮರವೊಂದಕ್ಕೆ ನೇಣಹಾಕಿಕೊಂಡ ಸ್ಥಿತಿಯಲ್ಲಿ ಸಿಕ್ಕಿತು. ಮಹಿಳೆಗೆ ರಕ್ಷಣೆ ನೀಡಬೇಕಾದ ಪೊಲೀಸು ಕಛೇರಿಯ ಆವರಣದಲ್ಲಿ ನಡೆದಿರುವ ಈ ಘಟನೆ ಈ ಇಲಾಖೆಯ ಬಂಡವಾಳವನ್ನೇ ಹೊರಹಾಕುತ್ತಿದೆ. ಇಲ್ಲಿಯೂ ಸಹ ಪೊಲೀಸರು ಪ್ರಾಮಾಣಿಕ ತನಿಖೆ ನಡೆಸದೇ ಇಡೀಪ್ರಕರಣವನ್ನೇ ಮುಚ್ಚಿಹಾಕಲು ಹವಣಿಸಿದರು. ಬೇಲಿಯೇ ಎದ್ದು ಹೊಲ ಮೇಯ್ದರೆ ಕಾಯುವವರಾರು? ಮಹಿಳೆಗೆ ಪೂರಕವಾಗಿ ಅನ್ಯಾಯಗಳ ವಿರುದ್ಧ ನಿಲ್ಲಬೇಕಾದ, ಅಪರಾಧಿಗಳನ್ನು ಶಿಕ್ಷಿಸಬೇಕಾದ ಪೊಲೀಸು, ಕಾನೂನುಗಳು ಭ್ರಷ್ಟಾಚಾರದ ಗೂಡಾಗುತ್ತಿವೆ. 14 ವರ್ಷದ ಪುಟ್ಟಬಾಲಕಿ ನೇಣು ಹಾಕಿಕೊಂಡಳೆ? ಅಥವಾ ಪೊಲೀಸ್ ಇಲಾಖೆಯೇ ನಡೆಸಿದ ಘಟನೆಯೇ? ಅವಳು ತಾನೇ ನೇಣುಹಾಕಿಕೊಂಡಿದ್ದರೆ ಪೊಲೀಸು ಕಛೇರಿ ಆವರಣದಲ್ಲಿಯೇ ಏಕೆ? ಮನೆಯಿರಲಿಲ್ಲವೆ? ಇಂತಹ ಅನೇಕ ಪ್ರಶ್ನೆಗಳೇಳುತ್ತವೆ. ಇದರ ಬಗ್ಗೆ ಕೂಲಂಕಶ ತನಿಖೆಯಾಗಬೇಕು. ಅಪರಾಧಿಗಳಿಗೆ ಶಿಕ್ಷೆಯಾಗಬೇಕು. ಸತ್ಯ ಮುಚ್ಚಿಡುವ ಪ್ರಯತ್ನ ಮಾಡುತ್ತಿರುವ ಪೊಲೀಸರ




ವಿರುದ್ಧ ಕಠಿಣಕ್ರಮ ಜರುಗಿಸಬೇಕು. ಅವಳ ಸಾವು ಹೇಗೆ, ಯಾಕೆ, ಯಾವ ಸನ್ನಿವೇಶದಲ್ಲಿ ನಡೆಯಿತು ಎಂಬ ಬಗ್ಗೆ ವಿವರವಾದ ತನಿಖೆ ಯಾಗಬೇಕು.

ಪೊಲೀಸ್ ಇಲಾಖೆಯೇ ಅಪರಾಧೀಕರಣದ ಗೂಡಾಗುತ್ತಿರುವುದರಿಂದ ಮಹಿಳೆಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳು ಅಂತ್ಯವಾಗುವುದು ಹೇಗೆ? ಪೊಲೀಸರೇ ಮಹಿಳೆಯರ ಕೊಲೆ, ಅತ್ಯಾಚಾರ, ದೌರ್ಜನ್ಯದ ಘಟನೆಗಳನ್ನು ಮುಚ್ಚಿ ಹಾಕುತ್ತಿರುವುದು ಮತ್ತು ಅವರೇ ಅಪರಾಧ ಮಾಡುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಅನೇಕ ಸಲ ಪೊಲೀಸರ ಭ್ರಷ್ಟ ಮತ್ತು ನಿರ್ಲಕ್ಷ್ಯದ ಕಾರಣಕ್ಕಾಗಿಯೇ ಅಪರಾಧಿಗಳ ಮನೋಬಲ ಹೆಚ್ಚುತ್ತಿದೆ. ಅಪರಾಧ ಎಸಗಿಯೂ ಸೇಫ್ ಆಗಿ ಇರಬಹುದು ಎಂಬುದೇ ಅಪರಾಧಿಗಳ ಧೈರ್ಯವನ್ನು ಹೆಚ್ಚಿಸಿ ಯಾವ ಆತಂಕ, ಭಯವಿಲ್ಲದೇ ಅಪರಾಧಗಳನ್ನು ಮಾಡಬಹುದು ಎಂಬ ಧೈರ್ಯ ನೀಡುತ್ತಿದೆ. ಅತ್ಯಾಚಾರ ಪ್ರಕರಣಗಳಲ್ಲಿ ಮೊಕದ್ದಮೆಗಳನ್ನೇ ದಾಖಲಿಸಿಕೊಳ್ಳುವುದಿಲ್ಲ ಅಥವಾ ಪ್ರಕರಣ ದಾಖಲಿಸಿಕೊಳ್ಳಲು ತಡ ಮಾಡಿ ದೈಹಿಕ ಸಾಕ್ಷ್ಯಗಳನ್ನು ಅಳಿಸಿಹಾಕುತ್ತದೆ. ನಂತರ ಪ್ರಕರಣವನ್ನು ನ್ಯಾಯಾಲಯದಲ್ಲಿ ಸಾಬೀತುಪಡಿಸುವುದು ಕಷ್ಟವಾಗುತ್ತದೆ.

ಮಹಿಳೆಯರ ಆತ್ಮಬಲ ಕಸಿದುಕೊಳ್ಳುವ ಇಂತಹ ಘಟನೆಗಳಿಂದ ನಾಗರೀಕ ಸಮಾಜ ಚಿಂತೆಗೀಡಾಗಿದೆ. ಇಂತಹ ಅಪರಾಧಗಳು ಕಾನೂನು, ವ್ಯವಸ್ಥೆಯನ್ನು ಸ್ತ್ರೀಪರ ಗೊಳಿಸದೇ ಅವಳಮೇಲೆ ನಡೆಯುತ್ತಿರುವ ಅಪರಾಧಗಳು ವಿರೋಧಪಕ್ಷಗಳ ಕೈಗೆ ಅಸ್ತ್ರವಾಗುತ್ತಿವೆ. ಒಬ್ಬ ಮಹಿಳಾ ಮುಖ್ಯಮಂತ್ರಿಯೇ ಕಾರ್ಯನಿರ್ವಹಿಸುತ್ತಿರುವ ರಾಜ್ಯದಲ್ಲಿಯೂ ಮಹಿಳೆಗೆ ರಕ್ಷಣೆಯಿಲ್ಲವೆಂಬುದು ಇದರಿಂದ ಸಾಬೀತಾಗಿದೆ. ದೆಹಲಿ ಭಾರತದ ರಾಜಧಾನಿಮಾತ್ರವಲ್ಲ, ಅತ್ಯಾಚಾರಿಗಳ ರಾಜಧಾನಿಯೂ ಹೌದು. ಮಹಿಳೆಯರ ವಿರುದ್ಧದ ಲೈಂಗಿಕ ಅಪರಾಧಗಳು ದೆಹಲಿಯಲ್ಲಿಯೇ ಹೆಚ್ಚಾಗಿ ನಡೆಯುತ್ತಿವೆ.



ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ 1975ರಲ್ಲಿ ತೀವ್ರವಾದ ಪ್ರತಿಭಟನೆ, ವಿರೋಧ, ನ್ಯಾಯಕ್ಕಾಗಿ ಹೋರಾಟಗಳು ನಡೆದವು. ಆದರೆ ಇತ್ತೀಚೆಗೆ ಅತ್ಯಾಚಾರ ದೌರ್ಜನ್ಯಗಳನ್ನು ಖಂಡಿಸುವಲ್ಲಿ ಅಂತಹ ತೀವ್ರವಾದ ಪ್ರತಿಭಟನೆಗಳು ಯಾಕೆ ಕಂಡುಬರುತ್ತಿಲ್ಲ. ಇದೂ ಕೂಡ ಜಾಗತೀಕರಣದ ಪ್ರಭಾವವಾಗಿರಬಹುದೆ? ಇದು ಹೆಣ್ಣನ್ನು ಆತ್ಮಸ್ಥೈರ್ಯದ ಪ್ರತಿಬಿಂಬವಾಗಿಸದೇ ಸರಕೀಕರಣಗೊಳಿಸಿದ ಸರಕು ಸಂಸ್ಕೃತಿಯ ಪರಿಣಾಮವೆ? ಭ್ರಷ್ಟಾಚಾರದ ವಿರುದ್ಧದ ಹೋರಾಟ ತೀವ್ರಗೊಳಿಸಿದಂತೆಯೇ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಖಂಡಿಸುವ ಹೋರಾಟಗಳೂ ತೀವ್ರವಾಗಬೇಕಿದೆ. ಪೊಲೀಸು, ಕಾನೂನು, ರಾಜಕೀಯ ಮತ್ತು ಇಡೀ ವ್ಯವಸ್ಥೆಯನ್ನೇ ಮಾನವೀಕರಣ ಗೊಳಿಸಬೇಕಿದೆ. ವ್ಯವಸ್ಥೆಯನ್ನು ಹೆಚ್ಚು ಹೆಚ್ಚು ಆತ್ಮಗೌರವ, ಆತ್ಮಬಲ ಮತ್ತು ಸಂವೇದನಾಶೀಲಗೊಳಿಸಬೇಕಿದೆ.



ಚರ್ಚೆಗೊಳಗಾಬೇಕಾದ ಒಂದು ತೀರ್ಪು

2010 ಅಕ್ಟೋಬರ್‌ನಲ್ಲಿ ಸುಪ್ರೀಂಕೋರ್ಟ್ ಒಂದು ತೀರ್ಪನ್ನು ನೀಡಿತ್ತು. ಮಹಿಳೆಯರಿಗೆ ಸಂಬಂಧಪಟ್ಟ ಈ ತೀರ್ಪು ಹೆಚ್ಚು ಚರ್ಚೆಗೊಳಗಾದೇ ಇರುವುದು ಒಂದು ಆತಂಕಕಾರಿಯಾದ ಸಂಗತಿ. ಈ ತೀರ್ಪಿನಲ್ಲಿ "ಒಬ್ಬ ಪುರುಷ ಒಬ್ಬ ಮಹಿಳೆಯನ್ನು ಇಟ್ಟುಕೊಂಡು, ಆರ್ಥಿಕವಾಗಿ ಆಕೆಗೆ ಬೆಂಬಲ ನೀಡುತ್ತಾ, ಆಕೆಯನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿದ್ದರೆ ಅಥವಾ ಕೆಲಸದಾಕೆಯ ಜೊತೆಗೆ ಲೈಂಗಿಕ ಸಂಬಂಧ ಹೊಂದಿದ್ದರೆ ಅದಕ್ಕೆ ವಿವಾಹ ಸಂಬಂಧದ ಸ್ವರೂಪದಲ್ಲಿ 2005ರ ಕೌಟುಂಬಿಕ ದೌರ್ಜನ್ಯ ಕಾನೂನಿನಡಿಯಲ್ಲಿ ಆಕೆ ಪರಿಹಾರವನ್ನು ಪಡೆಯಲು ಸಾಧ್ಯವಿಲ್ಲ" ಎಂಬುದೇ ಈ ತೀರ್ಪು. ಆದರೆ ಮಹಿಳಾ ದಕ್ಷತಾ ಸಮಿತಿಯು ಈ ತೀರ್ಪನ್ನು ಪುನರ್‌ವಿಮರ್ಶಿಸ ಬೇಕೆಂದು ಉಚ್ಚನ್ಯಾಯಾಲಯವನ್ನು ಕೇಳಿತ್ತು. ಮಹಿಳಾ ದಕ್ಷತಾ ಸಮಿತಿಯ ಈ ಪ್ರಯತ್ನದಿಂದ ಈ ತೀರ್ಪು ಸ್ವಲ್ಪಮಟ್ಟಿನ ಚರ್ಚೆಗೆ ಅವಕಾಶ ಕಲ್ಪಿಸಿತು. "ಇಟ್ಟುಕೊಂಡವಳು" ಎನ್ನುವ ಪದಪ್ರಯೋಗ ಮಹಿಳೆಯರನ್ನು ಅಗೌರವದಿಂದ ನೋಡುವ ಸಾಂಪ್ರದಾಯಿಕ ಮನೋಭಾವನೆಯಿಂದ ಕೂಡಿದೆಯಲ್ಲದೆ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಮಹಿಳೆಯರನ್ನು ಪೂರ್ವಾಗ್ರಹದಿಂದ ನೋಡುತ್ತಿದೆಯೆಂದು ವಾದಿಸುತ್ತಾ, ಮಹಿಳೆಯರ ಬಗೆಗಿನ ಪೂರ್ವಾಗ್ರಹಪೀಡಿತ ಧೋರಣೆಯನ್ನು ಬಲಪಡಿಸುತ್ತದೆಯೆಂದೂ ಈ ತೀರ್ಪನ್ನು ಪುನರ್‌ಪರಿಶೀಲಿಸಬೇಕೆಂದೂ ಕೇಳಿತ್ತು.

ಯುನೈಟೆಡ್‌ನೇಷನ್ ಕನ್‌ವೆನ್ಷನ್ 2ನೇ ಪರಿಚ್ಛೇದವು ಪುರುಷರ ಹಾಗೂ ಮಹಿಳೆಯರ ನಡುವಿರುವ ತಾರತಮ್ಯವನ್ನು ಅಳಿಸಿ ಹಾಕುವುದರೊಂದಿಗೆ ಇಬ್ಬರ ನಡುವೆ ಸಮಾನತೆಯನ್ನು ಮೂಡಿಸಬೇಕೆಂದು, ಪರಿಚ್ಛೇದ 2 ಎಫ್‌ನಲ್ಲಿ ಸಂಪ್ರದಾಯ ಕಾಯಿದೆ, ಕಾನೂನು, ಪದ್ಧತಿ, ಆಚರಣೆ ಇವುಗಳಲ್ಲಿ ಬದಲಾವಣೆ ತರಲು ಅಗತ್ಯವಾದ ಕ್ರಮಗಳನ್ನು ಜರುಗಿಸಲು ಸರ್ಕಾರಗಳಿಗೆ ಅವಕಾಶವನ್ನು ನೀಡಿದೆ.

ಇಟ್ಟುಕೊಂಡವಳು, ಕೆಲಸದಾಕೆಯೊಂದಿಗೆ ಲೈಂಗಿಕ ಸಂಬಂಧ ಮುಂತಾದ ಪದಗಳ ಪ್ರಯೋಗ ಸಂವಿಧಾನದ 51.ಎ. ಪರಿಚ್ಛೇದಕ್ಕೆ ವಿರುದ್ಧವಾಗಿದೆಯಲ್ಲದೆ 'ವಿವಾಹ ಸಂಬಂಧದ ಸ್ವರೂಪ'ದ ವ್ಯಾಖ್ಯಾನ, ಅರ್ಥೈಸುವಿಕೆ ಮಹಿಳೆಯರ ಬಗ್ಗೆ ಇರುವ ಪೂರ್ವಾಗ್ರಹ ಪೀಡಿತ ಧೋರಣೆಯನ್ನು ಮುಂದುವರಿಸಿಕೊಂಡು ಹೋಗುತ್ತದೆಯೆಂದು ಮಹಿಳಾದಕ್ಷತಾ ಸಮಿತಿ ವಾದಿಸಿದೆ. ನ್ಯಾಯಾಂಗವು ಸಹ ಪುರುಷ ಪ್ರಧಾನ ಧೋರಣೆಯನ್ನು ಹೇಗೆ ಬಲಪಡಿಸುತ್ತಿದೆ ಎಂಬುದಕ್ಕೆ ಈ ತೀರ್ಪು ಒಂದು ಸ್ಪಷ್ಟ ನಿದರ್ಶನ. ಮಹಿಳೆಯರನ್ನು ಬಳಸಿಕೊಳ್ಳುವ ಪುರುಷರೇ ಮಹಿಳೆಯರು ಕಾನೂನನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸುವುದು ನಮ್ಮ ಮುಂದಿರುವ ಕಟುವಾಸ್ತವ ಹಾಗೂ ವ್ಯಂಗ್ಯ. ಇಂತಹ ಪದ ಪ್ರಯೋಗ ಮಹಿಳೆಯರ ಘನತೆಯನ್ನು ನಾಶಪಡಿಸುತ್ತದೆ. ಇಂತಹ ವಿಷಯಗಳು ಮಹಿಳೆಯರಲ್ಲಿ ಹೆಚ್ಚು. ವಿಸ್ತೃತವಾದ ಆಲೋಚನೆಗೆ, ಚರ್ಚೆಗೆ ಒಳಗಾಗಬೇಕು.

"ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ"
ಕಾರ್ಯ ಚಟುವಟಿಕೆಗಳು

■ ಆರ್. ಪ್ರತಿಭಾ



ಮನೆ ಮತ್ತು ಹೊರಗೆ ಎರಡೂ ಕಡೆ ದುಡಿಯುವ ಮಹಿಳೆಯರು ಅನುಭವಿಸುವ ತೊಂದರೆಗಳು ನೂರಾರು. ಮನೆಕೆಲಸ, ಮಕ್ಕಳ ಜವಾಬ್ದಾರಿ, ಮನೆಯ ಹಿರಿಯರ ಕೆಲಸ ಎಲ್ಲವನ್ನೂ ಸಮಯಕ್ಕೆ ಸರಿಯಾಗಿ ಮುಗಿಸುವ ಜವಾಬ್ದಾರಿ ಇರುವ ಇವರು ಸ್ವಾಭಾವಿಕ ವಾಗಿಯೇ ಒತ್ತಡದಲ್ಲಿರುತ್ತಾರೆ. ಅದರಲ್ಲೂ ಗಾರ್ಮೆಂಟ್ಸ್ ಕಾರ್ಖಾನೆ ಗಳಲ್ಲಿ ದುಡಿಯುತ್ತಿರುವ ಮಹಿಳೆಯರು ಈ ರೀತಿ ಒತ್ತಡದಲ್ಲಿ ಬಂದು ಕೆಲಸಕ್ಕೆ ಕುಳಿತರೆ ಅವರು ಎದುರಿಸುವುದು ಪುರುಷ ಸೂಪರ್‌ವೈಸರ್, ಮ್ಯಾನೇಜರ್ ಹಾಗೂ ಫ್ಲೋರ್‌ಇನ್‌ಚಾರ್ಜ್‌ಗಳ ಕೂಗಾಟ, ಬೈಗುಳ, ನಿಂದನೆಗಳನ್ನು. ಎಷ್ಟೇ ಆತ್ಮವಿಶ್ವಾಸವಿರುವ ಮಹಿಳೆಯರನ್ನೂ ಈ ರೀತಿಯ ಬೈಗುಳ, ಅವಮಾನ, ವೈಯಕ್ತಿಕ ಮಟ್ಟದಲ್ಲಿ ಮಾಡುವ ನಿಂದನೆಗಳು ಕುಗ್ಗಿಸಿಬಿಡುತ್ತವೆ.

ಮಹಿಳಾ ಕಾರ್ಮಿಕರನ್ನು ಗೂಬೆ, ನಾಯಿ, ಕತ್ತೆ ಎಂದು ಪ್ರಾಣಿಗಳಿಗೆ ಹೋಲಿಸಿ ಮಾತನಾಡುವುದು, ಅವರ ವಯಸ್ಸಿನ ಬಗ್ಗೆ ನಿಂದಿಸುವುದು, ಮಹಿಳೆಯರನ್ನು 'ಅದು' 'ಇದು' ಎಂದು ವಸ್ತುಗಳ ರೀತಿಯಲ್ಲಿ ಮಾತನಾಡಿಸುವುದು, 'ಹೊಟ್ಟೆಗೆ ಅನ್ನ ತಿನ್ನುತ್ತೀಯಾ, ಅಥವಾ ಇನ್ನೇನು ತಿನ್ನುತ್ತೀಯಾ' ಎಂದು ಏಕವಚನದಲ್ಲಿ ಬೈಯುವುದು, 'ನಿನಗೆ ವಯಸ್ಸಾಯಿತು, ಇನ್ನು ಕೆಲಸ ಮಾಡಲು ಆಗುವುದಿಲ್ಲ' ಎಂದು ಚುಚ್ಚಿ ಮಾತನಾಡುವುದು ದೈಹಿಕ ನ್ಯೂನತೆಗಳನ್ನು ಎತ್ತಿ ಅಪಹಾಸ್ಯ ಮಾಡುವುದು, ಲೈಂಗಿಕ ಸಂಬಂಧೀ ಹೇಳಿಕೆಗಳನ್ನು ಅವರ ಮುಂದೆಯೇ ಮಾತನಾಡುವುದು ಇವೆಲ್ಲವೂ ನಡೆಯುತ್ತವೆ. ಈ ಅವಮಾನಗಳನ್ನು ಮಹಿಳಾ ಕಾರ್ಮಿಕರು ಕೆಲವೊಮ್ಮೆ ಅನಿವಾರ್ಯ ಪರಿಸ್ಥಿತಿಯಿಂದ ಸಹಿಸಿಕೊಂಡಿರುತ್ತಾರೆ, ಕೆಲವರು 'ಈ ಕಾರ್ಖಾನೆಯೇ ಬೇಡ ಬೇರೆ ಕಾರ್ಖಾನೆಗೆ ಹೋಗುತ್ತೇವೆ' ಎಂದು ಕೆಲಸ ಬಿಟ್ಟು ಹೋಗುತ್ತಾರೆ. ಅಲ್ಲಿಗೆ ಅವರನ್ನು ಕಳಿಸಬೇಕೆಂಬ ಆಡಳಿತ ವರ್ಗದವರ ಉದ್ದೇಶ ಈಡೇರಿದಂತಾಗುತ್ತದೆ. ಕಾರ್ಮಿಕರ ಸೇವಾವಧಿಯು ಕಡಿತಗೊಳ್ಳುತ್ತದೆ, ಭವಿಷ್ಯದಲ್ಲಿ ಅವರಿಗೆ ದೊರೆಯಬಹುದಾದ ಎಲ್ಲ ಸವಲತ್ತುಗಳಿಗೂ ಕತ್ತರಿ ಬೀಳುತ್ತದೆ.

ಕಾರ್ಮಿಕರಿಗೆ ಅನ್ಯಾಯವಾದ ಬಹುತೇಕ ಘಟನೆಗಳಲ್ಲಿ **'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ'**ಯು ಕಾರ್ಮಿಕರ ನೆರವಿಗೆ ಧಾವಿಸಿದೆ, ಅವರಿಗೆ ನ್ಯಾಯ ಒದಗಿಸಿ ಕೊಟ್ಟಿದೆ, ಕೆಲವೊಮ್ಮೆ ಪ್ರತಿಭಟನೆಗಳನ್ನು ನಡೆಸಿದೆ. ಸರ್ಕಾರದ, ಇಲಾಖೆಗಳ ಗಮನಕ್ಕೆ ತಂದಿದೆ. ಕಾರ್ಖಾನೆಗಳಲ್ಲಿ ಅವರ ಸ್ಥಿತಿ ಬದಲಾಗಲು ಪ್ರಯತ್ನ ಪಟ್ಟಿದೆ.

'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ'ಯ ಪ್ರಧಾನ ಕಾರ್ಯದರ್ಶಿಗಳಾದ ರತ್ನ, ಕಳೆದ 7 ವರ್ಷಗಳಿಂದಲೂ ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡವರು. ಕಳೆದ 14 ವರ್ಷದಿಂದಲೂ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ದುಡಿಯುತ್ತಿರುವ ರತ್ನ, ಈಗಲೂ ಮೈಸೂರು ರಸ್ತೆಯ ಕಾರ್ಖಾನೆಯೊಂದರಲ್ಲಿ ಚೆಕರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರ ಸಂಘಟನಾ ಅನುಭವಗಳು ಮತ್ತು ಮುನ್ನಡೆಯ ಕಾರ್ಯ ಚಟುವಟಿಕೆ ಗಳನ್ನು ಕುರಿತು ಅವರ ಮಾತುಗಳಲ್ಲೇ ತಿಳಿದುಕೊಳ್ಳೋಣ:

"ನಾನು ಹುಟ್ಟಿದ್ದು ಮಂಡ್ಯ ಜಿಲ್ಲೆಯ ಗೆಜ್ಜಲಗೆರೆ ಗ್ರಾಮದಲ್ಲಿ. ನಮ್ಮದು 8 ಮಕ್ಕಳ ದೊಡ್ಡ ಕುಟುಂಬ. ಚಿಕ್ಕ ವಯಸ್ಸಿಗೇ ತಂದೆಯನ್ನ ಕಳ್ಕೊಂಡ್ವಿ. ನಮ್ಮ ತಾಯಿ ತುಂಬ ಕಷ್ಟ ಪಟ್ಟು ನಮ್ಮನ್ನು ಬೆಳೆಸಿ ಓದಿಸಿದ್ರು. ನಾನು ಸ್ಕೂಲಿಗೂ ಹೋಗಿ ಬೇರೆಯವರ ಗದ್ದೆಯಲ್ಲಿ ಕೂಲಿ ಮಾಡಿ ಸಂಪಾದ್ನೆ ಮಾಡ್ತಿದ್ದೆ. ಮನೆಯಲ್ಲಿ ಹಸು, ಕರು ಕೆಲಸವೆಲ್ಲಾ ಮಾಡ್ತಿದ್ದೆ. ನಾನು 7ನೇ ಕ್ಲಾಸ್‌ನಲ್ಲಿರುವಾಗಲೇ ಮೈಸೂರಿನಲ್ಲಿರುವ ಸ್ಪಂದನ ಸಂಘಟನೆಯ ಸಹಾಯದಿಂದ ಹುಟ್ಟಿದ ನಮ್ಮೂರಿನ ಚೌಡೇಶ್ವರಿ ಮಹಿಳಾ ಸಂಘಕ್ಕೆ ಸೇರಿಕೊಂಡಿದ್ದೆ. ಸಂಘದಿಂದ ಇಲಿ ಸಾಕಾಣಿಕೆ, ಹಸು ಸಾಕಾಣಿಕೆ ಹೀಗೇ, ಹಲವಾರು ವಿಷಯದಲ್ಲಿ ತರಬೇತಿ ಪಡ್ಕೊಂಡೆ. ಪ್ರತೀವಾರ ಮೀಟಿಂಗ್ ನಡೆಸ್ತಿದ್ವಿ, ನಾನು ಎಸ್ಸೆಸ್ಸೆಲ್ಸಿ ಓದುವಾಗ ರೈತ ಚಳವಳಿ ಎಲ್ಲ ಕಡೆಯೂ ತುಂಬಾ ಜೋರಾಗಿ ನಡೀತಿತ್ತು. ನಮ್ಮ ಊರಿನಲ್ಲೂ ಅದರ ಕಾವು ತುಂಬ ಇತ್ತು. ಚಳವಳಿಯ ಒಂದು ಅಂಗವಾಗಿ, ನಮ್ಮ ಸಂಘದವರೂ ಸೇರಿದಂತೆ ಹೆಣ್ಣು ಮಕ್ಕಳೇ ಸೇರಿಕೊಂಡು ಸುನಂದಾ ಜಯರಾಮ್‌ರವರ ಮಾರ್ಗದರ್ಶನದಲ್ಲಿ 'ಹೋರಾಟ, ಹೋರಾಟ' ಅನ್ನೋ ನಾಟಕ ಮಾಡಿದ್ವಿ. ಅದು ತುಂಬಾ ಹೆಸರಾಯ್ತು. ನಾಟಕ ಮಾಡೋ ದಿನ ನಮ್ಮ ಊರ ಸುತ್ತಮುತ್ತಲಿನ ಹಳ್ಳಿಗಳಿಂದೆಲ್ಲ ಸುಮಾರು 2500 ಜನ ಸೇರಿದ್ದರು. ರೈತ ಸಂಘದಿಂದ ನಂಜುಂಡಸ್ವಾಮಿಯವರು, ಶ್ರೀನಿವಾಸ್, ಮುದ್ದೇಗೌಡರು, ಸುನಂದಾಜಯರಾಮ್ ಸೇರಿದಂತೆ ಎಲ್ಲರೂ ಬಂದಿದ್ದರು. ಆಮೇಲೆ ಮಂಡ್ಯದ ಸ್ಟೇಡಿಯಂ, ರೈತ ಸಭಾಂಗಣ ಸೇರಿದಂತೆ ಸುತ್ತ ಮುತ್ತಲಿನ 7 ಹಳ್ಳಿಗಳಲ್ಲಿ ಆ ನಾಟಕ ನಾವು ಆಡಿದ್ವಿ,

ಆಮೇಲೆ ಎಸ್ಸೆಸ್ಸೆಲ್ಸಿಗೆ ನನ್ ಓದು ನಿಲ್ತು. ಮದ್ವೆ ಮಾಡಿದ್ರು, ನನ್ನ ಮದ್ವೆ ಆದ ಮೇಲೂ ಗಂಡನ ಊರಿನಲ್ಲೇ ಸ್ವಲ್ಪದಿನ ನಾನು ಕೂಲಿ ಕಾರ್ಮಿಕರ ಸಂಘಟಿಸಿ ಅವರಿಂದ ಹಣ ಉಳಿತಾಯ ಮಾಡಿಸ್ತಿದ್ದೆ. ಬಜ್ಜಿ ಬೋಂಡ ಅಂಗಡಿ ಇಟ್ಟು ಸಂಪಾದನೆ ಮಾಡ್ತಿದ್ದೆ. ನಂತರ ಹಳ್ಳಿಯಲ್ಲಿ ಸಂಪಾದನೆ ಸಾಕಾಗ್ದೆ ಎರಡು ಮಕ್ಕಳೊಂದಿಗೆ ಬೆಂಗಳೂರಿಗೆ ಬಂದ್ವಿ,

ಬೆಂಗಳೂರಿಗೆ ಬಂದು 15 ವರ್ಷ ಆಯ್ತು. ಇಲ್ಲಿ ಎಲ್ಲಾದ್ರೂ ಕೆಲಸ ಮಾಡ್ಲೇ ಬೇಕಾಗಿತ್ತು. ಹಳ್ಳಿಯಲ್ಲಿ ಮಾಡಿದ ಹಾಗೆ ಬಜ್ಜಿ ಬೋಂಡ ಹಾಕೋದಕ್ಕೆ ಇಲ್ಲಿ ಆಗ್ತಾ ಇರ್ಲಿಲ್ಲ. ಮೊದಲಿಗೆ ಗಾರ್ಮೆಂಟ್ಸ್ ಅಂದ್ರೇನು

ಗೊತ್ತಿರ್ಲಿಲ್ಲ. ಆಮೇಲೆ ನಾಯಂಡಹಳ್ಳಿಯಲ್ಲಿದ್ದ 'ಚಾಲ್ಸ್ ಅಪಾರೆಲ್ಸ್' ಅನ್ನೋ ಕಾರ್ಖಾನೆ ಸೇರ್ಕೊಂಡೆ. ಆಗ ನನಗೆ ತಿಂಗಳಿಗೆ 700 ರೂ. ಸಂಬಳ. ಅಲ್ಲಿ ಕಾರ್ಮಿಕರೆಲ್ಲ ಹೆಚ್ಚು ಮಹಿಳೆಯರು. ದಿನಾ ನಿತ್ಯ ಹಲವಾರು ತೊಂದ್ರೆ ಎದುರಿಸ್ತಿದ್ರು, ಮನೇಲಿ ಗಂಡನಿಂದ ಹೊಡೆಸ್ಕೊಂಡು, ಇಲ್ಲಿ ಸೂಪರ್‌ವೈಸರ್‌ನಿಂದ ಬೈಸ್ಕೊಂಡು, ಏನೂ ಮಾತಾಡ್ದೆ ಜೀವನ ಮಾಡ್ತಿದ್ರು, ಎಲ್ಲರದ್ದೂ ಒಂದೊಂದು ವಿಚಿತ್ರ ಸಮಸ್ಯೆ. ಫ್ಯಾಕ್ಟರಿಗೆ ಬೆಳಿಗ್ಗೆ 8.30 ಗೆ ಬಂದ್ರೆ ಸಂಜೆ 7 ಗಂಟೆವರೆಗೂ ಬಿಡ್ತಿರಲಿಲ್ಲ. ಓ.ಟಿ ನೂ ಕೊಡ್ತಿರಲಿಲ್ಲ. ನನಗೂ ಕುಟುಂಬದಲ್ಲಿ ಸಮಸ್ಯೆ ಇತ್ತು, ಆದರೆ ನಾನು ಹೆಣ್ಣುಮಕ್ಕಳು ತಮ್ಮ ಕಷ್ಟ ಹೇಳಿಕೊಳ್ಳೋಕೆ, ಏನಾದರೂ ಪರಿಹಾರ ಕಾಣೋಕೆ ಸಂಘಟನೆಯಿಂದ ಮಾತ್ರ ಸಾಧ್ಯ ಅಂತ ಚಿಕ್ಕ ವಯಸ್ಸಿನ ಅನುಭವದಿಂದಾನೇ ತಿಳ್ಕೊಂಡಿದ್ದೆ.

ಅದೇ ಸಮಯದಲ್ಲಿ ಸಿವಿಡೆಪ್ ಅನ್ನೋ ಸಂಸ್ಥೆಯ ಕಾರ್ಯಕರ್ತರು, ಗಾರ್ಮೆಂಟ್ಸ್ ಕಾರ್ಮಿಕರಿಗೆ ಸಹಾಯ ಮಾಡ್ತಾರೆ ಅಂತ ಗೊತ್ತಾಯ್ತು. ಅಲ್ಲಿಂದ ನಮ್ಮ ಸಂಘಟನೆ ಚಟುವಟಿಕೆ ಶುರುವಾಯ್ತು.

ಮೊದಲು ನಾವು ಸ್ವಲ್ಪ ಜನಾನೇ ಸೇರಿ 'ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ' ಅಂತ ಸಂಘಟನೆ ಶುರು ಮಾಡ್ಕೊಂಡ್ವಿ, ಕಾರ್ಖಾನೆಗಳಲ್ಲಿ ಯಾವ ಮಹಿಳಾ ಕಾರ್ಮಿಕರಿಗೆ ಏನಾದರೂ ದೌರ್ಜನ್ಯ ಆದ್ರೂ ನಾವು ತಕ್ಷಣ ಅವರ ನೆರವಿಗೆ ಹೋಗ್ತಿದ್ವಿ, ಕಾರ್ಮಿಕರು ಬರೀ ಕಾರ್ಖಾನೆಯಲ್ಲಿ ಮಾತ್ರ ಕಷ್ಟ ಪಡ್ತಾರೆ ಅಂತ ಅಲ್ಲ, ಅವರು ಮನೆಯಲ್ಲಿ, ಸಮಾಜದಲ್ಲಿಯೂ ತೊಂದ್ರೆ ಅನುಭವಿಸ್ತಾರೆ ಅಂತ ನಾವು ಅದಕ್ಕೂ ಸಹ ಕೆಲಸ ಮಾಡಲು ಶುರು ಮಾಡಿದ್ವಿ, ನಾವೆಲ್ಲ ಹಳ್ಳಿಯಿಂದ ಬಂದೋರು, ಇಲ್ಲಿ ನಮಗೆ ಯಾರೂ ಹೇಳೋರು ಕೇಳೋರು ಇರ್ಲಿಲ್ಲ. ಓನರ್ ಗಲಾಟೆ ಮಾಡಿದ್ರೆ, ಅಕ್ಕ ಪಕ್ಕದವರು ನಮ್ಮ ಮೇಲೆ ಏನಾದರೂ ಹಲ್ಲೆ ಮಾಡಿದ್ರೆ, ಗಂಡನಿಂದ ದೌರ್ಜನ್ಯ ಆದ್ರೆ ಈ ಕಾರ್ಮಿಕರಿಗೆ ಎಲ್ಲಿಗೆ ಹೋಗಬೇಕು ಅಂತಾನೇ ಗೊತ್ತಿರ್ಲಿಲ್ಲ.

2004 ರಲ್ಲಿ ನಮ್ಮ ಸಂಘಟನೆ ಶುರು ಆಯ್ತು. ಇವತ್ತಿಗೆ 3000 ಜನ ಸದಸ್ಯರಿದ್ದಾರೆ. ಎರಡು ಬಾರಿ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆ ನಡೆಸಿ, ಕಾರ್ಯಕಾರೀ ಸಮಿತಿಗೆ, ಪದಾಧಿಕಾರಿಗಳನ್ನು ಆಯ್ಕೆ ಮಾಡಿದೀವಿ. ನಾನು ಮೊದಲು ಕಾರ್ಯಕಾರೀ ಸಮಿತಿಯ ಸದಸ್ಯೆಯಾಗಿದ್ದೆ, ಎರಡು ವರ್ಷ ಅಧ್ಯಕ್ಷಳಾಗಿದ್ದೆ. ಈಗ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡ್ತಾ ಇದ್ದೀನಿ. ನಾಯಂಡ ಹಳ್ಳಿಯಲ್ಲಿ 3 ವರ್ಷದಿಂದ ಕಚೇರಿ ಸಹ ಇದೆ.

ಗಾ.ಮ.ಕಾ ಮುನ್ನಡೆ, ಮೈಸೂರು ರಸ್ತೆಯಲ್ಲಿ ಸುಮಾರು 8 ಏರಿಯಾಗಳಲ್ಲಿ ಗುರುತಿಸಿಕೊಂಡು ಕೆಲಸ ಮಾಡ್ತಿದೆ. ನಮ್ಮ ಕಾರ್ಯಕಾರೀ ಸಮಿತಿಯ ಪದಾಧಿಕಾರಿಗಳೆಲ್ಲರೂ ಗಾರ್ಮೆಂಟ್ಸ್ ಕಾರ್ಮಿಕರು. ಅವರೆಲ್ಲ ತಮ್ಮ ತಮ್ಮ ಏರಿಯಾಗಳನ್ನು ಪ್ರತಿನಿಧಿಸುತ್ತಾರೆ.

ಇವತ್ತು, ಮೈಸೂರುರಸ್ತೆಯಲ್ಲಿ ಗಾರ್ಮೆಂಟ್ಸ್ ಮಹಿಳೆಯರು ಅವರಿಗೆ ಕೆಲಸದ ಸ್ಥಳದಲ್ಲಿ ಶೋಷಣೆ ಆದ್ರೆ, ಅವರ ಹಕ್ಕುಗಳನ್ನು ಕಿತ್ತುಕೊಂಡ್ರೆ, ಅವಮಾನ ಮಾಡಿದ್ರೆ, ಸುಮ್ಮನೆ ವಾಪಸ್ ಬರ್ತಾ ಇಲ್ಲ. ಸಂಘಟನೆ ಇದೆ ಅಂತ ನಮ್ಮ ಹತ್ತಿರ ಬರ್ತಾರೆ, ಅವರ ಸಮಸ್ಯೆ ಕೆಲಸಕ್ಕೆ ಸಂಬಂಧ ಪಟ್ಟಿದ್ದಾಗಿದ್ರೆ ನಮ್ಮದೇ ಯೂನಿಯನ್ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್‌ಗೆ ಕಳಿಸ್ತೀವಿ. ಕೌಟುಂಬಿಕ ದೌರ್ಜನ್ಯದಂತಹ ಕೇಸ್‌ಗಳಲ್ಲಿ ಕಾರ್ಮಿಕರ ಮನೆಗೇ ಹೋಗಿ ಅವರ ಗಂಡನ ಹತ್ತಿರ ಮಾತಾಡ್ತೀವಿ. ಹಾಗೆ ಮಾತಾಡಿ, ಗಂಡ ಹೆಂಡತಿ



ಚೆನ್ನಾಗಿ ಜೀವನ ಮಾಡ್ತಾಇರೋ ಎಷ್ಟೋ ಕೇಸ್ ಇದೆ. ತುಂಬಾ ಪರಿಸ್ಥಿತಿ ಮಿತಿ ಮೀರಿದ್ರೆ ಪೊಲೀಸ್ ಠಾಣೆಗೂ ಹೋಗ್ತೀವಿ. ಮಹಿಳಾ ಆಯೋಗಕ್ಕೆ ದೂರು ನೀಡ್ತೀವಿ. ಹೀಗೆ ತುಂಬಾ ಆಗಿದೆ. ಕಮಲಾ, ಮಾಧವಿ (ಹೆಸರು ಬದಲಿಸಲಾಗಿದೆ) ಕೇಸ್ ಇವುಗಳಿಗೆ ಒಂದೆರಡು ಉದಾಹರಣೆಗಳು. (ವಿವರಣೆ ಬಾಕ್ಸ್‌ನಲ್ಲಿದೆ ಪು.18) ಅವರ ಆಸ್ತಿಗೆ ಸಂಬಂಧ ಪಟ್ಟ ಸಮಸ್ಯೆ ಇದ್ರೆ, ಬಂದ್ರೆ ಉಚಿತವಾಗಿ ಕಾನೂನು ಸಲಹೆ ಕೊಡಿಸ್ತೀವಿ.

ಈಗ ಫ್ಯಾಕ್ಟರಿಯಲ್ಲಿ ನಮಗೆ ಏನಾದರೂ ಸಣ್ಣ ಪುಟ್ಟ ಸಮಸ್ಯೆ ಆದ್ರೆ ನಾವೇ ಮ್ಯಾನೇಜ್‌ಮೆಂಟ್‌ನೊಂದಿಗೆ ಮಾತಾಡುತ್ತೇವೆ. ಅಷ್ಟರ ಮಟ್ಟಿಗೆ ನಾವು ತಿಳ್ಕೊಂಡಿದೀವಿ, ಕಾನೂನಿನ ತರಬೇತಿ ಪಡ್ಕೊಂಡಿದೀವಿ. ಯಾರ ಹತ್ರ ಏನು ಕೇಳಬೇಕು ಅಂತ ಗೊತ್ತಾಗಿದೆ. ಏರಿಯಾದಲ್ಲಿ ಸಮಸ್ಯೆ ಆದ್ರೆ ಕೌನ್ಸಿಲರ್ ಹತ್ತಿರ ಹೋಗಿ ಬಗೆಹರಿಸಿಕೊಳ್ತೀವಿ, ಹೀಗೇ ಸರ್ಕಾರ, ಸಾರ್ವಜನಿಕರು, ಬೇರೆ ಬೇರೆ ಸಂಘಟನೆಗಳು ಹೀಗೆ ಎಲ್ಲರ ಸಹಾಯ ತಗೊಂಡು ನಾವು ಕೆಲಸ ಮಾಡ್ತಾ ಇದ್ದೀವಿ.

ಗಾ.ಮ.ಕಾ ಮುನ್ನಡೆಯಿಂದ ಕಾರ್ಮಿಕರ ಮಧ್ಯೆ ಸಂಪರ್ಕ ಬೆಳೆಸಲು 'ಸೂಜಿ–ದಾರ' ಅನ್ನೋ ಪತ್ರಿಕೆಯನ್ನು ತರ್ತಾ ಇದ್ದೀವಿ. ಎಷ್ಟೋ ಜನ ನಮ್ಮ ಸಂಘಟನೆಯನ್ನ 'ಸೂಜಿದಾರ ಸಂಘಟನೆ' ಅಂತನೇ ಕರೀತಾರೆ. ಪೀಣ್ಯ ಕಡೆಯಲ್ಲಿ ಸೂಜಿದಾರದೋರು ಬಂದ್ರು ಅಂತಾರೆ.

ಮುನ್ನಡೆಯಿಂದ ಕಾರ್ಮಿಕರಗೆ ಆರೋಗ್ಯ ಶಿಬಿರ, ಕಾನೂನು ಸಲಹೆ, ಸ್ವ ಸಹಾಯ ಸಂಘ ರಚಿಸಿಕೊಳ್ಳಲು ನೆರವು, ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಕಾರ್ಮಿಕರಿಗೆ ಅಕ್ಷರ ಕಲಿಕೆಯ ಶಿಬಿರಗಳು, ಹೀಗೇ ಹಲವಾರು ಕಾರ್ಯಕ್ರಮಗಳನ್ನು ನಡೆಯುತ್ತಾ ಇವೆ. ಕಾರ್ಮಿಕ ಕಲ್ಯಾಣ ಇಲಾಖೆಯಿಂದ ಮಕ್ಕಳಿಗೆ ಸಿಗೋ ಸ್ಕಾಲರ್‌ಶಿಪ್ ಹಣ ಸಿಗೋದಕ್ಕೆ ಸಹಾಯ ಮಾಡ್ತೀವಿ. ಜೊತೆಗೆ ನಾವು ನಾಯಂಡಹಳ್ಳಿಯಲ್ಲಿ ಕಾರ್ಮಿಕರ ಮಕ್ಕಳಿಗಾಗಿ ಉಚಿತ ಗ್ರಂಥಾಲಯ ನಡೆಸ್ತಿದೀವಿ. ಕೆಲವು ಸಂಸ್ಥೆಗಳು, ವ್ಯಕ್ತಿಗಳು ನಮಗೆ ಪುಸ್ತಕಗಳನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ, ಮಕ್ಕಳು ದಿನಾ ಸಾಯಂಕಾಲ ಬಂದು ಪುಸ್ತಕಗಳನ್ನು ಓದಿ ಕೊಳ್ಳುತ್ತಾರೆ.

ಗಾರ್ಮೆಂಟ್ಸ್ ಕಾರ್ಮಿಕರಿಗೆ ಇನ್ನೂ ಸಂಬಳ ಸಾಲದು, ಈಗ ಟೈಲರ್ ಒಬ್ರಿಗೆ ಹೆಚ್ಚು ಅಂದ್ರೆ ದಿನಕ್ಕೆ 180–185 ರೂ ಇದೆ. ಆದರೆ ನಾವು ಗಾರ್ಮೆಂಟ್ ಅಂಡ್ ಟೆಕ್ಸ್ ಟೈಲ್ ವರ್ಕರ್ಸ್ ಯೂನಿಯನ್ ಜೊತೆಗೆ ಸೇರಿ, 2007 ರಲ್ಲೇ 200 ರೂ. ಬೇಕು ಅಂತ ಆಂದೋಲನ ನಡೆಸಿದ್ವಿ, ಈಗ ಇನ್ನೂ ಹೆಚ್ಚು ಬೇಕಾಗುತ್ತೆ, ಬೆಂಗಳೂರಿನಲ್ಲಿ ದಿನಾ ಬೆಲೆಗಳು ಏರ್ತಾನೇ ಇವೆ. ನಾವು ಬಸ್‌ನಲ್ಲಿ ಓಡಾಡೋಕಾಗ್ದೇ ಇರುವಷ್ಟು ಚಾರ್ಜ್ ಜಾಸ್ತಿಯಾಗಿದೆ. ನಾವೂ ನಮ್ಮ ಹಲವಾರು ಸಮಸ್ಯೆಗಳನ್ನ ಮೆಮೊರಾಂಡಮ್‌ಗಳನ್ನು ಕೊಟ್ಟು ಸರ್ಕಾರದ ಗಮನಕ್ಕೆ ತರ್ತಾನೇ ಇದ್ದೀವಿ.

ಮಾಧವಿ. ಮೈಸೂರು ರಸ್ತೆಯ ಕಾರ್ಖಾನೆಯೊಂದರಲ್ಲಿ ಕೆಲಸ
ಮಾಡುತ್ತಿದ್ದಳು. ಪ್ರೊಡಕ್ಷನ್ ಆಗಲಿಲ್ಲ ಎಂಬ ಕಾರಣಕ್ಕೆ ಕೆಲಸ
ಮುಗಿದ ಮೇಲೆ ಅವಳನ್ನು ನಿಲ್ಲಿಸಿ ಅವಮಾನಿಸಲಾಯಿತು.
ಮಾಧವಿ, ಸಹಿಸದೆ ತಿರುಗಿ ಬಿದ್ದಳು. ಮಾರನೆಯ ದಿನ ಎಂದಿನಂತೆ
ಕೆಲಸಕ್ಕೆ ಹೋದ ಮಾಧವಿಯನ್ನು ಒಳಗೂ ಬಿಡದೆ, ಹೊರಗೂ
ಬಿಡದೆ ಸೆಕ್ಯೂರಿಟಿ ರೂಮ್‌ನಲ್ಲಿಯೇ ಇಟ್ಟುಕೊಳ್ಳಲಾಯಿತು.
ಊಟಕ್ಕೂ ಸಹ ಕಳುಹಿಸಲಿಲ್ಲ. ಸಂಜೆಯ ಹೊತ್ತಿಗೆ ಹೇಗೋ
ತಪ್ಪಿಸಿಕೊಂಡು ಬಂದ ಮಾಧವಿ ಅಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದಳು.
ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯ ಸದಸ್ಯರು
ತಕ್ಷಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ, ಕಾರ್ಮಿಕ
ಇಲಾಖೆಗೆ, ಮಹಿಳಾ ಆಯೋಗಕ್ಕೆ ದೂರು ನೀಡಿದರು.
ಮಾರನೆಯ ದಿನ ಎಲ್ಲ ಕಾರ್ಮಿಕರೂ ಈ ಘಟನೆಯನ್ನು
ಖಂಡಿಸಿ, ತೋಳಿಗೆ ಕಪ್ಪು ಪಟ್ಟಿ ಧರಿಸಿ, ಸಾಂಕೇತಿಕ ಪ್ರತಿಭಟನೆ
ನಡೆಸಿದರು. ಪರಿಣಾಮವಾಗಿ ಈ ಘಟನೆಗೆ ಕಾರಣನಾದ
ಪ್ರೊಡಕ್ಷನ್ ಮ್ಯಾನೇಜರ್ ಬಹಿರಂಗವಾಗಿ ಕ್ಷಮೆ ಕೇಳು
ವಂತಾಯಿತು. ●

ಕಾರ್ಮಿಕರ ಮೇಲೆ ದೌರ್ಜನ್ಯ ಆದಾಗ, ಸರ್ಕಾರ ನಮಗಿರೋ ಕಾನೂನುಗಳನ್ನ ತಿದ್ದುಪಡಿ ಮಾಡಿದಾಗ, ನಾವು ಸಾರ್ವಜನಿಕವಾಗಿ ಪ್ರತಿಭಟಿಸಿದೀವಿ. ನಮ್ಮ ಕೂಗು ಸರ್ಕಾರಕ್ಕೆ ಮುಟ್ಟಬೇಕು ಅಂದ್ರೆ ನಾವು ಬೀದಿಗಿಳಿಯಬೇಕು ಅನ್ನೋದು ನಮಗೆ ಗೊತ್ತಾಗಿದೆ.

ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡೋರು ಯಾರಿಗೂ ಕಡಿಮೆ ಇಲ್ಲ, ಅವರಿಗೂ ಗೌರವ ಇದೆ ಅಂತ ಸಮಾಜಕ್ಕೆ ತೋರಿಸಿಕೊಡೋದು ನಮ್ಮ ಜವಾಬ್ದಾರಿ ಅಂತ ಅಂದ್ಕೊಂಡಿದೀವಿ. ಎರಡು ಸಾರಿ ತುಂಬಾ ಹಿರಿಯ ಮಹಿಳಾ ಕಾರ್ಮಿಕರನ್ನು ಅವರ ಸೇವೆಗಾಗಿ ಸನ್ಮಾನ ಮಾಡಿದೀವಿ.

ಈ ಎಲ್ಲ ಚಟುವಟಿಕೆಗಳಿಗೂ ಮೊದಲೇ ಮಾಡಿಕೊಂಡ ಒಪ್ಪಂದದಂತೆ, ಕಳೆದ ವರ್ಷದವರೆಗೂ ಆಕ್ಸ್‌ಫ್ಯಾಮ್ ಸಂಸ್ಥೆ, ಸಿವಿಡೆಪ್ ಮೂಲಕ ಹಣಸಹಾಯ ಮಾಡ್ತಿತ್ತು. ಈಗ ಅದು ನಿಂತಿದೆ. ನಾವು ನಮ್ಮ ಸಂಘಟನೆಯನ್ನು ನಾವೇ ನಡೆಸುತ್ತಿದ್ದೇವೆ. ಹಲವಾರು ಚಟುವಟಿಕೆಗಳು ಕಾರ್ಮಿಕರ ಸದಸ್ಯತ್ವದ ದುಡ್ಡಿನಿಂದ ನಡೆಯುತ್ತಿದೆ. ಕಾರ್ಯಕ್ರಮಗಳನ್ನು ಮಾಡೋವಾಗ, ಕಾರ್ಮಿಕರ ಬಗ್ಗೆ ಕಾಳಜಿ ಇರೋ ಹಲವಾರು ವ್ಯಕ್ತಿಗಳಿಂದ ಹಣ ಸಂಗ್ರಹಿಸಿ ಮಾಡ್ತಾ ಇದ್ದೀವಿ. ಸದ್ಯಕ್ಕೆ ಕಷ್ಟ ಅನಿಸಿದ್ರೂ ನಾವೇ ನಮ್ಮ ಸಂಘಟನೆಯನ್ನು ನಡೆಸಿಕೊಂಡು ಹೋಗುವುದು ತುಂಬಾ ಮುಖ್ಯ.


ಕಮಲ ಚೆನ್ನಪಟ್ಟಣದ ಒಂದು ಹಳ್ಳಿಯಿಂದ ದಿವಸ ಬಂದು
ಮೈಸೂರು ರಸ್ತೆಯ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಟೈಲರ್
ಕೆಲಸ ಮಾಡುತ್ತಿದ್ದಳು. ಎರಡು ವರ್ಷ ಕೆಲಸ ನಿರ್ವಹಿದ್ದರೂ,
ಒಂದೇ ದಿನ ಹೇಳದೆ ರಜೆ ಹಾಕಿದ ಕಾರಣ ಕಾರ್ಖಾನೆಯಲ್ಲಿ
ಅವಳಿಗೆ ಯಾವುದೇ ಕೆಲಸ ಕೊಡದೆ ಎರಡು ದಿನ ಸುಮ್ಮನೆ
ಎಲ್ಲರ ಮುಂದೆ ನಿಲ್ಲಿಸಿ, ಅವಮಾನ ಮಾಡಲಾಯಿತು. ಜೊತೆಗೆ
ಬಾಯಿಗೆ ಬಂದ ಹಾಗೆ ನಾಯಿ, ಗೂಬೆ ಕತ್ತೆ ಎಂಬ ಬೈಗುಳ.
ಮೂರನೆಯ ದಿನ ಸಂಜೆ ಸೂಪರ್ ವೈಸರ್, ಮ್ಯಾನೇಜರ್‌ಗಳು
ಕಡೆಗೆ ಅವಳನ್ನು ಮ್ಯಾನೇಜರ್ ಕ್ಯಾಬಿನ್‌ಗೆ ಕರೆಸಿ, ':ತಪ್ಪೊಪ್ಪಿಗೆ
ಪತ್ರ ಬರೆದುಕೊಡು ಇಲ್ಲದಿದ್ದರೆ ಕಾರ್ಖಾನೆಯ ಕಡೆ ಸುಳಿಯ
ಬೇಡ' ಎಂದು ಬೆದರಿಸಲಾಯಿತು. ಕಮಲ ನನ್ನದೇನೂ ತಪ್ಪಿಲ್ಲ
ಎಂದು ನಿರಾಕರಿಸಿದ್ದಕ್ಕೆ ಸೆಕ್ಯೂರಿಟಿಯವರನ್ನು ಕರೆಸಿ ಅವಳಿಗೆ
ಹೊಡೆದು, ಪ್ರಾಣಿಯಂತೆ ದರದರನೆ ಎಳೆದುಕೊಂಡು
ಕಾರ್ಖಾನೆಯ ಬಾಗಿಲಿಗೆ ಬಿಡಲಾಯಿತು. ಈ ಘಟನೆಯಲ್ಲಿ
ಅವಳ ಕೈಗೆ ಗಾಯವಾಯಿತು. ಕಮಲ ಈ ಘಟನೆಯಿಂದ
ಮಾನಸಿಕವಾಗಿ ಆಘಾತಕ್ಕೊಳಗಾದಳು, ಇನ್ನಿರಬಾರದೆಂದು
ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಜೀವನದಲ್ಲಿ ಜಿಗುಪ್ಸೆ ಹೊಂದಿದಳು.
ನಂತರ ಗಾ.ಮ.ಕಾ.ಮುನ್ನಡೆಯು ಮಧ್ಯೆ ಪ್ರವೇಶಿಸಿ, ಮಹಿಳಾ
ಆಯೋಗಕ್ಕೆ ದೂರು ನೀಡಿದುದರ ಪರಿಣಾಮವಾಗಿ, ಕಮಲಳಿಗೆ
ಆಡಳಿತ ವರ್ಗದಿಂದ ಪರಿಹಾರ ಸಿಕ್ಕಿತು. ●

ಗಾರ್ಮೆಂಟ್ಸ್ ಕಾರ್ಮಿಕರು ಬೆಂಗಳೂರಿನಲ್ಲಿ ಸುಮಾರು 5 ಲಕ್ಷದಷ್ಟು ಇದ್ದಾರೆ, ಎಲ್ಲರಿಗೂ ಕೆಲಸ ಮಾಡಲು ನಮ್ಮ ಮಿತಿಯಲ್ಲಿ ಆಗೋದಿಲ್ಲ. ಆದ್ರೂ ನಾವು ಯಾರೇ ನಮ್ಮ ಹತ್ತಿರ ಸಮಸ್ಯೆಗಳನ್ನು ತಂದ್ರೂ ಅದನ್ನು ಪರಿಹರಿಸೋದಕ್ಕೆ ಪ್ರಯತ್ನಿಸ್ತೀವಿ. ನಾವು ಬೆಳಗಿನಿಂದ ಸಂಜೆವರೆಗೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡಿ, ನಂತರ ಸಂಘಟನೆ ಕೆಲಸ ಮಾಡಬೇಕು. ಸಮಯದ ಅಭಾವದಿಂದಾಗಿ ನಮ್ಮ ಕೆಲಸವನ್ನು ತುಂಬಾ ದೂರ ದೂರ ಮಾಡಲು ಸಾಧ್ಯವಾಗ್ತಾ ಇಲ್ಲ.

ತುರ್ತು ಸಂದರ್ಭದಲ್ಲಿ ಬೆಂಗಳೂರಿನ ಎಲ್ಲ ಮಹಿಳಾ ಸಂಘಟನೆಗಳು, ಮಾನವ ಹಕ್ಕು ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ಕಾರ್ಮಿಕರ ಮೇಲೆ ಕಾಳಜಿ ಇರುವ ವ್ಯಕ್ತಿಗಳು ನಮ್ಮ ಬೆಂಬಲಕ್ಕೆ ನಿಂತಿದ್ದಾರೆ. ಸಂಘಟನೆಯ ಬೆಳವಣಿಗೆಗೆ ಮಾರ್ಗದರ್ಶನ ನೀಡಿದ್ದಾರೆ. ಅವರೆಲ್ಲರ ಸಹಕಾರದಿಂದ ನಾವು ಇಷ್ಟು ಕೆಲಸ ಮಾಡಲು ಸಾಧ್ಯವಾಗಿದೆ. ಕಾರ್ಮಿಕರು ಈ ಸಂಘಟನೆಯಿಂದ ಸಹಾಯ ಆಗೇ ಆಗುತ್ತೆ ಅನ್ನೋ ನಂಬಿಕೆಯಿಂದ ಬರ್ತಾರೆ. ಆ ನಂಬಿಕೇನಾ ಉಳಿಸಿಕೊಳ್ಬೇಕು. ❑

"ರಾಜಾರಾಮ ಮೋಹನರಾಯ್ ಅವರ ಸಹೋದರ ಮರಣಹೊಂದಿದ್ದ ಸಂದರ್ಭದಲ್ಲಿ ಅವರ ಅತ್ತಿಗೆ ತನ್ನ ಪತಿಯೊಂದಿಗೆ ಚಿತೆಯೇರಲು ಸಿದ್ಧಳಾಗಿದ್ದಳು. ರಾಯ್ ಅವರು ಅದನ್ನೆಷ್ಟೇ ಖಂಡಿಸಿದರೂ ಉಪಯೋಗವಾಗಲಿಲ್ಲ. ಆದರೆ ಬೆಂಕಿಯ ಝಳದಿಂದ ತಡೆಯಲಾರದೇ ಅದರಿಂದ ಹೊರಬರಲು ಆಕೆ ಪ್ರಯತ್ನಿಸುತ್ತ ಇದ್ದಾಗ ಸಂಬಂಧಿಗಳು ಮತ್ತು ಪುರೋಹಿತರು ಆಕೆಯನ್ನು ಕೋಲಿನಿಂದ ಒತ್ತಾಯವಾಗಿ ಬೆಂಕಿಗೆ ತಳ್ಳಿದರು. ಆಕೆಯ ಚೀರಾಟ, ತಮಟೆ ವಾದ್ಯಗಳಲ್ಲಿ ಮುಳುಗಿ ಹೋಯಿತು. ಆಗಲೇ ರಾಯ್ ಈ ಅನಿಷ್ಟದ ವಿರುದ್ಧ ಬಂಡೇಳಬೇಕೆಂದು ಪಣತೊಟ್ಟರು.

–ಜಯಪ್ರಕಾಶ್ ಮಾವಿನಕುಳಿ *(ಮಹಿಳೆಯರೇ ಮತ್ತು...)*



ದಶಾವತಾರ

■ ಚಂದ್ರಮತಿ ಸೋಂದಾ

೧

ಜ್ಞಾನದ ಹಂಬಲ ಎತ್ತರಕೆ ಏರುವ ತವಕ
ಸುತ್ತಲಿನ ಬೆಳಕ ಅರಿವ ಕುತೂಹಲ
ಪ್ರಶ್ನೆ ಉತ್ತರಗಳಲಿ ಅರಿವಿನ ಅನಾವರಣ
ತಿಳಿಯುವ ಬಯಕೆ ಸೃಷ್ಟಿಯ ಹೂರಣ
ಧುತ್ತೆಂದು ಅಪ್ಪಳಿಸಿದ ಛಾಟಿಯ ಏಟು
ತಲೆ ಸಹಸ್ರ ಹೋಳಾದೀತು ಜೋಕೆ
ಜ್ಞಾನ ದಾಹಕೆ ಬಿದ್ದಿತು ಅಂಕೆ
ತನ್ನುದ್ದ ಮೀರಿ ಬೆಳೆದರೆ ಎನ್ನುವ ಶಂಕೆ?
ಜ್ಞಾನಿ ಜನಕನೂ ತಟಸ್ಥ
ಗಡಿದಾಟಿದರೆ ಸಮಾಜದ ಸ್ವಾಸ್ಥ್ಯ?

೨

ಹೆತ್ತವಳು ಕೇವಲ ಬಿಂಬ
ಅಪ್ಪನಿಗೆ ಬಿಡುವಿಲ್ಲದ ರಾಜಕಾರಣ
ಅವ್ವೆಯ ಬೆಚ್ಚನ ಅಪ್ಪುಗೆ
ರಾಣಿಯಾಗುವ ಕನಸು
ಓಡಾಡಿದೆ ಒಂದಲ್ಲ ಮೂರು ಅಂತಃಪುರ
ರಾಜಋಷಿಯ ತಪೋಭೂಮಿ ಬಿಡಲಿಲ್ಲ
ನಾಲ್ವರು ಮಕ್ಕಳ ಮಹಾಮಾತೆ
ದಕ್ಕಿದ್ದು ಹೆರಿಗೆನೋವು ಸಂಕಟ
ಭೂಮಿಗೆಲ್ಲಿಯದು ಚಿಗುರಿನ ಮೇಲಿನ ಹಿಡಿತ?
ಬೀಜದ್ದೆ ಕಾರುಬಾರು ಧರ್ಮಸೂಕ್ಷ್ಮತೆ
ತಾಯ್ತನದ ಸುಖ ಮರೀಚಿಕೆ
ಅಂತರಂಗದ ಕದಮುಚ್ಚಿದ ಬದುಕು
ನಾಲ್ವರ ತಣಿಸಿದವಳಿಗೆ ಕನ್ಯತ್ವ ಉಚಿತ
ಲೌಕಿಕಕೆ ವಿದಾಯ ಕಾನನದ ಸೆಳೆತ

೩

ಅಪ್ಪ ಕಲಿಸಿದ ಅಕ್ಷರವಿತ್ತು
ಸಂಗಾತಿ ಆಯ್ಕೆ ನನ್ನದಿತ್ತು
ಅರಮನೆಯ ಭೋಗಕ್ಕೆ ಹೇಸಿದೆನೆ?
ಕಾನನದ ಬದುಕು ಕೈಬೀಸಿ ಕರೆಯಿತೆ?
ಒಲವಿನೊಡನಾಟದಲಿ ದಿನಗಳುರುಳಿತ್ತು
ಸಂಗಾತಿಯ ಕೊರಳಿಗೆ ಯಮನ ಪಾಶ
ಅರಿವಾಯಿತು ಅವನೀಗ ವಿಧಿವಶ
ತುಟಿತೆರೆದು ಕಟ್ಟಿದೆ ಮಾತಿನ ಮಂಟಪ
ನೇದ ಬಲೆಗೆ ಜೇಡ ತಾನೇ ಬಲಿ
ಲೋಕ ಕಟ್ಟಿತು ಪತಿವ್ರತೆಯ ಪಟ್ಟ
ಒಳಗೊಳಗೇ ನಕ್ಕಿತು ಮನ

೪

ಸ್ವಯಂವರದ ಪುಳಕ ಸಂಭ್ರಮ
ಶಿವಧನುವ ಕಂಡು ಒಳಗೇ ರೋದನ
ಗೆಳತಿಯರ ಸಾಂತ್ವನ, ನಿರೀಕ್ಷೆ
ಕನಸಿನ ಸಾಕಾರ ಧೀಮಂತ
ಪಣಗೆದ್ದ ಗಾಂಭೀರ್ಯ
ಸಂಶಯದ ದಳ್ಳುರಿಗೆ ಬದುಕು ಗಾಳಿಪಟ
ಹಗ್ಗ ಹಾವಾದುದ ಕಂಡು ದಿಗ್ಭ್ರಮೆ
ಅಶೋಕದ ನೆರಳಿಗಿಂತ ಭೀಕರ
ಮಾತು ಬೆಳ್ಳಿ ಮೌನ ಬಂಗಾರ
ಪಾತಿವ್ರತ್ಯದ ಆದರ್ಶ ಮೂರ್ತಿ
ಅಂತರಂಗದ ಅನಾವರಣಕ್ಕೆಲ್ಲಿ ತಾವು?

೫

ಫಕ್ಕನೆ ಎಚ್ಚರ ಕಾನನ ಭೀಕರ
ಸಂಗಾತಿಯ ಕಾಣುವ ಕಾತರ
ಸುತ್ತಲೂ ನೋಟ ವ್ಯರ್ಥ ಹುಡುಕಾಟ
ಹಂಸ ತೂಲಿಕೆಯ ಸುಪ್ಪತ್ತಿಗೆ
ಅಂಚೆಕೊರಳ ಸಂದೇಶದ ಆಕರ್ಷಣೆ
ಮೊಗೆದಷ್ಟೂ ತೀರದ ಒಲವಿನ ಪೂರ
ಈಗೆಲ್ಲಿ ಆ ನನ್ನ ಸರದಾರ
ದಾಳಕ್ಕೆ ಬದುಕು ಮೂರಾಬಟ್ಟೆ
ನಾಡ ಬಿಟ್ಟಾಗ ಬರಲಿಲ್ಲ ಅಳು
ಭೀಕರ ಕಾನನ ಒಂಟಿಗೋಳು

೬
ಪಂಚಪತಿತ್ವ ಲೋಕ ವಿಸ್ಮಿತ
ಜನ್ಮಾಂತರದ ಜಿಜ್ಞಾಸೆ
ಹಲವರ ಮನದಲ್ಲಿ ಭುಗಿಲೆದ್ದ ಬಯಕೆ
ದಾರಿ ಹಣ್ಣೆಂಬ ಭ್ರಮೆ ಮೇಲಾಟ
ಅಗ್ನಿಕನ್ಯೆ ದಹಿಸಿದ್ದು ತನ್ನನ್ನೆ
ಒಳಗೆ ದಾವಾನಲ ಹೊರಗೆ ಗಾಂಭೀರ್ಯ
ನಗು ಕಾರಣ ಲೋಕ ನಂಬಿತು
ಹಿರಿತನದ ಪ್ರತಿಷ್ಠೆ ಯಾರ ಬಿಟ್ಟೀತು
ನೂರು ಸವಾಲು ಬದುಕು ಆಪೋಶನ

೭
ಋಷಿಗಳ ಕಾದಾಟ ಸತ್ಯದ ಹುರುಡು
ಆಶ್ರಿತರ ಬಗೆಗೆ ಕುರುಡು
ಧರ್ಮೇಚ ಅರ್ಥೇಚ ಬರೀ ಜೊಳ್ಳು
ಕಾಲನ್ನಲ್ಲ ಬದುಕನ್ನೇ ಚುಚ್ಚಿದ ಮುಳ್ಳು
ಸತ್ಯದ ಸಾಕ್ಷಾತ್ಕಾರ ಲೋಕ ನಿಬ್ಬೆರಗು
ಪತಿಯ ಅನುಸರಣೆ ದಕ್ಕಿದ್ದು ಬುರುಗು
ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು




೮
ಆನೆ ನಡೆದದ್ದೇ ದಾರಿ ಎಂಬ ಅಹಮಿಕೆ
ಪರಸತಿಯ ಸೇರುವ ಬಯಕೆ
ಅಪ್ಪನ ಮೋಹಕೆ ಮಕ್ಕಳ ಬಲಿ
ವೀರಜನನಿ ಯಾವ ಪುರುಷಾರ್ಥಕ್ಕೆ
ಕಾರ್ಯೇಷು ದಾಸಿ ಕರಣೇಷು ಮಂತ್ರಿ
ಒಳಗೆ ಹೃದಯದ ಮಿಡಿತ
ಬದುಕು ಬಟಾಬಯಲು

೯
ಕನಸಿನ ಸಾಕಾರ ಮನದನ್ನ ರಾಜಕುವರ
ಮಡಿಲ ತುಂಬಿದ ಪುಟ್ಟ ಸರದಾರ
ಸುಪ್ಪತ್ತಿಗೆ ಸುಖನಿದ್ದೆ ನೂರು ಕನಸು
ಕಣ್ಣು ತೆರೆದಾಗ ಬರಿ ಕತ್ತಲು ಶೂನ್ಯ
ಕರುಣೆ ಅನುಕಂಪ ಮಾಹಾಪೂರ
ನೆರಳು ಬೆಳಕುಗಳ ಕಾದಾಟ
ಸಾವಿಲ್ಲದ ಮನೆ ಸಾಸಿವೆಗೆ ಹುಡುಕಾಟ
ಜಗದ ದೃಷ್ಟಿಗೆ ಬೋಧಿಬೆಳಕು
ದಕ್ಕಿದ್ದು ಸಿಕ್ಕಿದ್ದು ಭೂತನೆರಳು

೧೦
ಅಂಬರ ಬಿಸುಟು ಕೇಶಾಂಬರೆ
ಅನುಭವ ದ ಸಾಲಿಗೆ ನೂರು ಪ್ರಶ್ನೆ
ಚನ್ನನಲ್ಲದೆ ಇನ್ನಾವ ಕುರುಹು
ಗಂಡಿಗೆ ಹೆಣ್ಣಾಗಿ ಹೆಣ್ಣಿಗೆ ಗಂಡಾಗಿ
ಕಾಡುವ ಮಾಯೆಯ ಆಟ ನೋಡಾ
ಒಳಗೆ ಸುಳಿವ ಆತ್ಮಕ್ಕಾವ ಉಪಾಧಿ?

ಕಾಲಿಲ್ಲದ ಪುರಾಣ ಕಣ್ಣಿಲ್ಲದ ಚರಿತ್ರೆಗಳು
ತೆವಳಿ ತೆವಳಿ ವರ್ತಮಾನ
ಕಾಲು ಕಣ್ಣು ಕಿವಿಗಳಿದ್ದೂ ಸಂಕೀರ್ಣ
ತುಸು ಉಸಿರಾಡಿ ನಿರಾಳವಾಗುವ ಬಯಕೆ
ದೂರದಲೊಂದು ಮಿಣುಕು ದೀಪ
ಅಪ್ಪಳಿಸುವ ಸಿಡಿಲ ರವ
ಚರಿತ್ರೆ ಪುರಾಣಗಳ ಪಾಠ
ಕಿವಿ ಮುಚ್ಚಿ ಗುರಿ ಮುಟ್ಟುವ ದೃಢತೆ


❑



ಬಿದಿರಿನ ಬುಟ್ಟಿ

■ ಊರ್ಮಿಳಾ ಪವಾರ್

ಅನು: ಮಂಗ್ಳೂರ ವಿಜಯ



(ಹಿಂದಿನ ಸಂಚಿಕೆಯಿಂದ)

ರತ್ನಾಗಿರಿ ಉದ್ಯೋಗ ವಿನಿಮಯ ಕೇಂದ್ರದಿಂದ ಉದ್ಯೋಗಕ್ಕೆ ಆಯ್ಕೆ ಮಾಡಿರುವ ಪತ್ರ ಬಂತು. ಅದನ್ನು ಗಂಡನಿಗೆ ತೋರಿಸಿ, ಸಂತೋಷ ಪಟ್ಟೆ. ಅದೇ ಊರಲ್ಲಿ ಕೆಲಸ ಸಿಕ್ಕಿದ್ದು ಇನ್ನೂ ಸಂಭ್ರಮ ತಂದಿತ್ತು.

ಮಾರನೇ ವಾರವೇ ಕೆಲಸಕ್ಕೆ ಹಾಜರಾದೆ. ನೋಡನೋಡುತ್ತಿದ್ದ ಹಾಗೆ ತಿಂಗಳುಗಳು ಕಳೆದವು. ಮೊದಲ ಬಾರಿ ಪಡೆದ ಸಂಬಳವನ್ನು ಹೆಮ್ಮೆಯಿಂದ ತಂದೆ, ಅದೇಕೊ ಅದನ್ನು ಒಯ್ದು ಗಂಡನ ಕೈಲಿಟ್ಟೆ. ಹರಿಶ್ಚಂದ್ರ 'ನನ್ನ ಬಳಿ ಬೇಡ; ನೀನೇ ಇಟ್ಟುಕೊ' ಎಂದೇನೂ ಹೇಳಲಿಲ್ಲ. ಮುಂದೆಯೂ ಇದೇ ರೂಢಿಯಾಯಿತು.

ನಾಲ್ಕಾರು ತಿಂಗಳ ನಂತರ ಒಂದು ದಿನ ಟೆಲಿಗ್ರಾಂ ಬಂತು. ಅಪಘಾತದಲ್ಲಿ ಅಣ್ಣ ಶಾಹು ಸಾವನ್ನಪ್ಪಿದ ಸುದ್ದಿ ಬರಸಿಡಿಲಿನಂತೆ ಬಡಿಯಿತು. ಅಪ್ಪನ ನಂತರ ಅಣ್ಣನೇ ಎಲ್ಲಾ ಹೊಣೆ ಹೊತ್ತಿದ್ದ. ತನ್ನ ಸಂಸಾರದ ಜೊತೆಗೆ ನಾಲ್ವರು ಅಕ್ಕಂದಿರು ಮತ್ತು ನಾನೊಬ್ಬ ತಂಗಿಯನ್ನು ನೋಡಿಕೊಳ್ಳುತ್ತಿದ್ದ. ಯಾರಿಗೂ ಕಟು ಮಾತಾಡಿದವನಲ್ಲ. ನನ್ನ ಮದುವೆಗಂತೂ ಗಟ್ಟಿ ಒತ್ತಾಸೆಯಾಗಿ ನಿಂತಿದ್ದೇ ಅವನು.

ಹರಿಶ್ಚಂದ್ರ–ನಾನು ಊರಿಗೆ ಹೋದೆವು. ಅಕ್ಕಂದಿರು ಬಂದಿದ್ದರು. ಮನೆ ಶೂನ್ಯವಾಗಿತ್ತು. ಅಮ್ಮನ ದುಃಖದ ಕಟ್ಟೆ ಒಡೆದಿತ್ತು. ಆಕೆ ಏನೆಲ್ಲಾ ಕಂಡಿದ್ದಳು. ನಮಗೆ ತಿಳಿದಂತೆ ಸಮಾಧಾನ ಮಾಡಿದೆವು. ಅಣ್ಣನಿಗೆ ಯಾವ ಕಾಯಿಲೆಯೂ ಇರಲಿಲ್ಲ; ಅವನ ಜೀವನ ಕೂಡ ಅತಿ ಸರಳವಾಗಿತ್ತು. ಮನೆಯ ಜವಾಬ್ದಾರಿ ಇನ್ನು ಹೇಗೆ ಎಂಬುದು ಅಮ್ಮನ ಮುಖ್ಯ ಪ್ರಶ್ನೆಯಾಗಿತ್ತು.

ಕ್ರಿಯಾಕರ್ಮಗಳು ಮುಗಿಯಲು ಏಳು ದಿನಗಳು ಹಿಡಿದವು. ಎಲ್ಲವೂ ಬೌದ್ಧ ವಿಧಿಯಂತೆ ನಡೆದ ಬಳಿಕ ಅಕ್ಕಂದಿರೆಲ್ಲ ಜೊತೆಯಾಗಿ ಅಮ್ಮನೊಂದಿಗೆ ಮಾತಾಡಿದೆವು. ಊರು–ಜಮೀನು ಇತ್ಯಾದಿ ಎಲ್ಲವನ್ನೂ ಬಿಟ್ಟು ಯಾರಾದರೊಬ್ಬ ಮಗಳ ಮನೆಯಲ್ಲಿರುವುದು ಸೂಕ್ತವೆಂದು ಹೇಳಿದ್ದಕ್ಕೆ ಅಮ್ಮ ಸುತಾರಾಂ ಒಪ್ಪಲಿಲ್ಲ. 'ನನ್ನ ಹೆಣವೂ ಇಲ್ಲೇ ಬೀಳಬೇಕು' ಎಂದು ಕಟುವಾಗಿ ನುಡಿದಾಗ, ನಾವು ಸುಮ್ಮನಾದೆವು. 'ನೀವೆಲ್ಲ ಹೊರಡಿ; ನಾನಿಲ್ಲೇ ಇರುವವಳು' ಎಂದು ಅಮ್ಮ ದೃಢವಾಗಿ ಹೇಳಿದಳು. ನಾವೆಲ್ಲ 'ಕೆಲವು ದಿನ ಬಿಟ್ಟು ಈ ವಿಷಯವನ್ನು ಮತ್ತೆ ಮಾತಾಡೋಣ' ಎಂದುಕೊಂಡೆವು. ಎಲ್ಲರೂ ಹೋದ ಬಳಿಕ, ನಾವೂ ಹೊರಟು ಬಂದೆವು.

ದಿನಗಳು ಉರುಳುತ್ತಿದ್ದವು. ಪಟ್ಟಣಕ್ಕೆ ತುಸು ದೂರವಾದರೂ ಯಾರದೂ ಕಿರಿಕಿರಿಯಿಲ್ಲದ ಮನೆ ಸಿಕ್ಕಿತ್ತು. ತಿಂಗಳುಗಳು ಕಳೆಯುತ್ತಿದ್ದವು. ಹೀಗಿರುವಾಗಲೇ ಒಂದು ತಿಂಗಳು ನಿಗದಿತ ಸಮಯಕ್ಕೆ ನಾನು ಮುಟ್ಟಾಗಲಿಲ್ಲ. ನಾಲ್ಕಾರು ದಿನ ಹಿಂದೆ–ಮುಂದೆ ಆದೀತೆಂದು ಕಾದು ನೋಡಿದೆ; ಆಗಲಿಲ್ಲ. ಆಗ ಮನಸ್ಸು ಮುದಗೊಂಡಿತು. ಹರಿಶ್ಚಂದ್ರನಿಗೆ ಹೇಳಿದೆ. ಅವನಿಗೆ ಹರ್ಷಾತಿರೇಕ. ಹಿಡಿದು ಮುದ್ದಾಡಿದ. ನಿಜವೆಂದರೆ, ನನಗೆ ಅಷ್ಟೇನೂ ಆನಂದಾತಿರೇಕ ಉಂಟಾಗಿರಲಿಲ್ಲ. ಜವಾಬ್ದಾರಿ ಹೆಚ್ಚಾಗಲಿರುವ ಅರಿವಾಗುತ್ತಿತ್ತು. ತವರು ಮನೆಯಿಂದ ನೆರವು ಸಿಗುವ ಹಾಗಿರಲಿಲ್ಲ. ಕೆಲಸಕ್ಕೆ ಸೇರಿದ ಮೇಲೆ ನನಗೆ ಹೆಚ್ಚಿನ ವಿದ್ಯಾಭ್ಯಾಸ ಮಾಡುವ ತುಡಿತ ತೀವ್ರವಾಗಿತ್ತು.

ದಿನಗಳು ತುಂಬುತ್ತಿದ್ದವು. ಮೋಹನ–ನೀಲಾ ಬಂದು ಮಾತಾಡಿಸಿದರು; ಸಂತೋಷ ಪಟ್ಟರು. ಅಮ್ಮನ ಮನೆಗೆ ಹೋಗಿ ಬಂದೆವು. ಹರಿಶ್ಚಂದ್ರನ ತಾಯಿಯೂ ಬಂದು ನೋಡಿದರು. ಆರೋಗ್ಯವಾಗಿರುವ ರೀತಿಯನ್ನು ತಿಳಿಸಿದರು. ಮಾತೃಸಹಜ ಕಾಳಜಿಯಿಂದ 'ಕೆಲಸ ಬಿಟ್ಟು ಬಿಡು' ಎಂದರು. ನಾನು ಎಲ್ಲದಕ್ಕೂ ಹೂಂಗುಟ್ಟಿದೆ.

ತಿಂಗಳು ಮುಂಚೆ ಅಮ್ಮ ಬಂದಿಳಿದಳು. ಹೆರಿಗೆ ಸಮಯಕ್ಕೆ ಅತ್ತೆಯೂ ಬಂದರು. ಹೆರಿಗೆಯ ನೋವು ಕಾಣಿಸಿಕೊಂಡಾಗ ಪ್ರಾಣವೇ ಹೋದಂತಾಗಿತ್ತು. 'ಇನ್ನೆಂದೂ ಗರ್ಭಿಣಿಯಾಗೋಲ್ಲ' ಎಂದು ಸಾವಿರ ಬಾರಿ ಹೇಳಿಕೊಂಡೆ. ಸರ್ಕಾರಿ ಆಸ್ಪತ್ರೆಯ ಲೇಬರ್ ರೂಂಗೆ ಅಮ್ಮನೂ ಬರಲಿಲ್ಲ; ಅತ್ತೆಯೂ ಬರಲಿಲ್ಲ. ಅಲ್ಲಿ ನೋವಿನ ನಂತರ, ಮಗು ಜನಿಸಿದ ನಂತರ ಮತ್ತೆ ಸಾವಿರ ಸಲ 'ಮತ್ತೆಂದೂ ಗರ್ಭಿಣಿಯಾಗೊಲ್ಲ' ಎಂದು ಹೇಳಿಕೊಂಡೆ. ಮಗು ಹಾಲು ಕುಡಿಯುವಾಗ 'ಇಂಥ ಪ್ರಾಣ ಹಿಂಡುವ ನೋವನ್ನು ಅನುಭವಿಸಿದ ನಂತರವೂ ಹೆಂಗಸರು ಮತ್ತೆ ಮತ್ತೆ ಅಂಥದೇ ನರಕಸದೃಶ ಯಾತನೆಯ ನೋವಿಗೆ ತಮ್ಮನ್ನು ಏಕೆ ಗುರಿಪಡಿಸಿಕೊಳ್ಳುತ್ತಾರೆ?' ಎಂದು ಯೋಚಿಸಿದ್ದೆ. 'ದೇಹ ಸುಖ'ದ ಆಸೆ ಎಂದು ಉತ್ತರ ಹೊಳೆದಾಗ, ಇದಕ್ಕಿಂತ 'ಗಂಡನ ಎದುರಿಗಿನ ಪಾರತಂತ್ರ್ಯ' ಎಂಬುದೂ ಮಿಂಚಿ ಬಂತು. ಪುರುಷಪ್ರಧಾನ ಸಮಾಜ ವ್ಯವಸ್ಥೆಯ ಮೌಲ್ಯಗಳು ಮುಂದುವರೆದಿರುವಾಗಲೂ ಮಹಿಳೆ ಅವುಗಳನ್ನು ಪೋಷಿಸುತ್ತಾ ಬಂದಿರುವುದು ಎದ್ದು ಕಂಡಿತು. ನಾನೂ ಈ 'ದುರಂತ ಚಕ್ರ'ದ ಭಾಗವಾಗಿದ್ದೆ. ಏಕೆಂದರೆ, ಅನಂತರ ನಾನು ಕೂಡ ಈ ಮಾರಣಾಂತಿಕ ನೋವಿನ ಪ್ರಕ್ರಿಯೆಯನ್ನು ಎರಡು ಬಾರಿ ದಾಟಿದೆ.

ಗಂಡು ಮಗುವಿನ ಜನನವಾದ ಸುದ್ದಿ ಹಬ್ಬಿದಾಗ ಎಲ್ಲೆಡೆ ಸಂತೋಷ. ವಾರ್ಡ್‌ಗೆ ಕಳಿಸಿದ ಮರುಕ್ಷಣವೇ ಬಂದ ಹರಿಶ್ಚಂದ್ರನ ಮುಖ ಊರಗಲವಾಗಿತ್ತು. ಅಮ್ಮ, ಅತ್ತೆ, ಅಕ್ಕ–ಪಕ್ಕದ ಬೆಡ್‌ಗಳಲ್ಲಿದ್ದವರು ನನ್ನನ್ನು ಮತ್ತು ನನ್ನ ಗಂಡನನ್ನು ಅಭಿನಂದಿಸಿದರು. ಇಂಥ ಭಾರಿ ಅಭಿನಂದನೆಯೇ ಹೆಂಗಸನ್ನು ಮತ್ತೊಮ್ಮೆ ಗರ್ಭಿಣಿಯಾಗಲು ಪ್ರೇರಿಸುತ್ತದೇನೋ ಎಂದೆನಿಸಿತು. ಹೆಣ್ಣು ಮಗು ಹೆತ್ತ ತಾಯಿಜೀವ, ತನ್ನ ಪಾಲಿಗೆ ಬರುವ ಮೂದಲಿಕೆ, ತಿರಸ್ಕಾರಗಳಿಂದ ಪಾರಾಗಲು ಗಂಡುಮಗು ಬೇಕೆಂಬ ಹೊಂಗನಸು ಕಂಡು, ಮತ್ತೊಮ್ಮೆ ಗರ್ಭಿಣಿ ಯಾಗಲು ಹವಣಿಸುತ್ತದೆ ಎಂದೂ ಅನಿಸಿತು.

ಸಹಜವಾಗಿ ಹೆರಿಗೆಯಾಗಿರಲಿಲ್ಲ. ಹಾಗಾಗಿ ಆಪರೇಷನ್ ಅನಿವಾರ್ಯವಾಗಿತ್ತು. ಗಂಡನ ಸಹಿ ಪಡೆದು ಆಪರೇಷನ್ ಮುಗಿಸ ಲಾಗಿತ್ತು. ಇದಕ್ಕಾಗಿ ನನಗೆ ಹಾಕಲಾದ ನಾಲ್ಕು ಹೊಲಿಗೆಗಳ ಬಗ್ಗೆ ಹರಿಶ್ಚಂದ್ರ ಅಭಿಮಾನದಿಂದ ಗಟ್ಟಿಯಾಗಿ ಹೇಳಿಕೊಳ್ಳುತ್ತಿದ್ದ; ಹೆಂಡತಿಯ ನೋವಿನಲ್ಲೂ ಬೀಗುವ ಗಂಡನ ದರ್ಶನ ನನಗಾಗಿತ್ತು.

ಹೆರಿಗೆಯ ನಂತರ ಅಮ್ಮ ಮನೆಗೆ ಕರೆದೊಯ್ದಳು. ಅವರಿವರನ್ನು ಬೈಯುತ್ತಾ ನನ್ನ ಬಾಣಂತನ ಮಾಡಿದಳು. ಅಗ್ಗಿಷ್ಟಿಕೆಯಲ್ಲಿ ಮೈ ಕಾಯಿಸಿಕೊಳ್ಳಲು ಹೇಳಿದಳು. ಮಗುವಿಗೆ ಬಿಸಿ ನೀರಲ್ಲಿ ಸ್ನಾನ ಮಾಡಿಸಿದಳು. 12ನೇ ದಿನ ಅತ್ತೆ, ನಾದಿನಿ ಬಂದರು. ಮಗುವಿಗೆ ಸ್ನಾನ ಮಾಡಿಸಿ, ಉಡುಗೊರೆ ನೀಡಿ, ಊಟ ಮಾಡಿ ಹೊರಟರು.

ಹರಿಶ್ಚಂದ್ರ ಪ್ರತಿ ದಿನ ಸಂಜೆ ಬಂದು ರಾತ್ರಿಯಾಗುವವರೆಗೆ ಇದ್ದು ಹೋಗುತ್ತಿದ್ದ. ಐದನೇ ತಿಂಗಳಿಂದ ಕೆಲಸಕ್ಕೆ ಹೋಗಲಾರಂಭಿಸಿದೆ. ಆಗ ಮಗುವನ್ನು ನೋಡಿಕೊಳ್ಳುವುದು ಸಮಸ್ಯೆಯಾಯಿತು. ಹರಿಶ್ಚಂದ್ರನ ಸಲಹೆಯಂತೆ ಊರಿನಿಂದ ನಾದಿನಿ ಶಾಲಿನಿಯನ್ನು ಕರೆಯಿಸಿಕೊಂಡೆ; ಹೆಚ್ಚೂ ಕಮ್ಮಿ ಒಂದೂವರೆ ವರ್ಷ ಅವಳೇ ಮಗುವನ್ನು ನೋಡಿಕೊಂಡಳು. ಅವಳಿಗೆ ಗಂಡು ಹುಡುಕುವುದು ನಡೆದೇ ಇತ್ತು. ಒಂದು ಸಂಬಂಧ ಕೂಡಿ ಬಂತು. ಮದುವೆಯೂ ಆಯಿತು. ಮಗುವನ್ನು ನೋಡಿಕೊಳ್ಳಲು ಊರಿಂದ ಮತ್ತೆ ಯಾರನ್ನಾದರೂ ಕರೆಯಿಸಿಕೊಳ್ಳಲು ನಿರ್ಧರಿಸಿದೆವು. ಹೆಂಗಸರು ಬರುವುದು ಕಠಿಣವಿತ್ತು. ಹಾಗಾಗಿ 15ರ ಆಸುಪಾಸಿನ ಹುಡುಗಿಯೊಬ್ಬಳನ್ನು ಒಪ್ಪಿಸಿ ಕರೆತಂದೆವು. ಒಬ್ಬರ ನಂತರ ಇನ್ನೊಬ್ಬರಂತೆ ನಾಲ್ಕಾರು ಜನ ಬಂದರು. ಯಾರೂ ಬಹುಕಾಲ ಉಳಿಯಲಿಲ್ಲ. ರತ್ನಾಗಿರಿ ಅವರಿಗೆ ಹೊಂದಿಕೆ ಬರಲಿಲ್ಲ.

ಮಗುವಿಗೆ ಎರಡು ವರ್ಷ ತುಂಬುತ್ತ ಬಂದಂತೆ ನಾನು ಮತ್ತೆ ಗರ್ಭಿಣಿಯಾದೆ. ಈ ಸಲವೂ ಗಂಡು ಮಗುವಾದರೆ ಆಪರೇಷನ್ ಮಾಡಿಸಿಕೊಳ್ಳುವ ವಿಚಾರ ಮಾಡಿದೆ. ಆದರೆ ಹೆಣ್ಣು ಮಗು ಹುಟ್ಟಿತು. ಆಪರೇಷನ್ ವಿಷಯ ಹಿಂದೆ ಹೋಯಿತು. ಮೂರು ವರ್ಷಗಳ ನಂತರ ಮತ್ತೆ ಗರ್ಭಿಣಿಯಾಗಿ ಹೆತ್ತಿದ್ದು ಮತ್ತೊಂದು ಹೆಣ್ಣು ಕೂಸನ್ನು. ಅಲ್ಲಿಗೆ ಇನ್ನೊಂದು ಗಂಡು ಮಗುವಿನ ಆಸೆ ಇಟ್ಟುಕೊಂಡಿದ್ದ ಗಂಡನ ವಿಚಾರವನ್ನು ದೂರ ತಳ್ಳಿ, ಆಪರೇಷನ್ ಮಾಡಿಸಿಕೊಂಡೆ. ಮುಖ ಊದಿಸಿಕೊಂಡ ಗಂಡನಿಗೆ 'ಒಮ್ಮೆ ನೀವೇ ನೋವು ತಿಂದು ಮಗುವನ್ನು ಹೆರಿ; ಆಗ ಎಲ್ಲವೂ ಅರ್ಥವಾಗುತ್ತೆ' ಎನ್ನಬೇಕೆನಿಸಿತು. ಆದರೆ, ಅನಿಸಿಕೆ ನಾಲಿಗೆಗೆ ಬರಲಿಲ್ಲ.

* * *

ಮೊದಲನೇ ಮಗು ನಾದಿನಿ ಶಾಲಿನಿಯ ಆರೈಕೆಯಲ್ಲಿರುವಾಗ ನಾನು ನಿಶ್ಚಿಂತೆಯಿಂದ ಆಫೀಸಿಗೆ ಹೋದೆ. ಅಲ್ಲಿ ಉತ್ತಮ ನೌಕರಳೆನಿಸಿಕೊಂಡೆ. ಸಾಹಿತ್ಯದಲ್ಲಿನ ಆಸಕ್ತಿಯನ್ನು ವೃದ್ಧಿಸಿಕೊಂಡೆ. ನಾಟಕಗಳಲ್ಲಿನ ನನ್ನ ಅಭಿರುಚಿಯನ್ನು ಸಹೋದ್ಯೋಗಿಗಳಿಗೆ ತಿಳಿಯಪಡಿಸಿದೆ. ರತ್ನಾಗಿರಿಯಲ್ಲಿನ ಸಾಹಿತಿಗಳ ಪರಿಚಯ ಮಾಡಿಕೊಂಡೆ; ಸಾಹಿತ್ಯ ಸಭೆಗಳಿಗೆ ಹೋಗಲಾರಂಭಿಸಿದೆ.

ಗಣೇಶೋತ್ಸವ ಪ್ರಯುಕ್ತ ಆಫೀಸಿನವರು ನಾಟಕ ಅಭಿನಯಿಸುವ ವಿಚಾರ ಇಟ್ಟಾಗ, ಕೂಡಲೇ ಹೂಂ ಗುಟ್ಟಿದೆ. ಗಂವಾಕರ್ ಬಿರ್ಜೆ, ಭೋಂಸ್ಲೆ ಮುಂತಾದವರು ಪಾತ್ರ ಮಾಡಿದರು. ಆಗ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದರು. ರತ್ನಾಗಿರಿಯಲ್ಲಿ ಮೊದಲ ಬಾರಿಗೆ ಸ್ತ್ರೀ ಪಾತ್ರ ಮಾಡಿದವರು ಹೆಗಡೆ ಎಂಬ ಇಬ್ಬರು ಸೋದರಿಯರು. ಅವರೊಂದಿಗೆ ನಾನೂ ಸೇರಿದೆ. 'ಮೈ-ಕೈ ಮುಟ್ಟಬಾರದು; ರಿಹರ್ಸಲ್ ಕಾಲದಲ್ಲಿ 8 ಗಂಟೆಯ ನಂತರ ಉಳಿಯುವುದಿಲ್ಲ' ಎಂಬ ಕರಾರು ಹಾಕಿ, ನಾನು ನಾಟಕಗಳಲ್ಲಿ ಅಭಿನಯಿಸಿ ಹೆಸರು ಪಡೆದೆ. 'ಮಲಾ ಕಾಹಿ ಸಾಂಗಾಯಚೆ' (ನನಗೇನೋ ಹೇಳುವುದಿದೆ); ಅಶ್ರೂಂಚಿ ಝಾಲಿ ಫುಲೆ' (ಹೂಗಳಾದ ಕಣ್ಣೀರ ಹನಿ); ಶಾಂತತಾ! ಕೋರ್ಟ್ ಚಾಲೂ ಆಹೆ' (ಸದ್ದು! ವಿಚಾರಣೆ ನಡೆಯುತ್ತಿದೆ) ಮುಂತಾದ ನಾಟಕಗಳನ್ನು ರಂಗದ ಮೇಲೆ ಪ್ರದರ್ಶಿಸಿ, ನಮ್ಮ ಆಫೀಸಿನ ಸಿಬ್ಬಂದಿ ಹೆಸರು ಮಾಡಿದರು.

ಶಾಂತಾಬಾಯಿ ಜೋಗ್ ಎಂಬುವವರು ಆಗಿನ ವಿಖ್ಯಾತ ರಂಗ ಕಲಾವಿದೆ. ಕಂಪನಿ ನಾಟಕದಲ್ಲಿ ಪಾತ್ರ ವಹಿಸಲು ಆಕೆ ರತ್ನಾಗಿರಿಗೆ ಬಂದಾಗ ಆಫೀಸ್ ತಂಡವನ್ನು ಕರೆದೊಯ್ದು ಭೇಟಿ ಮಾಡಿಸಿದೆ. ಆಕೆಯ ಬಗ್ಗೆ ತುಸು ಓದಿಕೊಂಡಿದ್ದರಿಂದ ತಂಡದ ನೇತೃತ್ವವನ್ನು ನಾನೇ ವಹಿಸಿದ್ದೆ. ಆದುದರಿಂದ ಶಾಂತಾಬಾಯಿ ಜೊತೆ ಹತ್ತಿರದಿಂದ ಮಾತಾಡಿದೆ. 'ಮುಂಬಯಿಗೆ ಬಂದಾಗ ಬನ್ನಿ; ನಾಟಕಗಳಲ್ಲಿ ಪಾತ್ರ ಮಾಡುವುದಾದರೆ ಹೇಳಿ, ಕೊಡಿಸುವೆ' ಎಂದು ವಿಳಾಸ ನೀಡಿದ ಶಾಂತಾಬಾಯಿಗೆ ಉತ್ತರಿಸಲು ಧೈರ್ಯವಾಗಲಿಲ್ಲ; ಏಕೆಂದರೆ ಆ ಹೊತ್ತಿಗೆ ಗಂಡ-ಮಗು ನೆನಪಾಗಿದ್ದರು.

ಎರಡು-ಮೂರು ವರ್ಷಗಳ ನಂತರ ನನ್ನ ಮೈದುನರೊಬ್ಬರ ಮದುವೆ ಮುಂಬೈನಲ್ಲಾಯಿತು. ಹೋದಾಗ ಸಹಜವಾಗಿಯೇ ಶಾಂತಾಬಾಯಿಯವರನ್ನು ನೆನಪಿಸಿಕೊಂಡೆ. ದಿನಪತ್ರಿಕೆಗಳನ್ನು ತಿರುವಿ ಹಾಕಿ, ಯಾವುದಾದರೂ ನಾಟಕದಲ್ಲಿ ಶಾಂತಾಬಾಯಿ ಪಾತ್ರ ಮಾಡುತ್ತಿದ್ದಾಳಾ ಎಂದು ಹುಡುಕಿದೆ; ಸಿಕ್ಕೇ ಬಿಟ್ಟಿತು. ಶಿವಾಜಿ ಮಂದಿರದಲ್ಲಿ 'ನಟ ಸಾಮ್ರಾಟ್' ನಡೆಯುತ್ತಿತ್ತು. ಶಾಂತಾಬಾಯಿಗೆ ಇದರಲ್ಲಿ ಪ್ರಧಾನ ಪಾತ್ರ. ನಾವು ನಾಲ್ಕಾರು ಜನ ಒಂದು ದಿನ ಶಿವಾಜಿ ಮಂದಿರಕ್ಕೆ ಹೋದೆವು. ಟಿಕೆಟ್ ಖರೀದಿಸಿ ನಾಟಕ ನೋಡಿದೆವು. ಇಂಟರ್‌ವಲ್‌ನಲ್ಲಿ ಗ್ರೀನ್ ರೂಂಗೆ ಹೋಗಿ, 'ಶಾಂತಾಬಾಯಿ ಪರಿಚಯದವರು; ಅವರನ್ನು ನೋಡಬೇಕು' ಎಂದು ತಿಳಿಸಿದೆವು. ತುಸು ಹೊತ್ತಿನಲ್ಲಿ ಶಾಂತಾಬಾಯಿ ಮೇಕಪ್‌ನಲ್ಲೇ ಬಂದಳು. ಆಕೆಯ ಕಣ್ಣುಗಳು ಕೆಂಪಗಾಗಿದ್ದವು. ನಾವು ನಮಸ್ತೆ ಎನ್ನುತ್ತಲೇ 'ನಾಟಕ ಹಿಡಿಸಿತಾ?' ಎಂದು ಕೇಳಿದಳು. ನಾವು ಏನಾದರೂ ಉತ್ತರಿಸುವಷ್ಟರಲ್ಲಿ ಒಳಗಿಂದ ಯಾರೋ ಕರೆದಂತಾಯಿತು; ಆಕೆ ಹೋಗಿ ಬಿಟ್ಟಳು. ನನ್ನನ್ನು ಆಕೆ ಗುರುತು ಹಿಡಿದಳೆಂದೇನೂ ನನಗೆ ಅನಿಸಲಿಲ್ಲ. ನನ್ನಂಥವರು ಎಷ್ಟು ನೂರು ಜನ ಆಕೆಯನ್ನು ಮಾತಾಡಿಸುತ್ತಾರೋ. ಆದರೆ ಆಕೆ ನಮ್ಮೊಂದಿಗಿದ್ದ ಒಂದೆರಡು ನಿಮಿಷಗಳಲ್ಲಿ ಮದ್ಯದ ಗಾಢ ವಾಸನೆ ಹರಡಿತ್ತು.

ಹರಿಶ್ಚಂದ್ರನಿಗೆ ಮುಂಬೈ ಅಂದರೆ ತುಂಬಾ ಇಷ್ಟ. ಚಿಕ್ಕವನಿದ್ದಾಗ ಮಾಮಾ ಬಳಿಯಿದ್ದು 8ನೇ ಮತ್ತು 9ನೇ ತರಗತಿ ಓದಿದ್ದು ಮುಂಬೈನಲ್ಲೆ. ನಾಯ್‌ಗಾಂವ್ ಮತ್ತು ಭೋಯಿವಾಡಾದಲ್ಲಿನ ವಿಶಾಲ ಮೈದಾನಗಳಲ್ಲಿ ಮಹಾ ಪುಢಾರಿಗಳ ಭಾಷಣಗಳು ಏರ್ಪಡುತ್ತಿದ್ದವಂತೆ. ಒಂದೆರಡನ್ನು ಪೂರ್ಣ ಕೇಳಿದ್ದನಂತೆ. ಬಾಬಾಸಾಹೇಬ್ ಅಂಬೇಡ್ಕರ್ ಮಾಡಿದ ಒಂದು ಭಾಷಣವನ್ನೂ ಕೇಳಿದ ಭಾಗ್ಯ ತನ್ನದು ಎಂದು ಆತ ಆಗಾಗ ಹೇಳಿಕೊಳ್ಳುತ್ತಿದ್ದ. ಮಕ್ಕಳಿಗೆ ಒಳ್ಳೇ ವಿದ್ಯಾಭ್ಯಾಸ ಮುಂಬೈಯಲ್ಲಿ ಸಿಗುತ್ತದೆ ಎಂದು ಆತ ನಂಬಿದ್ದ.

* * *

ನಂತರ ನಮಗೆ ಈ ಅವಕಾಶ ತಂತಾನೆ ಬಂತು. ಹರಿಶ್ಚಂದ್ರನಿಗೆ ಮುಂಬೈಗೆ ವರ್ಗಾವಣೆಯಾಯಿತು. ಕೆಲವೇ ದಿನಗಳಲ್ಲಿ ನಾನೂ ಮಾಡಿಸಿಕೊಂಡೆ. ಗಂಡ-ಮಕ್ಕಳು ಎಲ್ಲರೂ ಮುಂಬೈಗೆ ಹೋದೆವು. ಮನೆ ಮಾಡಿದ ಮೇಲೆ ಸಾಮಾನುಗಳನ್ನು ಒಯ್ಯುವ ತೀರ್ಮಾನವಾಗಿತ್ತು.

ಮೊದಲು ಕುರ್ಲಾದಲ್ಲಿದ್ದ ನನ್ನ ಅಕ್ಕನ ಮನೆಗೆ ಹೋದೆವು. ಮನೆ ಸಿಗುವವರೆಗೆ ಅಲ್ಲೇ ಉಳಿದೆವು. ಆಕೆಯ ಮೂರು ಮಕ್ಕಳು; ನನ್ನವು ಮೂರು. ಆಕೆ-ಆಕೆಯ ಗಂಡ; ನಾನು-ನನ್ನ ಗಂಡ. ನಾವಿಬ್ಬರೂ ಹೆಂಗಸರು ಕೆಲಸ ಮಾಡುತ್ತಿದ್ದುದರಿಂದ ಇಬ್ಬರು ಮನೆಗೆಲಸದವರು. ಹೀಗೆ ಒಟ್ಟು 12 ಜನ. ಅಲ್ಲಿದ್ದ ಆರು ಜನರ ಜೊತೆಗೆ ನಾವು ಆರು ಜನ ಸೇರಿದ್ದೆವು. ಭಾವ ದಾಭೋಳ್ಕರ್ ಸರಳ ಜೀವಿ; ಸಜ್ಜನ. ನಮ್ಮಿಂದ ತೊಂದರೆಯಾಯಿತೆಂಬುದನ್ನು ಅವರು ಒಮ್ಮೆಯೂ ತೋರ್ಪಡಿಸಲಿಲ್ಲ.

ಬಾಂದ್ರಾದಲ್ಲಿ ಮನೆ ಸಿಕ್ಕಾಗ ನಾವು ಅಲ್ಲಿಗೆ ಹೋದೆವು. ಊರಿನಿಂದ ಎಲ್ಲಾ ಸಾಮಾನು ತರಿಸಿಕೊಂಡೆವು. ಹೊಸ ಮನೆ, ಹೊಸ ಏರಿಯಾ ಹೊಂದಿಕೆಯಾಗುತ್ತಿದ್ದಂತೆ ನಾನು ಸಾಹಿತ್ಯ, ನಾಟಕಗಳತ್ತ ಗಮನ ಹರಿಸಿದೆ. ಹರಿಶ್ಚಂದ್ರನ ದಿನಚರಿ ಸಾಮಾನ್ಯವಾಗಿತ್ತು. ತಡವಾಗಿ ಏಳುವುದು, ನಿತ್ಯಕರ್ಮ ಮುಗಿಸಿಕೊಂಡು ಉಪಾಹಾರ ಸೇವಿಸಿ, ಚಹಾ ಕುಡಿದು, ಮದ್ಯಾಹ್ನದ ಊಟದ ಬಾಕ್ಸ್ ಹಿಡಿದು ಹೊರಬಿದ್ದರೆ ಮರಳುವುದು ರಾತ್ರಿ 8ಕ್ಕೇ. ಬಂದವರು ತುಸು ಹೊತ್ತು ರೇಡಿಯೋ ಕೇಳುವುದು, ಮಕ್ಕಳ ಜೊತೆ ಅರ್ಧ ಗಂಟೆಯಷ್ಟು ಕಾಲ ಕಳೆಯುವುದು, ಊಟ

ಮಾಡುವುದು, ನಂತರ ಹಾಸಿಗೆಯಲ್ಲಿ ನನ್ನ ದಾರಿ ಕಾಯುವುದು. ಇದು ಅವನ ದಿನಚರಿ. ಇದರಲ್ಲಿ ಏನಾದರೂ ಬದಲಾವಣೆಯಾದರೆ ಕೇವಲ 10%ರಷ್ಟು ಮಾತ್ರ.

ನನ್ನದೂ ಹೀಗೆ ಇತ್ತು. ಬೆಳಿಗ್ಗೆ 5 ಗಂಟೆಗೆ ಏಳುವುದು; ನೀರು ತುಂಬುವುದು; ಎಲ್ಲರಿಗೂ ಸ್ನಾನಕ್ಕೆ ನೀರು ಕಾಯಿಸುವುದು; ಮಕ್ಕಳನ್ನು ಎಬ್ಬಿಸುವುದು, ಅವರಿಗೆ ಬಟ್ಟೆ ತೆಗೆದು ಕೊಡುವುದು, ಒಂದೆಡೆ ಉಪಾಹಾರ, ಇನ್ನೊಂದೆಡೆ ಎಲ್ಲರಿಗೆ ಮಧ್ಯಾಹ್ನದ ಊಟ ಸಿದ್ಧಪಡಿಸಿಡುವುದು. ಕೆಲಸದ ಹುಡುಗಿ ಎಲ್ಲರಿಗೂ ಉಪಾಹಾರ ಬಡಿಸುತ್ತಿದ್ದಳು ಮತ್ತು ಬಾಕ್ಸ್ ರೆಡಿ ಮಾಡಿ ಕೊಡುತ್ತಿದ್ದಳು. ಈ ಟೈಂನ ನಾನು ಸ್ನಾನ ಮಾಡಿ ರೆಡಿಯಾಗುತ್ತಿದ್ದೆ.

9 ಗಂಟೆಗೆ ಎಲ್ಲರೂ ಮನೆ ಬಿಡುತ್ತಿದ್ದೆವು. ಎಲ್ಲರೂ ಹಿಂತಿರುಗುವುದು ಸಂಜೆ 4 ರಿಂದ ಶುರು. ಮೊದಲು ಮಕ್ಕಳು; ನಂತರ ನಾನು, ಕೊನೆಗೆ ಗಂಡ. ಬಂದ ತಕ್ಷಣ ಮತ್ತೆ ರಾತ್ರಿಯ ಅಡುಗೆ ಶುರು. ಕೆಲಸದ ಹುಡುಗಿ ಹತ್ತಿರದ ಅಂಗಡಿಯಿಂದ ಅಗತ್ಯ ದಿನಸಿ ಸಾಮಾನು ತಂದುಕೊಡುತ್ತಿದ್ದಳು. 9 ಗಂಟೆಗೆ ಎಲ್ಲರೂ ಊಟಕ್ಕೆ ರೆಡಿಯಾಗಿರುತ್ತಿದ್ದರು. ಊಟ ಮುಗಿಸಿ ಅವರು ತಮ್ಮ ನಾಳೆಯ ತಯಾರಿಗೆ ತೊಡಗಿದರೆ, ಗಂಡ ಹಾಸಿಗೆಗೆ ಹೋಗಿ ಕಾಯ ಲಾರಂಭಿಸುತ್ತಿದ್ದ; ನಾನೂ ನಾಳೆಯ ಉಪಾಹಾರ, ಊಟದ ಚಿಂತೆಯಲ್ಲಿ ಬೀಳುತ್ತಿದ್ದೆ. ಎಲ್ಲಾ ಮುಗಿಸುವಾಗ ಹತ್ತಾಗುತ್ತಿತ್ತು. ಮಕ್ಕಳು-ಕೆಲಸದ ಹುಡುಗಿ ಮಲಗುತ್ತಿದ್ದರು; ಗಂಡನೂ ಮಲಗಲು ಎಳೆಯುತ್ತಿದ್ದ; ನಾನು ಅತೃಪ್ತಿಯಿಂದ ಕೊರಗುತ್ತಿದ್ದೆ.

ಇಲಾಖೆಗೆ ಸಂಬಂಧಿಸಿದ ಒಂದೆರಡು ಕಾರ್ಯಕ್ರಮಗಳಲ್ಲಿ ನಾನು ಮಾತಾಡಿದೆ. ಈ ಹೆಂಗಸು ಚೆನ್ನಾಗಿ ಮಾತಾಡುತ್ತಾಳೆ ಎಂದು ಕೆಲವರಿಗೆ ಅನಿಸಿರಲೂ ಬಹುದು. ಸಹೋದ್ಯೋಗಿಗಳಿಗೆ ನನ್ನ ಜಾತಿ ಗೊತ್ತಾಗಿರಬೇಕು; ನಾಕಾರು ಜನ ಕೇಳಿದರು. ಮ್ಯಾಟರ್ ಆಫ್ ಫ್ಯಾಕ್ಟ್ ಎಂಬಂತೆ ನಾನು ಜಾತಿ ಹೇಳಿದೆ. ಕೆಲವರು ದೂರವಾದಂತೆನಿಸಿತು. ಆ ಬಗ್ಗೆ ಜಾಸ್ತಿ ಚಿಂತಿಸಲಿಲ್ಲ. ಅಂಥವರಿಗೂ 'ಜಾತಿ ನೋಡಿ ಹತ್ತಿರವಾಗುವುದು, ದೂರವಾಗುವುದು ಎರಡೂ ತಪ್ಪು; ವ್ಯಕ್ತಿಯ ಗುಣ, ಸ್ವಭಾವ, ಆಚಾರ, ವಿಚಾರ ನಮಗೆ ಇಷ್ಟವಾದರೆ ನಾವು ಸ್ನೇಹಿತರಾಗಬಹುದು' ಎಂದು ಮನಬಿಚ್ಚಿ ಹೇಳಿದೆ.

ಕಚೇರಿಯಲ್ಲಿ ದಲಿತ ಸಹೋದ್ಯೋಗಿಗಳು ತಮಗೆ ತಿಳಿದ ಅಂಬೇಡ್ಕರ್ ಸಂಘಗಳವರಿಗೆ ನನ್ನ ಬಗ್ಗೆ ಹೇಳಿದ್ದರೇನೊ. ಒಂದೆರಡು ಸಂಘಗಳ ಕಾರ್ಯದರ್ಶಿಗಳು ನನ್ನನ್ನು ಭೇಟಿಯಾದರು; ತಮ್ಮ ಕಾರ್ಯಕ್ರಮಗಳಿಗೆ ಬಂದು ಬಾಬಾಸಾಹೇಬರ ಬಗ್ಗೆ ಭಾಷಣ ಮಾಡಲು ಕರೆದರು. ನಾನೂ ಆಸಕ್ತಿಯಿಂದ ಹೋದೆ. ಅಲ್ಲಿ ಹಲವಾರು ಮುಖಂಡರು, ಯುವಜನರು, ಹೆಂಗಸರು, ವಿದ್ಯಾರ್ಥಿನಿಯರು ಪರಿಚಯವಾದರು.

ರತ್ನಾಗಿರಿಯಲ್ಲಿರುವಾಗಲೇ ನನಗೆ ಬಾಬಾಸಾಹೇಬರ 'ಬುದ್ಧ ಅಂಡ್ ಹಿಸ್ ಧಮ್ಮ' ಎಂಬ ಪುಸ್ತಕದ ಮರಾಠಿ ಆವೃತ್ತಿಯನ್ನು ಹರಿಶ್ಚಂದ್ರ ತಂದು ಕೊಟ್ಟಿದ್ದ. ಆಗ ಪೂರ್ಣವಾಗಿ ಮತ್ತು ಮನಸ್ಸುಗೊಟ್ಟು ಓದಲಾಗಿರಲಿಲ್ಲ. ಈಗ ಇಲ್ಲಿ ಇಂಥ ಸಭೆ-ಕಾರ್ಯಕ್ರಮಗಳಿಗೆ ಹೋಗಲಾರಂಭಿಸಿದ ಮೇಲೆ, ಆ ಪುಸ್ತಕವನ್ನು ಓದದೆ ಎಂಥ ತಪ್ಪು ಮಾಡಿದೆ ಎಂಬುದು ಮನದಟ್ಟಾಯಿತು. ಹಳೇ ಪುಸ್ತಕಗಳ ಕಟ್ಟಿನಲ್ಲಿಂದ ಅದನ್ನು ಹುಡುಕಿ ತೆಗೆದು ಓದಿದೆ. ರತ್ನಾಗಿರಿಯಲ್ಲಿದ್ದಾಗ ನಾಥೂರಾಂ ಕಾಂಬಳೆ, ಬಂಡೂ ಚವೇಕರ್, ಹರಿ ಭಾವು ಆಯರೆ ಮುಂತಾದವರ ಭಾಷಣ ಕೇಳಿದ್ದೆ. ಅದನ್ನೆಲ್ಲ ನೆನಪಿಸಿಕೊಂಡು, ಪುಸ್ತಕ ಅಭ್ಯಾಸ ಮಾಡಿ ಅಂಬೇಡ್ಕರ್ ಸಂಘಗಳ ಕಾರ್ಯಕ್ರಮಗಳಲ್ಲಿ ಭಾಷಣ ಮಾಡಿ ಭೇಷ್ ಎನಿಸಿಕೊಂಡೆ. ಆಗ ದಲಿತ ಹೆಣ್ಣುಮಕ್ಕಳು ಭಾಷಣಕಾರರಾಗಿ ಸಿಗುವುದೇ ದುಸ್ತರವಾಗಿದ್ದರಿಂದ, ಕೆಲವೇ ತಿಂಗಳಲ್ಲಿ ನಾನು ಉತ್ತಮ ಭಾಷಣಕಾರ್ತಿಯಾಗಿ ಹೆಸರುವಾಸಿಯಾದೆ.

ಗಂಡ-ಮಕ್ಕಳ ಜೊತೆಗೂಡಿ ಮೊದಲ ಬಾರಿಗೆ 'ಚೈತ್ಯ ಭೂಮಿ' ದರ್ಶನಕ್ಕೆ ಹೋದೆ. ಅಲ್ಲಿನ ಮಳಿಗೆಗಳಿಂದ ಹಲವಾರು ಪುಸ್ತಕಗಳನ್ನು ತಂದೆ. ಬಾಬಾಸಾಹೇಬರ ಜನ್ಮ ದಿನ ಏಪ್ರಿಲ್ 14 ಮತ್ತು ಪರಿನಿರ್ವಾಣ ದಿನ ಡಿಸೆಂಬರ್ 6ರಂದು ಕುಟುಂಬವರ್ಗದವರೊಂದಿಗೆ ತಪ್ಪದೇ ಅಲ್ಲಿಗೆ ಹೋಗಲಾರಂಭಿಸಿದೆ. ಪ್ರತಿ ಬಾರಿ ಹೋದಾಗ ಹತ್ತಾರು ಜನ ವಿಚಾರವಂತರ ಪರಿಚಯವಾಗುತ್ತಿತ್ತು. ಉಷಾ ವಾಘ್-ವಿಲಾಸ ವಾಘ್, ಇಲ್ಲೇ ಭೇಟಿಯಾಗಿ ಸ್ನೇಹಿತರಾದರು. ಅಂತರಜಾತಿ ವಿವಾಹವಾಗಿಯೂ, ದಲಿತ ಸಮಾಜದಿಂದ ದೂರವಾಗದ ಈ ದಂಪತಿ ತಮ್ಮ ಜೀವನವನ್ನೇ ಫುಲೆ-ಅಂಬೇಡ್ಕರ್ ವಿಚಾರ ಪ್ರಚಾರಕ್ಕೆ ಅರ್ಪಿಸಿಕೊಂಡವರು.

ಇಲ್ಲೇ ಭೇಟಿಯಾದವರಲ್ಲಿ ರಮೇಶ್ ಹರಳಕರ್ ಎಂಬ ಯುವಕನೂ ಒಬ್ಬ. ಶಿವಾಜಿ ಮಹಾರಾಜರ ಪಾತ್ರಕ್ಕೆ ಹೇಳಿ ಮಾಡಿಸಿದ ಮುಖಚರ್ಯೆ. ತಾನು 'ಸಫಾಯಿ ಕರ್ಮಚಾರಿ ಸಂಘ'ದ ಮುಖಂಡ ಎಂದು ಆತ ಪರಿಚಯಿಸಿಕೊಂಡ. ಆಸಕ್ತಿಯಿಂದ ಮಾತನಾಡಿದರೆ, ಸಫಾಯಿ ಕರ್ಮಚಾರಿಗಳಿಗೆ ಸಂಬಂಧಿಸಿದಂತೆ ಹತ್ತಾರು ಅಂಕಿ-ಅಂಶಗಳನ್ನು, ವರದಿಗಳ ಸಾರವನ್ನು ಹೇಳಿದ. ಅಗಾಧ ಕಾಳಜಿಯನ್ನು ವ್ಯಕ್ತಪಡಿಸಿದ. ತಾನೇ ಸಫಾಯಿ ಕರ್ಮಚಾರಿಯಾಗಿದ್ದ ಅನುಭವ ಆತನಿಗಿತ್ತು. ಇಂಥ ಯಾವ ಕಾಳಜಿಯನ್ನೂ ಹೊಂದಿರದ ನೂರಾರು ದಲಿತ ವಿದ್ಯಾವಂತ ನೌಕರ-ಅಧಿಕಾರಿಗಳನ್ನು ಕಂಡಿದ್ದೆ. ಅವರಲ್ಲಿ ನಾನೂ ಒಬ್ಬಳಾಗಿದ್ದೆ. ನಮ್ಮಂಥವರ ಬಗ್ಗೆ ಬೇಸರ ಮೂಡಿತು.


* * *

ಕಚೇರಿ ಕೆಲಸದ ಭಾಗವಾಗಿ ನನ್ನನ್ನು ತರಬೇತಿಗೆ ನಿಯೋಜಿಸಲಾಯಿತು. ಹಾಗಾಗಿ ಕಚೇರಿ ಕೆಲಸದಿಂದ ಕೆಲಕಾಲ ವಿನಾಯ್ತಿ ಸಿಕ್ಕಿತು. ತರಬೇತಿಯು ನಿಗದಿತ ಕಾಲದಲ್ಲಿ ಇರದ್ದರಿಂದ, ನನಗೆ ಸಾಕಷ್ಟು ಸಮಯ ಸಿಗತೊಡಗಿತು. ಇದನ್ನು ಪುಸ್ತಕ ಓದುವುದರಲ್ಲಿ ವಿನಿಯೋಗಿಸಿದೆ; ಕಥೆ-ಲೇಖನಗಳನ್ನು ಬರೆಯುವುದಕ್ಕೆ ಸಹಾಯವಾಯಿತು. ಬಿಡುವು ದೊರೆತಾಗ ಏಕಾಂತದಲ್ಲಿದ್ದು ನನ್ನ ಗ್ರಾಮೀಣ ಬಾಲ್ಯ, ತಾರುಣ್ಯದ ದಿನಗಳನ್ನು, ನಗರ ಜೀವನದಲ್ಲಿ ಪತ್ನಿಯ ಪಾತ್ರವನ್ನು ಮೆಲಕು ಹಾಕತೊಡಗಿದೆ. ನನ್ನ ಸಂಪರ್ಕಕ್ಕೆ ಬಂದ ಗ್ರಾಮೀಣ ಮತ್ತು ನಗರವಾಸಿ ಮಹಿಳೆಯರ ಜೀವನ ಪದ್ಧತಿಯನ್ನು ಕಣ್ಣ ಮುಂದೆ ತಂದುಕೊಂಡೆ. ದಲಿತ ಬಾಲಕಿಯಾಗಿ, ಮಹಿಳೆಯಾಗಿ ಮನೆಯ, ಜಾತಿಯ ಹಾಗೂ ಬೇರೆ ಜಾತಿಯ ಗಂಡಸು-ಹೆಂಗಸರ ಜೊತೆಗಿನ ಸಂದರ್ಭಗಳಲ್ಲಿ ಆದ ಅನುಭವವನ್ನು ಮತ್ತೆ ಅನುಭವಿಸಿದೆ. ಇವೆಲ್ಲಾ ಭಯಾನಕ, ಯಾತನಾಮಯ ಕ್ಷಣಗಳಾಗಿದ್ದವು. ಪ್ರತಿಯೊಂದನ್ನು ಪುನರ್ ಬದುಕಲು ಹವಣಿಸುತ್ತಾ, ಅಕ್ಷರಗಳಿಗೆ ತರುವ ಪ್ರಯತ್ನ ಮಾಡಿದೆ.

ನನ್ನ ಹಾಗೆ ತರಬೇತಿಗೆ ನಿಯೋಜನೆಗೊಂಡಿದ್ದ ನನ್ನ ಸಹೋದ್ಯೋಗಿ ರಾವೂತ್. ನಾನು ಕಥೆಗಳನ್ನು ಬರೆಯುವ ವಿಷಯ ಆತನಿಗೆ ತಿಳಿದಿತ್ತು. ತರಬೇತಿ ಮುಗಿದ ಕೂಡಲೇ ಬಹುತೇಕ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಅಥವಾ ಕೆಲಸ ಕಾರ್ಯಗಳಿಗೆ ತೆರಳಿಬಿಡುತ್ತಿದ್ದರು. ಆದರೆ ನಾನು ಮಾತ್ರ ನಾಲ್ಕಾರು ಗಂಟೆ ಅಲ್ಲೇ ಕುಳಿತು ಒಬ್ಬಳೇ-ಓದು-ಬರಹ ಮಾಡುತ್ತಿದ್ದೆ. ಒಂದು ದಿನ ಈ ರಾವೂತ್ ನನ್ನ ಬಳಿ ಬಂದು 'ನನಗೆ ದತ್ತಾರಾಮ್ ಬಾರಸ್ಕರ್ ಎಂಬ ಕತೆಗಾರರು ಗೊತ್ತಿದ್ದಾರೆ. ಅವರನ್ನು ನಿಮಗೆ ಪರಿಚಯ ಮಾಡಿ ಕೊಡ್ತೀನಿ; ನೀವು ಅವರೊಂದಿಗೆ ಚರ್ಚಿಸಬಹುದು, ನಿಮ್ಮ ಕತೆಗಳನ್ನು ಅಭಿಪ್ರಾಯ ಮತ್ತು ಮಾರ್ಗದರ್ಶನಕ್ಕಾಗಿ ಅವರಿಗೆ ಕೊಡಬಹುದು' ಎಂದರು. ನನಗೂ ಈ ಸಲಹೆ ಇಷ್ಟವಾಯಿತು. ರಾವೂತ್‌ರಿಗೆ ಧನ್ಯವಾದಗಳನ್ನು ಹೇಳಿ 'ಅಷ್ಟು ಮಾಡಿದರೆ ಪ್ರೋತ್ಸಾಹಿಸಿದಂತಾಗುತ್ತದೆ' ಎಂದೆ.

(ಮುಂದುವರಿಯುವುದು)

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2010-12



ಬಯಲು

ಬಿಚ್ಚಿದ್ದು ಕೇಳುವುದಿಲ್ಲ
ಬಚ್ಚಿಡು ಎಂದರು
ಇಡುತ್ತಲೇ ಬಂದಿದ್ದೇನೆ
ಇವತ್ತು ಸಾಕೆನಿಸಿದೆ
ಕೂಗಿ ಹೇಳಬೇಕೆಂದಿದ್ದೇನೆ.

ನಗುವ ನಿನ್ನನ್ನು
ನಂಬುವುದಿಲ್ಲ ಎಂದರು
ಮರೆತುಬಿಟ್ಟೆ
ಗಹಗಹಿಸಿ ನಕ್ಕು
ತಟ್ಟೆ ಹಾರಿಸಬೇಕೆಂದಿದ್ದೇನೆ

ಎದೆ ಬಂದಾಗ ನೆಲ
ಕಾಣುವುದಿಲ್ಲ ಎಂದರು
ಕತ್ತು ನೋಯಿಸಿಕೊಂಡೆ
ನರ ತುಂಡಾಗುವಂತೆ
ತಲೆಯೆತ್ತಿ ಕೊಡವಬೇಕೆಂದಿದ್ದೇನೆ.

ಮಾಯಾ ಎಂದು
ಹೆಸರಿಟ್ಟು ಕರೆದರು
ಓಗೊಟ್ಟು ಬಳಿಬಂದೆ
ದೂರ... ಓಡಿ ಓಡಿ
ಬಯಲಲ್ಲಿ ಬತ್ತಲಾಗಬೇಕೆಂದಿದ್ದೇನೆ.

■ ವಿಜಯಶ್ರೀ ಹಾಲಾಡಿ

Registered
Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018